ಪ್ರೇಷಿತ ಪ್ರಪಂಚ

ಸಂಪುಟ ೩೮ ೧೯೮೩ ಡಿಸೆಂಬರ್ ಸಂಚಿಕೆ ೫



ವಿಷಯ ಸೂಚಿ

೧. ಅಮೆರಿಕದ ನಗರಗಳ ವೈಭವ—ಕೆ. ಆರ್. ಉಡುಪ ೧
೨. ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ—ಕೆ. ಶಾಂತಯ್ಯ ೧೧
೩. ದೇವಾಲಯಗಳು—ಎನ್. ಬಸವಾರಾಧ್ಯ ೧೮
೪. ಮುಖರ್ಜಿ ಪತ್ತೆ ಮಾಡಿದ ಶಾಸ್ತ್ರ—ಹ. ಲ. ಶ್ರೀಕಂಠಮೂರ್ತಿ ೨೨
೫. ಸರಿಸಮಾನರು—ಶಂಸಐತಾಳ ೨೪
೬. ಕರ್ತವ್ಯ ನಿಷ್ಠೆ—ಡಾ|| ಬಿ. ನಂ. ಚಂದ್ರಯ್ಯ ೩೨
೭. ನಮ್ಮ ಜೀವನದ ಮಹತ್ತರ ಶಕ್ತಿ–ಮಾನಸ ಚುಂಬಕ
—ಡಿ. ಎನ್. ಶ್ರೀನಾಥ್ ೪೫
೮. ಜೇನುಗಳು ಜಗಿಯುತ್ತವೆ!—ಡಾ|| ಎಸ್. ಎನ್. ಹೆಗಡೆ ೫೨
ಪುಸ್ತಕ ವಿಮರ್ಶೆ—೧) ಯೋಗಾಚಾರ್ಯ ಕೆ. ಕೇಶವಮೂರ್ತಿ ೬೦
೨) ಕೃಷ್ಣ ಹಾಸನ

ಮುಖಚಿತ್ರ : ಏಸುಕ್ರಿಸ್ತ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಡಿಸೆಂಬರ್ ೧೯೮೩ ಸಂಚಿಕೆ ೫

ಅಮೆರಿಕದ ನಗರಗಳ ವೈಭವ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ವಾಶಿಂಗ್ಟನ್ : ಮುಂದಿನ ವಾರದಲ್ಲಿ ಅಮೆರಿಕಾದ ರಾಜಧಾನಿ ವಾಶಿಂಗ್ಟನ್ ಸಂದರ್ಶನಕ್ಕೆ ಹೋಗುವುದೆಂದು ನಿಶ್ಚಯಿಸಿದೆವು. ಹಾಗೆ ಒಂಬತ್ತು ಜನರ ಸಂಸಾರ ಸಮೇತ ಹೊರಟೂ ಹೋದೆವು. ದಾರಿಯಲ್ಲಿ ಜನತುಂಬಿದ ನಮ್ಮ ದೊಡ್ಡ ಕಾರು ನೋಡಿ ಹೆಚ್ಚಿನವರಿಗೆ ಆಶ್ಚರ್ಯ. ಏಕೆಂದರೆ, ಅಲ್ಲಿಯ ಕಾರುಗಳಲ್ಲಿ ಪ್ರಾಯಶಃ ಒಬ್ಬರೇ ಪ್ರಯಾಣಗೈಯುವುದು. ತಪ್ಪಿದರೆ ಪ್ರೇಯಸಿ ಮತ್ತು ನಾಯಿ; ಅದಕ್ಕೆ ಮಿಕ್ಕಿ ಕಾರಲ್ಲಿ ಜನ ಸಾಗುವುದೇ ಅಪರೂಪ. ನಾವಂತು, ಸಂತೋಷದಿಂದ ಹರಟುತ್ತಾ ಹೊರಟೆವು.

ವಾಶಿಂಗ್ಟನ್ನಿನಲ್ಲಿ ಸುಧಾಕರನ ಪರಮಮಿತ್ರ ಚಂದ್ರು ಅಥವಾ ಚಂದ್ರಶೇಖರ್ ಎಂಬವರಿದ್ದಾರೆ. ಅವರ ದೊಡ್ಡ ಮನೆ ಇದ್ದುದರಿಂದ ಅಲ್ಲಿರಲಿಕ್ಕೆ ಅನುಕೂಲವಾಗಲಿದೆ—ಎಂದು ತಿಳಿಯಿತು. ಸುಧಾಕರ ಹಿಂದೆ ಮೈಸೂರಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಆತ ಮತ್ತು ಚಂದ್ರಶೇಖರ್ ಒಟ್ಟಿಗೇ ಇದ್ದರು. ಕೃಷ್ಣಮೂರ್ತಿಪುರದ ಒಂದು ಕಿರುಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು. ಚಂದ್ರಶೇಖರ್ ಜೆ. ಸಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಅಧ್ಯಾಪಕರಾಗಿದ್ದರು. ಇವರಿಬ್ಬರಿಗೂ 'ಗಳಸ್ಯ ಕಂಠಸ್ಯ' ಸ್ನೇಹ. ನಾನು ಸಹ ಕೆಲಸಲ ಮೈಸೂರಿಗೆ ಹೋದಾಗ ಇವರ ಕಿರುಸಂಸಾರದ ಆತಿಥ್ಯ ಪಡೆದು ಬಂದಿದ್ದೆ.

ಆನಂತರ ಚಂದ್ರು ಅಲ್ಲಿಯ ಕೆಲಸ ಬಿಟ್ಟು ಅಮೆರಿಕಾ ಸೇರಿದರು. ನ್ಯೂಯಾರ್ಕಿನಲ್ಲಿ ಉಚ್ಚಶಿಕ್ಷಣ ಪಡೆದು ಮುಂದೆ ಬಂದರು. ಹಾಗೆಯೇ ಹುದ್ದೆಗಳಲ್ಲಿ ಮೇಲೇರಿಬರುತ್ತ ಈಗ ವಿದ್ಯುತ್ಸಂಪರ್ಕ ಒದಗಿಸುವ ಬಹುದೊಡ್ಡ ಕಂಪೆನಿಯ ವೈಸ್‌ಪ್ರೆಸಿಡೆಂಟರಾಗಿ ಮೆರೆಯುತ್ತಿದ್ದಾರೆ. ವಾಶಿಂಗ್ಟನ್ ಸಿಟಿ

ಯಿಂದ ೧೦-೧೨ ಮೈಲು ದೂರದ ಸುಂದರ ವಾತಾವರಣದಲ್ಲಿ ವಿಶಾಲವಾದ ಸ್ವಂತಮನೆಯಲ್ಲಿದ್ದಾರೆ. ೨-೩ ಕಾರುಗಳು, ಮನೆ ತುಂಬ ಜನ ಕೂಡಿಕೊಂಡು ಚೆನ್ನಾಗಿದ್ದಾರೆ. ತಾನು ಮುಂದುಬಂದೊಡನೆಯೇ ಚಂದ್ರಶೇಖರ್, ತನ್ನ ತಮ್ಮ, ತಂಗಿಯರು, ಅವರ ಗಂಡಂದಿರು, ಹೆಂಡತಿಯ ತಮ್ಮ, ತಂಗಿಯರು—ಮುಂತಾದವರನ್ನೆಲ್ಲ ಭಾರತದಿಂದ ಬರಿಸಿಕೊಂಡಿದ್ದಾರೆ. ಮನೆಯಲ್ಲಿ ಐದಾರು ಜೋಡಿ, ಅವರ ಮಕ್ಕಳು—ಎಲ್ಲ ಸೇರಿಕೊಂಡಿದ್ದಾರೆ. ಪ್ರತಿಯೊಬ್ಬರೂ ಒಂದಲ್ಲ ಒಂದು ಉದ್ಯೋಗದಲ್ಲಿದ್ದಾರೆ. ಇವರು ಸಹ ಕೆಲಸ ಮಾಡುವಾಗ ಅಮೆರಿಕಾ ಜನರಂತೆ, ಮೇಲುಕೀಳೆಂಬ ಮನೋಭಾವ ಇಟ್ಟುಕೊಂಡಿಲ್ಲ. ಎಲ್ಲರೂ ದುಡಿದು, ಚಂದ್ರುವಿನ ವಿಶಾಲ ವಟವೃಕ್ಷದ ನೆರಳಲ್ಲಿ ನೆಮ್ಮದಿಯಾಗಿದ್ದಾರೆ. ಅಂತು, ನಮಗೂ ಅಮೆರಿಕಾದಲ್ಲಿ ಮಿನಿಮೈಸೂರು ಕಂಡಂತಾಯಿತು.

ಅವರ ಮನೆಗೆ ಮೊದಲೇ ತಿಳಿಸಿದ್ದಂತೆ ನಾವು ಸಹ ಹೋಗಿ ಸೇರಿದೆವು. ೨-೩ ದಿನ ಅವರ ಆದರದ ಆತಿಥ್ಯ ಅನುಭವಿಸಿದೆವು. ವಾಶಿಂಗ್ಟನ್ ಮಹಾನಗರದ ಸಂದರ್ಶನಗೈದು ಅಪಾರ ಅನುಭವ ಗಳಿಸಿದೆವು.

ಮೊದಲ ದಿನ ಚಂದ್ರು ಅವರ ಭಾವ ನಾಗರಾಜ ಅವರು ತಮ್ಮ ಸ್ಟೇಶನ್ ವ್ಯಾಗನ್ನಿನಲ್ಲಿ ವಾಶಿಂಗ್ಟನ್ನಿಗೆ ನಮ್ಮನ್ನು ಕರೆದೊಯ್ದರು. ಬೇರೆ ಬೇರೆ ವಿಶಾಲ ಭವ್ಯ ಸ್ಮಾರಕ ಮಂದಿರಗಳನ್ನು ತೋರಿಸಿದರು. ಆ ರಾಜಧಾನಿಯಲ್ಲಿ ಹಿಂದೆ ಆಗಿ ಹೋಗಿದ್ದ ಸುಪ್ರಸಿದ್ಧ ರಾಷ್ಟ್ರಾಧ್ಯಕ್ಷರ ಭವ್ಯ ಸ್ಮಾರಕ ಭವನಗಳನ್ನು ನಿರ್ಮಿಸಿ, ಅವರ ದೊಡ್ಡ ವಿಗ್ರಹಗಳನ್ನೂ ಸ್ಥಾಪಿಸಿದ್ದಾರೆ. ಸುತ್ತ ಸುಂದರ ವಾತಾವರಣ ಕಲ್ಪಿಸಿ ರಾಷ್ಟ್ರದ ಜನತೆ ಕೃತಜ್ಞತೆಯನ್ನರ್ಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಥಮ ಸುಪ್ರಸಿದ್ಧ ಅಧ್ಯಕ್ಷ ವಾಶಿಂಗ್ಟನ್ ಹೆಸರಲ್ಲೇ ಆ ಮಹಾನಗರ ನಿರ್ಮಾಣಗೊಂಡಿದೆ. ಜಾಫರ್‌ಸನ್ ಮೆಮೋರಿಯಲ್, ಲಿಂಕನ್ ಮೆಮೋರಿಯಲ್, ಕೆನೆಡೀ ಮೆಮೋರಿಯಲ್ ಹಾಲ್—ಈ ಮೊದಲಾದ ಸ್ಮಾರಕ ಸುಂದರ ಭವನಗಳನ್ನು ನೋಡಿದೆವು. ಅವರ ಸಾಧನೆ, ಸಂದೇಶಗಳನ್ನು ತಿಳಿದುಕೊಂಡೆವು. ಇವಲ್ಲದೆ ಮನೋಹರ ಎತ್ತರದ ಜಾಗದಲ್ಲಿ ನಿರ್ಮಿತವಾದ ೭೦೦ ಅಡಿ ಎತ್ತರದ ಯುದ್ಧ ಸ್ಮಾರಕ ಸ್ತೂಪ (War-Memorial)ವನ್ನು ನೋಡಿ ವಿಸ್ಮಯಗೊಂಡೆವು. ದೇಶಕ್ಕಾಗಿ ಪ್ರಾಣತೆತ್ತ ಸಹಸ್ರಾರು ಯೋಧರಿಗೆ ಶ್ರದ್ಧಾಂಜಲಿಯನ್ನು ಅಮೆರಿಕಾದ ಜನತೆ ಈ ಮೂಲಕ ಅರ್ಪಿಸಿದೆ. ಈ ಸ್ತೂಪದ ಶಿಖರಕ್ಕೇರಿ ಇಡೀ ನಗರ ಮತ್ತು ಸುತ್ತಮುತ್ತಣ ವಿಶಾಲ ಪ್ರದೇಶಗಳನ್ನು ನೋಡಲವಕಾಶವಿದೆ. ನಾವು ಸಹ ಮೇಲೇರಿ ಹೋಗಿ ಮನ ತಣಿಸಿಕೊಂಡೆವು.

ಅಲ್ಲಿಂದ ಅಮೆರಿಕಾದ ಮಾತ್ರವೇ ಅಲ್ಲ; ಇಡೀ ಜಗತ್ತಿನ ಭವಿಷ್ಯವನ್ನೇ ನಿರ್ಣಯಿಸಲಿರುವ ಅಮೆರಿಕಾದ ಅಧ್ಯಕ್ಷರ ವಾಸಭವನ—ಶ್ವೇತಭವನ ನೋಡಿದೆವು. ರಾಷ್ಟ್ರದ ಆಡಳಿತ ವಿಚಾರಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವ ಸೆನೆಟ್ ಸಭೆ ಸೇರುವ 'ಕ್ಯಾಪಿಟಲ್' ಮಹಾಸೌಧವನ್ನು ಸಂದರ್ಶಿಸಿದೆವು. ಅಲ್ಲಿಂದ ಜಗತ್ತಿನ ವಿವಿಧ ರಾಷ್ಟ್ರಗಳ ರಾಯಭಾರಿಗಳಿರುವ ಪ್ರಮುಖ ರಸ್ತೆ, ಅಲ್ಲಿರುವ ಭಾರತೀಯ ರಾಯಭಾರಿಭವನ ಇವನ್ನೆಲ್ಲ ನೋಡಿ ಸಂತೃಪ್ತಿಪಡೆದೆವು. ಎಲ್ಲಿ ಹೋದರೂ ಆಸಕ್ತಿ ಆದರಗಳಿಂದ ತುಂಬಿದ ಜನಸಮೂಹ, ಅವನ್ನೆಲ್ಲ ನೋಡಿ ಆನಂದಪಡುತ್ತಿದ್ದರು. ಇವುಗಳ ನಿರ್ಮಾಣಕ್ಕಾಗಿ ಅಪಾರ ಶ್ರದ್ಧೆವಹಿಸಿ ಸಾಕಷ್ಟು ವೆಚ್ಚಗೈದವರಿಗೆ ಇದು ತೃಪ್ತಿಯನ್ನುಂಟುಮಾಡಿರಬೇಕು.

ಐದು ದಿನ ದುಡಿಯುವುದು, ವಾರಾಂತ್ಯದಲ್ಲಿ ಪ್ರವಾಸ ಹೋಗುವುದು, ಕುಣಿದಾಡಿ ಆನಂದಿಸುವುದು—ಆ ಮೂಲಕ ಹೊಸ ಜ್ಞಾನ, ಚೈತನ್ಯಗಳಿಸಿ ಮತ್ತೆ ಪುನಃ ಚೆನ್ನಾಗಿ ದುಡಿಯುವುದು—ಇವೆಲ್ಲ ಅಮೆರಿಕನ್ನರ ರಕ್ತಗತಗುಣವೆಂದು ಹೇಳಬಹುದು. ದುಡಿಯಲೂ ಗೊತ್ತಿಲ್ಲದ, ಸುಖಪಡಲೂ ಅರಿಯದ ಭಾರತೀಯರಾದ ನಾವು ಈ ಗುಣವನ್ನೇಕೆ ಅನುಕರಿಸಲು ಪ್ರಯತ್ನಿಸಬಾರದೆಂದೂ ಒಮ್ಮೆ ತೋರಿತು.

ಅಂತು, ಒಂದು ದಿನವಿಡೀ ಸುತ್ತಾಡಿ ಸಾಯಂಕಾಲ ಮನೆ ಸೇರಿದೆವು. ಬೇಸಗೆಯಲ್ಲಿ ಸಾಯಂಕಾಲ ಒಂಭತ್ತು ಘಂಟೆಗೇ ಅಲ್ಲಿ ಕತ್ತಲಾಗುವುದು. ಬೆಳಕಿದ್ದರೂ ಘಂಟೆ ನೋಡಿ ಊಟ ಮಾಡಿ ನಿದ್ರೆಹೋದೆವು.

ವಾಶಿಂಗ್ಟನ್ನಿನ ಹಲವಾರು ವಸ್ತುಪ್ರದರ್ಶನಾಲಯಗಳು ಜಗತ್ಪ್ರಸಿದ್ಧವಾದುವುಗಳು. ಮರುದಿನ ಅವನ್ನು ನೋಡಲೋಸುಗ ಹೊರಟೆವು. ಅಲ್ಲಿನ ಪ್ರಾಕೃತಿಕ ಚರಿತ್ರೆಯ ವಸ್ತುಪ್ರದರ್ಶನಾಲಯ ನೋಡಹೊರಟರೆ ಅದೊಂದು ಮಿನಿಪ್ರಪಂಚವೇ ಆಗಿತ್ತು. ಆದಿ ಅಮೆರಿಕನ್ನರ ಜೀವನದಿಂದ ಹಿಡಿದು, ಇಂದಿನ ನವನಾಗರಿಕನ ನವಜೀವನದವರೆಗಿನ ಎಲ್ಲ ವಿಚಾರಗಳನ್ನೂ ಅಲ್ಲಿ ಕಣ್ಣಾರೆ ಕಾಣುವ ವ್ಯವಸ್ಥೆ ವಿಸ್ಮಯಕರವಾಗಿತ್ತು. ವೇಷ, ಭೂಷಣ, ಜೀವನ, ವಾಹನ, ವ್ಯವಹಾರ ಮುಂತಾದ ವಿಚಾರದಲ್ಲಿಯ ಬೆಳವಣಿಗೆಯನ್ನು ಕಾಣಬಹುದು. ಕೈಗಾಡಿಯಿಂದ ಹಿಡಿದು ಇಂದಿನ ಜೆಟ್ ವಿಮಾನಗಳವರೆಗೆ, ತೇಲುವ ತೆಪ್ಪದಿಂದ ಹಿಡಿದು ಇಂದಿನ ಮಹಾ ಯುದ್ಧನೌಕೆಯವರೆಗೆ—ಎಲ್ಲವನ್ನೂ ನೋಡಬಹುದು. ಸರಿಯಾಗಿ ಆ ಒಂದು ವಸ್ತುಪ್ರದರ್ಶನ ನೋಡಬೇಕಾದರೆ ಒಂದು ವಾರದ ಅವಧಿಯಾದರೂ ಬೇಕು. ಅಲ್ಲಿರುವ ಏಳೆಂಟು ವಸ್ತುಪ್ರದರ್ಶಗಳ ಎಲ್ಲ

ವಸ್ತುಗಳ ಮುಂದೆ ಒಂದೊಂದು ನಿಮಿಷ ಕಳೆದರೂ ೩೬೫ ದಿನಗಳು ಬೇಕೆಂಬು ದಾಗಿ ಅಲ್ಲಿನವರು ಹೇಳುತ್ತಾರೆ. ಅವು ಅಷ್ಟು ವಿಸ್ತಾರವಾದ ವಸ್ತುಪ್ರದರ್ಶನಾ ಲಯಗಳು.

ಬಾಹ್ಯಾಕಾಶ ವಸ್ತುಪ್ರದರ್ಶನಾಲಯ ನೋಡಿದರೆ ಮಾನವನ ಅದ್ಭುತಾ-ದ್ಭುತ ಸಾಧನೆಗಳ ಸೂಕ್ಷ್ಮಪರಿಚಯ ಒದಗುವ ವ್ಯವಸ್ಥೆ ಇದೆ. ಮೊದಲಬಾರಿ ಆಕಾಶಕ್ಕೇರಿದ ಗಗನಯಾನದಿಂದ ಹಿಡಿದು ಚಂದ್ರಲೋಕಕ್ಕೇರಿ ಇಳಿದು ಬಂದ ಅಪೊಲೊ ಆಕಾಶ ನೌಕೆಯವರೆಗಿನ ಎಲ್ಲ ಅದ್ಭುತ ವಿಚಾರಗಳ ಪ್ರದರ್ಶನದ ಸುಂದರ ವ್ಯವಸ್ಥೆ ಮಾಡಿದ್ದಾರೆ. ಚಂದ್ರಲೋಕದಲ್ಲಿಳಿದು ಬಂದ ಗಗನನೌಕೆ, ಅಲ್ಲಿಯ ಕಲ್ಲುಮಣ್ಣು—ಮುಂತಾದುವನ್ನೂ ಕಾಣಬಹುದು.

ನಂತರ, ಆ ಮಹಾಭವನದ ಐದಾರು ಅಂತಸ್ತುಗಳನ್ನು ವ್ಯಾಪಿಸಿರುವ ಮೂರು ಆಯಾಮಗಳ ಸಿನೇರಮಾ ಪರದೆಯ ಮೂಲಕ, ನಾವೇ ಆಕಾಶಕ್ಕೇರಿ ನೋಡಿಬರುವ ಅನುಭವವಾಗುವ ತರಹ ಚಲಚಿತ್ರ ಪ್ರದರ್ಶನದ ವ್ಯವಸ್ಥೆ ಮಾಡಿದ್ದಾರೆ. ಕುರ್ಚಿಯಲ್ಲಿ ಗಟ್ಟಿಯಾಗಿ ಕುಳಿತ ನಾವು ಮೇಲೇರುವ ತರದ ಅನುಭವವಾಗಿ ಕಿರುಚಿಕೊಳ್ಳುವಂತೆಯೂ ಆಗುತ್ತದೆ. ಪ್ರಪಂಚ ಸುತ್ತಾಡಿ ಭಾರತದರ್ಶನ, ತಾಜಮಹಲ್, ಕುತುಬ್‌ಮಿನಾರ್, ಸಮುದ್ರತೀರ, ಕೇರಳದ ಸುಂದರ ಕರಾವಳಿ—ಇವನ್ನೆಲ್ಲ ನಾವು ಆಕಾಶಯಾನದಲ್ಲಿದ್ದು ನೋಡುತ್ತಿರು ವಂತಹ ಅದ್ಭುತ ಅನುಭವ ಒದಗುತ್ತದೆ. ಇಂತಹ ವಿಸ್ಮಯಕಾರೀ ಚಲಚಿತ್ರ ಗಳ ಮೂಲಕ ನಮಗೂ ಮಿನಿಗಗನಯಾನದ ಪರಿಚಯವಾಗುವಂತೆ ವ್ಯವಸ್ಥೆ ಗೈದಿದ್ದಾರೆ. ಎಲ್ಲ ಮುಗಿದು ಹೊರಬರುವಾಗ ನಾವೆಲ್ಲಿದ್ದೇವೆ—ಎಂದು ಅರ್ಥ ಮಾಡಿಕೊಳ್ಳಲು ಸ್ವಲ್ಪ ಕಷ್ಟವಾಯಿತು. ಅಂತಹ ಅದ್ಭುತ ಅನುಭವ!

ಅಂತು ಕತ್ತಲಾಗುವಾಗ ಮನೆ ಸೇರಿದೆವು. ರಾತ್ರೆ—ನಾನು ಭೂಮಿಬಿಟ್ಟು, ಆಕಾಶಕ್ಕೇರಿ, ಬಹುದೂರ ಸುತ್ತಾಡಿ, ಗಟ್ಟಿಯಾಗಿ ಕಿರುಚಿ—ಎಚ್ಚರಗೊಂಡಾಗ ಚಂದ್ರುವಿನ ಮನೆಯ ಹಾಸಿಗೆಯಲ್ಲಿ ಬೆವರಿ ಹೊರಳಾಡುತ್ತಿದ್ದೆ.

ಹೀಗೆ ಎರಡು ದಿನಗಳ ವಾಶಿಂಗ್ಟನ್ ಸಂದರ್ಶನ ಮುಗಿಸಿದೆವು. ಮರುದಿನ ಬೆಳಗ್ಗೆ ಅವರಿಗೆಲ್ಲ ಹೃತ್ಪೂರ್ವಕ ಧನ್ಯವಾದ ಹೇಳಿ ಮನೆಯತ್ತ ಮರುಪ್ರಯಾಣ ಮಾಡಿದೆವು. ಚಂದ್ರುಮನೆಯಲ್ಲಿರುವ ವೇಳೆ ವೀಡಿಯೋ ಕ್ಯಾಸೆಟ್ ಮೂಲಕ ನಾಲ್ಕಾರು ಭಾರತೀಯ ಚಲಚ್ಚಿತ್ರ (ನೀಂಡುಂ ಕೋಕಿಲ, ಶಂಕರಾಭರಣ, ಅಮರದೀಪ್, ಸಟ್ಟೇಮೇ ಸಟ್ಟೇ—ಇತ್ಯಾದಿ)ಗಳನ್ನೂ ನೋಡಿ ಸಂತೋಷ ಪಟ್ಟಿದ್ದೆವು.

ಸಾಯಂಕಾಲ ಮನೆ ಸೇರಿದಾಗ ನಮ್ಮ ಅನುಭವ ಭಂಡಾರ ಮತ್ತಷ್ಟು ಸಮೃದ್ಧವಾಗಿ ಸಂತೃಪ್ತಿ ಹೊಂದಿದೆವು.

ನ್ಯೂಯಾರ್ಕ್ : ಮತ್ತೊಂದು ವಾರ ಅಮೆರಿಕಾದ ಅತ್ಯಂತ ದೊಡ್ಡ ನಗರ ನ್ಯೂಯಾರ್ಕ್‌ನ್ನು ನೋಡಿಬರಲು ಸಿದ್ಧತೆಗಳಾದುವು. ಒಂದು ಶನಿವಾರ ಸಪರಿವಾರ ಹೊರಟೇಬಿಟ್ಟೆವು. ಸಾಮಾನ್ಯ ಮೂರು ಘಂಟೆಗಳ ಪ್ರಯಾಣದ ನಂತರ ಗಗನಚುಂಬಿ ಕಟ್ಟಡಗಳ ಮಹಾನಗರ ನ್ಯೂಯಾರ್ಕನ್ನು ಸೇರಿದೆವು.

ಇಲ್ಲಿಯ ಜನಸಂಖ್ಯೆ ಏಳು ಮಿಲಿಯಕ್ಕೂ ಮಿಕ್ಕಿದೆ. ಅಂದರೆ ನಮ್ಮ ಮುಂಬಯಿಗಿಂತ ಜನಸಂಖ್ಯೆಯಲ್ಲಿ ದೊಡ್ಡದಲ್ಲ. ಇಲ್ಲಿ ೧೫ ಸಾವಿರ ಬಹು ಅಂತಸ್ತಿನ ಗೃಹಸಮೂಹಗಳ ಕಟ್ಟಡಗಳು ಇವೆಯಂತೆ. ಒಂದೊಂದು ಕಟ್ಟಡಗಳೂ ಸಾಮಾನ್ಯ ಒಂದು ಮಿನಿನಗರವಿದ್ದಂತೆ. ಜಗತ್ತಿನ ಅತ್ಯಂತ ವಿಶಾಲ ಹಾಗೂ ಎತ್ತರದ ವರ್ಲ್ಡ್ ಟ್ರೇಡ್ ಸೆಂಟರ್ ಮತ್ತು ಎಂಪಾಯರ್ ಸ್ಟೇಟ್ ಬಿಲ್ಡಿಂಗ್ ಈ ಮಹಾನಗರದಲ್ಲಿದೆ. ಇದು ೧೩೫೦ ಅಡಿ ಎತ್ತರವಿದ್ದು ೧೧೦ ಮಹಡಿಗಳನ್ನು ಹೊಂದಿರುವ ದೈತ್ಯಾಕಾರದ ದೇವನಗರಿ ಎನ್ನಬಹುದು. ಚಿಕಾಗೋ ನಗರದಲ್ಲಿರುವ 'ಸೀಯರ್ಸ್ ಟವರ್' ಎತ್ತರದಲ್ಲಿ ಇದನ್ನು ಸ್ವಲ್ಪ ಮೀರಿದ್ದರೂ ವೈಶಾಲ್ಯದಲ್ಲಿ ಇದೇ ಅತ್ಯಂತ ದೊಡ್ಡದು. ಎಲ್ಲ ವಿಚಾರಗಳಲ್ಲೂ ಜಗತ್ತಿನ 'ಅತ್ಯುತ್ಕೃಷ್ಟ'ಗಳ ಮಹಾನಗರ ಇದು.

ಈ ನಗರದಲ್ಲೇ ಪ್ರಪಂಚದ ಆಗುಹೋಗುಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವ ವಿಶ್ವಸಂಸ್ಥೆಯ (U.N.O.) ಮಹಾಭವನವಿರುವುದು. ಇದು ಎರಡನೆಯ ಅತಿ ಎತ್ತರದ ಕಟ್ಟಡವಂತೆ. ವಾಶಿಂಗ್ಟನ್‌ನಗರ (ರಾಷ್ಟ್ರದ ರಾಜಧಾನಿ)ದಲ್ಲಿ ಶ್ವೇತಭವನಕ್ಕಿಂತ ಎತ್ತರದ ಕಟ್ಟಡ ಏರಿಸಬಾರದೆಂಬ ನಿಯಮವಿದೆಯಂತೆ. ಹಾಗಾಗಿ ಅಲ್ಲಿಯ ಕಟ್ಟಡಗಳೆಲ್ಲ ವಿಶಾಲವಾಗಿವೆಯಲ್ಲದೆ ಬಹಳ ಎತ್ತರವಾಗಿಲ್ಲ. ಇಲ್ಲಿಯಾದರೆ, ಇನ್ನು ಎತ್ತರಕ್ಕೆ ಹೋಗಲಾಗದ ಸ್ಥಿತಿಯಲ್ಲಿ ಎಂಪಾಯರ್ ಸ್ಟೇಟ್ ಬಿಲ್ಡಿಂಗ್‌ನ್ನು ಏರಿಸಿದ್ದರಿಂದ ಅದನ್ನು ಮೀರಿಹೋಗುವ ಕಟ್ಟಡಗಳು ಏಳುವ ಪರಿಸ್ಥಿತಿಯೇ ಇಲ್ಲ. ಹಾಗಾಗಿ ರಸ್ತೆಬದಿಯ ಸಣ್ಣ ಕಟ್ಟಡಗಳು ಸಹ ೩೦–೪೦ ಮಹಡಿಗಳನ್ನು ಹೊಂದಿರುವುದು ಸರ್ವೇಸಾಮಾನ್ಯ.

ಇಲ್ಲಿಂದಲೇ ಸಮುದ್ರಮಾರ್ಗದಲ್ಲಿ ಹಡಗಿನ ಮೂಲಕ ೨೦–೩೦ ನಿಮಿಷಗಳ ಪ್ರಯಾಣ ಮಾಡಿದರೆ ಅತ್ಯಂತ ದೊಡ್ಡದಾದ ಸ್ವಾತಂತ್ರ್ಯದೀವಿಗೆ ಹಿಡಿದ ವಿಗ್ರಹ (Statue of Liberty) ಇರುವ ದ್ವೀಪ ಸಿಕ್ಕುತ್ತದೆ. ದ್ವೀಪ ಮಧ್ಯದಲ್ಲಿ ೧೪೨ ಅಡಿ ಎತ್ತರದ ಶಿಲಾಮಯ ಪಾದಪೀಠದ ಮೇಲೆ ೧೫೧ ಅಡಿ

ಎತ್ತರದ ಕಂಚಿನ ವಿಗ್ರಹವಿದೆ. ಅದು ಸ್ವಾತಂತ್ರ್ಯದೀಪವನ್ನು ಜಗತ್ತಿನ ಜನತೆಗೆ ಬೀರಿ ಬೆಳಕನ್ನು ಒದಗಿಸುವಂತಿದೆ. ಅತ್ಯಂತ ದೊಡ್ಡ ಇಗರ್ಜಿ ಸೈಂಟ್ ಜೋನ್ ಕ್ಯಾಥೆಡ್ರಲ್, ಅತ್ಯಂತ ದೊಡ್ಡ ವಿಶ್ವವಿದ್ಯಾಲಯ—ಮುಂತಾದುವೆಲ್ಲ ಈ ನ್ಯೂಯಾರ್ಕಿನಲ್ಲಿಯೇ ಇರುವುದು.

ಜಗತ್ತಿನಲ್ಲೇ ಅಮೆರಿಕಾ ಅತ್ಯಂತ ಸಂಪದ್ಭರಿತ ದೇಶ. ಅಲ್ಲಿಯ ಅತ್ಯಂತ ದೊಡ್ಡ ವಿಷಯುಗಳನ್ನೆಲ್ಲ ನೋಡಬೇಕಾದರೆ ನ್ಯೂಯಾರ್ಕಿಗೆ ಹೋಗಬೇಕು. ಹಿಂದಿನ ಕಾಲದಲ್ಲಿ See Rome and die ಎಂಬ ಮಾತು ಇತ್ತಂತೆ. ಆದರೆ ಇಂದಿಗೆ See New York and die ಎಂಬುದಾಗಿ ಬದಲಾಯಿಸಿಕೊಳ್ಳ ಬೇಕಾಗಿದೆ. ಅಂದರೆ ಸಾಯುವ ಮೊದಲು ನ್ಯೂಯಾರ್ಕ್ ವೈಭವ ನೋಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂದಭಿಪ್ರಾಯ.

ನಮಗೀಗ ಕೇಳಿ ತಿಳಿದಿದ್ದ ವಿಷಯುಗಳನ್ನು ಕಣ್ಣಾರೆ ಕಾಣುವ ಸುಯೋಗ ಒದಗಿತು.

ಈದೀಗ, ಅತ್ಯಂತ ಜನನಿಬಿಡವಾದ ಮಹಾನಗರವಾದ್ದರಿಂದ ಕಾರು ಬಿಟ್ಟು ನಡೆದುಹೋಗುವ ಜನರೂ ಸಿಗುತ್ತಾರೆ. ಎಲ್ಲರೂ ಅವರವರ ಕಾರು ತಂದರೆ ರಸ್ತೆಯೇ ಸಾಲದೆಹೋಗಬಹುದು. ನಿಲ್ಲಿಸಲಂತು ಸ್ಥಳ ಇಲ್ಲವೇ ಇಲ್ಲ—ಎಂದಾಗ ಬಹುದು. ಹಾಗಾಗಿ ಕಾರಲ್ಲಿ ಬಂದವರೂ ಎಲ್ಲಾದರೊಂದು ಕಡೆ ಕಷ್ಟದಿಂದ ಕಾರು ನಿಲ್ಲಿಸಿ ಬರುತ್ತಾರೆ. ಅದಕ್ಕೆ ಘಂಟೆಗಿಷ್ಟೆಂದು ದೊಡ್ಡ ಮೊತ್ತದ ಬಾಡಿಗೆ ತೆರಬೇಕಾಗುತ್ತದೆ. ಆನಂತರ ನಡೆದೋ ಅಥವಾ ಭೂಭಾಗದಡಿಯಲ್ಲಿ ಸಂಚರಿಸುವ ರೈಲುಗಳ ಮೂಲಕವೋ, ಇಲ್ಲವೇ ಸದಾ ಸುತ್ತಾಡುತ್ತಿರುವ ಹಳದಿ ಬಣ್ಣದ ಬಾಡಿಗೆ ಕಾರುಗಳ ಮೂಲಕವೋ ಸಂಚರಿಸಿ ತಮ್ಮ ಕೆಲಸ ಮಾಡಿಕೊಂಡು ಹೋಗುತ್ತಾರೆ. ಕಾರು ನಿಲ್ಲಿಸುವುದು ನ್ಯೂಯಾರ್ಕಿನ ಅತಿ ದೊಡ್ಡ ಸಮಸ್ಯೆ.

ನಾವೂ ಕಾರು ಮೂಲಕ ಬಂದವರು. ಬಹುದೀರ್ಘ ಜಲಾಂತರ್ಗತ ಸುರಂಗ ಮಾರ್ಗ ಮೂಲಕ ನಗರ ಕೇಂದ್ರಕ್ಕೆ ಬಂದು ಸೇರಿದೆವು. ಗ್ರಾಂಡ್ ಹಯಾತ್ ಹೋಟೆಲಿನಲ್ಲಿ ಉಳಿದುಕೊಳ್ಳಲು ಮೊದಲೇ ವ್ಯವಸ್ಥೆಗೈದುದರಿಂದ ತೊಂದರೆಯಾಗಲಿಲ್ಲ. ಅದೊಂದು ಬಹು ಸುಂದರ ಹಾಗೂ ಬಹು ದೊಡ್ಡ ಹೋಟೆಲ್. ಅದರೊಳಗೇ ಮಿನಿಉದ್ಯಾನ, ಮಿನಿಜಲಪಾತಗಳ ಸುಂದರ ವ್ಯವಸ್ಥೆ ಇದೆ. ಇಪ್ಪತ್ತೆರಡನೆಯ ಅಂತಸ್ತಿನಲ್ಲಿರುವ ಮೂರು ಕೋಣೆಗಳಲ್ಲಿ ನಮ್ಮ ದೊಡ್ಡ ಸಂಸಾರ ಹಂಚಿಕೊಂಡೆವು. ಸುವ್ಯಸ್ಥಿತವಾದ ಆ ಕೋಣೆಗಳ ವೈಭವಗಳೆಲ್ಲ 'ಸ್ವರ್ಗಕ್ಕೆ ಕಿಚ್ಚುಹಾಕಬಹುದಾದವು'ಗಳು. ಅಂತೆಯೇ ದಿನದ ಬಾಡಿಗೆ ಸಹ

ಕೋಣೆಯೊಂದಕ್ಕೆ ೯೦ ಡಾಲರುಗಳು. ಮೂರು ಕೋಣೆ, ಮೂರು ದಿನ ಅಂದರೆ ೮೧೦ ಡಾಲರುಗಳು ಅಥವಾ ೮೧೦೦ ರೂಪಾಯಿಗಳು ಬಾಡಿಗೆ ಮಾತ್ರ. ಇತರ ಖರ್ಚುಗಳು ಬೇರೆಯೇ. ಇದು ಅಮೇರಿಕಾ!

ಅಲ್ಲಿ ಬೀಡುಬಿಟ್ಟು ಗಗನಕ್ಕೇರುವ ಮಹಾಮಹಾ ಕಟ್ಟಡಗಳನ್ನು ನೋಡುತ್ತ ಮುಂದೆ ಹೋದೆವು. ಕತ್ತು ಮೇಲಕ್ಕೆ ಎತ್ತಿ ಎತ್ತಿ ಕುತ್ತಿಗೆ ನೋವು ಶುರುವಾಗಲಾರಂಭಿಸಿತು. ರಾತ್ರೆ, ಪೆಟ್ಟಿಗೆಯಲ್ಲಿಟ್ಟಿದ್ದ ಅಮೃತಾಂಜನಕ್ಕೆ ಬೇಡಿಕೆ ಹೆಚ್ಚುವಂತೆಯೂ ಆಯಿತು. ರಸ್ತೆಬದಿಯ ಸಣ್ಣ ಸಣ್ಣ ಕಟ್ಟಡಗಳೂ ೩೦–೪೦ ಅಂತಸ್ತಿನವು. ಇವುಗಳ ಮಧ್ಯೆ ವಿಶ್ವಸಂಸ್ಥೆಯ ಕಟ್ಟಡ, ಪಾನ್ ಅಮೇರಿಕನ್ ಬಿಲ್ಡಿಂಗ್, ರಾಕ್‌ಫೆಲರ್ ಸೆಂಟರ್—ಮುಂತಾದುವೆಲ್ಲ ೬೦-೭೦ ಮಹಡಿಗಳನ್ನು ಹೊಂದಿಕೊಂಡಿದ್ದು ತುದಿ ಕಾಣದವುಗಳಾಗಿವೆ. ಅವನ್ನೆಲ್ಲ ನೋಡುತ್ತ ಸೋತು ಸಮೀಪದ **ಮದ್ರಾಸ್ ಉಡ್‌ಲ್ಯಾಂಡ್ಸ್ ಹೊಟೆಲಿಗೆ** ಹೋಗಿ ಸೇರಿದೆವು.

ಅಲ್ಲಿಯ ಊಟ, ತಿಂಡಿ, ಕಾಫಿ, ಜನ—ಇವೆಲ್ಲ ಪರಿಶುದ್ಧ ಕನ್ನಡಿಗರ ಅದರಲ್ಲೂ ಉಡುಪಿ ಹೋಟೆಲಿನ ವಾತಾವರಣವಾಗಿತ್ತು. ವಿಚಾರಿಸಿದರೆ ಅಲ್ಲಿಯ ಅಧಿಕಾರಿಗಳೆಲ್ಲ ನಮಗೆ ಪರಿಚಿತರೇ ಇದ್ದಾರೆ. ಮಸಾಲೆದೋಸೆ ತಜ್ಞರೊಬ್ಬರು ನಮ್ಮೂರ ನೆರೆಗ್ರಾಮದವರೇ. ಅವರ ವೇತನ, ಸೇವಾ ನಿಯಮಗಳೆಲ್ಲ ವಿಶ್ವವಿದ್ಯಾಲಯದ ಪ್ರೊಫೆಸರರ ಮಟ್ಟಕ್ಕಿಂತ ಕಡಿಮೆಯದಲ್ಲ—ಎಂದು ತಿಳಿದಾಗ ತುಂಬ ಸಂತೋಷವಾಯಿತು. ಅಲ್ಲಿಯ ಹೋಟೆಲ್ ಮಾಣಿಗಳು ಸಹ ಬಹು ಮಂದಿ ನಗರದ ಬೇರೆ ಬೇರೆ ಉದ್ಯೋಗದಲ್ಲಿ ಅಥವಾ ಉಚ್ಚ ಶಿಕ್ಷಣದಲ್ಲಿದ್ದವರು. ಈ ಕೆಲಸವನ್ನು ಮೇಲ್ಸಂಪಾದನೆಯಾಗಿ ಮಾಡುತ್ತಿದ್ದಾರೆ. ಗಿರಾಕಿಗಳು ತಿಂದ ಉಪಾಹಾರದ ಬೆಲೆಯ ಶೇಕಡಾ ೧೦ ಅಥವಾ ೧೫ನ್ನು ಭಕ್ಷೀಸ್ (Tips) ರೂಪದಲ್ಲಿ ಈ ಕೆಲಸಗಾರರಿಗೆ ಕೊಡುವುದು ಅಮೇರಿಕಾದ ಪದ್ಧತಿ. ಹಾಗಾಗಿ ಒಳ್ಳೆಯ ವರಮಾನ ಈ ಹೋಟೆಲ್ ಸಹಾಯಕರಿಗೆ ಬಂದೇ ಬರುತ್ತದೆ. ಒಂದು ಮಸಾಲೆದೋಸೆಯ ಬೆಲೆ ೩.೭೫ಡಾಲರ್ (೩೭–೫೦). ಕಾಫಿಯ ಬೆಲೆ ೧.೭೫ ಡಾಲರ್. ಅಂತು ನಾವು ಸಾಯಂಕಾಲದ ಉಪಾಹಾರ ಮುಗಿಸಿ ಹೊರಬರುವಾಗ ೧೦೫ ಡಾಲರ್‌ಬಿಲ್ಲಾಯಿತು. ಆದರೂ ತುಂಬ ರುಚಿಕರವಾಗಿದ್ದುವು ಆ ತಿಂಡಿತೀರ್ಥ.

ಕಳೆದ ಹತ್ತಾರು ವರ್ಷಗಳಿಂದ ಈ ಹೊಟೆಲ್ ಒಳ್ಳೆಯ ಸೇವೆಯನ್ನು ಅಮೇರಿಕಾ ಜನರಿಗೆ ಒದಗಿಸುತ್ತ ಬಂದಿದೆ. ತಮ್ಮ ಪಾಲಿಗೆ ಒಳ್ಳೆಯ ಲಾಭವನ್ನು ಮಾಡಿಕೊಂಡಿದೆ. ಇಲ್ಲಿಯ ಗಿರಾಕಿಗಳು ಭಾರತೀಯರು ಮಾತ್ರವೇ ಅಲ್ಲ;

ಏಷ್ಯಾ ಮೂಲದವರು, ಅಮೆರಿಕಾದವರು—ಎಲ್ಲರೂ ಬಂದು ದಕ್ಷಿಣ ಭಾರತದ ತಿಂಡಿ ತಿಂದು ತೃಪ್ತಿಪಟ್ಟುಹೋಗುತ್ತಾರೆ.

ಅಲ್ಲಿಂದ ಸ್ವಲ್ಪ ದೂರ ಹೋದರೆ ಭಾರತೀಯರೇ ಬಹು ಸಂಖ್ಯೆಯಲ್ಲಿರುವ ಬೀದಿಯೊಂದು ದೊರಕುತ್ತದೆ. ಅಲ್ಲಿ ಭಾರತದ—ಮುಖ್ಯವಾಗಿ ಉತ್ತರ ಭಾರತದವರು ನಡೆಸುವ ಅಂಗಡಿಗಳು, ಹೋಟೆಲುಗಳು, ಸೀರೆಯಂಗಡಿಗಳು, ಪಾನ್ ಸುಪಾರಿ ದುಕಾನ್‌ಗಳು, ಸಿನೆಮಾ ಗೃಹಗಳು—ಎಲ್ಲ ಇವೆ. ಭಾರತದ ಉಪ್ಪಿನಕಾಯಿ, ಸಾಂಬಾರ್‌ಪುಡಿ, ಹಪ್ಪಳ, ಸಂಡಿಗೆ, ಹಣ್ಣು, ತರಕಾರಿ—ಮುಂತಾದ ಎಲ್ಲ ವಸ್ತುಗಳೂ ನ್ಯಾಯವಾದ ಬೆಲೆಗೆ ಸಿಗುತ್ತವೆ. ಇಡೀ ಅಮೆರಿಕಾದಲ್ಲಿರುವ ೩-೪ ಲಕ್ಷ ಭಾರತೀಯರಲ್ಲಿ ಅರ್ಧಾಂಶ ಜನ ನ್ಯೂಯಾರ್ಕ್ ಮತ್ತು ಸುತ್ತಮುತ್ತ ಇರುವರು. ಆದ್ದರಿಂದ ಇಲ್ಲಿಯ ಭಾರತೀಯ ಮಾರ್ಕೆಟ್ ಪ್ರಸಿದ್ಧಿಪಡೆದಿದೆ. ದೂರದ ಊರುಗಳ ಭಾರತೀಯರೂ ಫೋನ್ ಮೂಲಕ ಇವರೊಡನೆ ವ್ಯಾಪಾರ ನಡೆಸುವುದಿದೆ.

ಇವನ್ನೆಲ್ಲ ನೋಡಿಕೊಂಡು ರಾತ್ರೆ ನಮ್ಮ ಹೋಟೆಲ್ ಕೋಣೆಗಳಲ್ಲಿ ವಿಶ್ರಮಿಸಿಕೊಂಡೆವು.

ಮರದಿನ ಬೆಳಗ್ಗೆ ನಾವಿರುವ ಹೋಟೆಲಲ್ಲೇ ಉಪಾಹಾರ ಮುಗಿಸಿಕೊಂಡೆವು. ನಂತರ 'ಗ್ರೇಲೈನ್ ಬಸ್' ಮೂಲಕ ನಗರ ಸಂದರ್ಶನದ ಕಾರ್ಯಕ್ರಮ ಕೈಗೊಂಡೆವು. ಬೆಳಗ್ಗೆ ೯ ಘಂಟೆಯಿಂದ ಸಾಯಂಕಾಲ ೪ ಘಂಟೆಯವರೆಗೆ ನಮ್ಮ ಸುತ್ತಾಟದ ಕಾರ್ಯಕ್ರಮ ಏರ್ಪಟ್ಟಿತ್ತು. ನಮ್ಮಂತಹ ೩೦-೪೦ ಮಂದಿ ಪ್ರಯಾಣಿಕರ ತಂಡವನ್ನು ಸುವ್ಯವಸ್ಥಿತವಾದ ಬಸ್ಸುಗಳ ಮೂಲಕ ನ್ಯೂಯಾರ್ಕಿನ ವಿವಿಧೆಡೆ ಕರೆದೊಯ್ದು ಅಲ್ಲಿಯ ವಿಶೇಷಗಳನ್ನೆಲ್ಲ ವಿವರಿಸಿ ಹೇಳುತ್ತಿದ್ದರು. ನಮ್ಮ ಪ್ರಶ್ನೆಗಳಿಗೆ ಉತ್ತರವಿತ್ತು ನ್ಯೂಯಾರ್ಕ್ ಪರಿಚಯ ಮಾಡಿಕೊಡುತ್ತಿದ್ದರು. ಅವರ ಬಸ್ ನಿಲ್ದಾಣ, ಆ ಕಚೇರಿ, ವ್ಯವಸ್ಥಿತ ಬಸ್ಸುಗಳು, ಅದರಲ್ಲಿರುವ ಸಮರ್ಥ ಮಾರ್ಗದರ್ಶಕರು (Guides)—ಇವೆಲ್ಲ ಉತ್ತಮಮಟ್ಟದ್ದಾಗಿದ್ದುವು. ನಾವಿದ್ದ ಬಸ್ಸಿನ ಗೈಡ್, ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ. ಅಲ್ಲಿಯ ವಿದ್ಯಾಭ್ಯಾಸ, ಹೆಚ್ಚಿನಂಶ ಗಳಿಕೆ-ಕಲಿಕೆ (Earn & Learn) ಕ್ರಮದ ಮೇಲೆಯೇ ನಡೆಯುವುದಾಗಿದೆ. ರಜಾ ಸಮಯದಲ್ಲಿ ಅಥವಾ ಬೆಳಗ್ಗೆ, ಸಾಯಂಕಾಲ ದುಡಿದು ಆ ಮೂಲಕ ಉನ್ನತ ಶಿಕ್ಷಣ ಪಡೆಯುವುದು ಅಲ್ಲಿಯ ರೂಢಿ. ಶ್ರೀಮಂತರ ಮಕ್ಕಳು ಸಹ ಹೆತ್ತವರ ಹಣದಿಂದ ಓದುವುದು—ಅವಮಾನ ಎಂದು ಭಾವಿಸುತ್ತಾರೆ. ಯಾವತರದ

ಕೆಲಸ ಮಾಡಿದರೂ ಆತ್ಮಗೌರವ ಕುಂದುವುದಿಲ್ಲ—ಎಂಬ ಮನೋಭಾವ ಎಲ್ಲರಲ್ಲೂ ಕಾಣಬಹುದು. 'ಕಾಯಕವೇ ಕೈಲಾಸ'—ಇದು ಬರೇ ಬಾಯಿ ಮಾತಿನಲ್ಲಲ್ಲ.

ಅಂತಹ ಸುಂದರ ಬಸ್ಸನ್ನೇರಿ ಹೋಗುತ್ತ ಸೈಂಟ್ ಜಾನ್ ಕೈಥೆಡ್ರಲ್‌ಗೆ ಮೊದಲು ಹೋದೆವು. ಇದು ವಿಸ್ತಾರ, ಎತ್ತರ, ಭವ್ಯತೆ—ಎಲ್ಲ ವಿಚಾರದಲ್ಲೂ ಪ್ರಪಂಚದಲ್ಲೇ ದೊಡ್ಡದಂತೆ. ಇನ್ನೂ ಅದರ ಕೆಲಸ ಪೂರ್ಣವಾಗಿಲ್ಲ. ಅದನ್ನು ಸುತ್ತಿಬರಬೇಕಾದರೆ ಅರ್ಧ ಘಂಟೆ ಸಮಯವಾದರೂ ಬೇಕು. ಆಮೇಲೆ ವಿಶಾಲ ವಿಶ್ವವಿದ್ಯಾಲಯಗಳು, ಲಿಂಕನ್ ಕೇಂದ್ರ, ಕೇಂದ್ರ ಉದ್ಯಾನ, ಜಾರ್ಜ್ ವಾಶಿಂಗ್ಟನ್ ಸೇತುವೆ, ರಾಕ್‌ಫೆಲರ್ ಸೆಂಟರ್, ವಸ್ತುಪ್ರದರ್ಶನಾಲಯ, ಕರಿಜನರೇ ವಿಶೇಷವಾಗಿರುವ ಬಡತನ ತೋರುವ ಹಾರ್ಲೆಮ್ ರಸ್ತೆ, ಚೈನಾ ಟೌನ್ ಮುಂತಾದುವನ್ನೆಲ್ಲ ನೋಡಿದೆವು. ನಂತರ 'ಲಿಬರ್ಟಿ ಸ್ಟ್ಯಾಚ್ಯು' ಇರುವ ದ್ವೀಪಕ್ಕೆ ಹೋಗಲು ಕಡಲ ತೀರಕ್ಕೆ ಬಂದೆವು. ಸ್ಟೀಮರ್ ಮೂಲಕ ಸಾಮಾನ್ಯ ಅರ್ಧ ಘಂಟೆಯ ಪ್ರಯಾಣ ಮುಗಿಸಿ ಆ ಮಹಾ ವಿಗ್ರಹವಿರುವ ಸುಂದರ ದ್ವೀಪಕ್ಕೆ ಬಂದು ಸೇರಿದೆವು. ಪ್ರತಿದಿನ ಸರಾಸರಿ ಮೂವತ್ತು ಸಾವಿರ ಪ್ರವಾಸಿಗಳನ್ನಾಕರ್ಷಿಸುವ ಈ ದ್ವೀಪವನ್ನು ತಕ್ಕ ರೀತಿಯಲ್ಲಿ ಮೋಹಕವಾಗಿಯೂ ಬೋಧಕವಾಗಿಯೂ ವ್ಯವಸ್ಥೆಗೊಳಿಸಿದ್ದಾರೆ. ೧೫೨ ಅಡಿ ಎತ್ತರದ ಶಿಲಾಪೀಠದ ಮೇಲೆ ನಿಂತ ೧೫೧ ಅಡಿ ಎತ್ತರದ ಆ ಸ್ವಾತಂತ್ರ್ಯ ದೇವತೆ ಕ್ರಿ. ಶ. ೧೮೮೬ ರಲ್ಲಿ ಅಮೆರಿಕಾದವರಿಗೆ ಫ್ರೆಂಚರ ಕೊಡುಗೆಯಾಗಿ ಬಂದುದಾಗಿದೆ. ಅಂದಿನ ಇಂಗ್ಲಿಷ್ ಜನತೆಯೊಡನೆ ಹೋರಾಡಿ ಸಾಧಿಸಿದ ಸ್ವಾತಂತ್ರ್ಯದ ಪ್ರತೀಕವಾಗಿ ಈ ವಿಗ್ರಹ ಇದೆ. ಆಗ ಇಂಗ್ಲಿಷರೊಡನೆ ಫ್ರೆಂಚರೂ ಹೋರಾಡುತ್ತಿದ್ದ ಕಾರಣ, ಫ್ರೆಂಚರ ಸಹಕಾರ ಅಮೇರಿಕನ್ನರಿಗೆ ಒದಗಿತ್ತು.

ನಾವು ಸಹ ಮೇಲೇರಿ ಹೋಗಿ ನೋಡಿ ವಿಸ್ಮಯಾನಂದವನ್ನು ಅನುಭವಿಸಿ ಕೃತಾರ್ಥರಾದೆವು. ಮಾನವ ಮುಂದೆ ಬರಬೇಕಾದರೆ ಆತನಿಗೆ ಸ್ವಾತಂತ್ರ್ಯ ಮತ್ತು ಜವಾಬ್ದಾರಿಯುನ್ನೀಯಬೇಕು. ಅದಕ್ಕಿಂತ ದೊಡ್ಡ ಕೊಡುಗೆ ಇನ್ನಾವುದೂ ಇಲ್ಲ. ಈ ತತ್ವವನ್ನ ನಮ್ಮ ದೇಶದ ಹಿರಿಯರಾದ ಗೋಖಲೆ, ಗಾಂಧೀಜಿ—ಮುಂತಾದವರು ಹೇಳಿದ್ದರು. ಅವನ್ನೆಲ್ಲ ಸ್ಮರಿಸಿಕೊಂಡು ತುಂಬಿದ ಹೃದಯದಿಂದ ಹಿಂದಿರುಗಿದೆವು.

ಸಾಯಂಕಾಲ ಮದ್ರಾಸ್ ಉಡ್‌ಲ್ಯಾಂಡ್ಸಿನಲ್ಲಿ ನಮ್ಮ ಊಟೋಪಚಾರಗಳಾದುವು. ರಾತ್ರಿ ಜಗತ್ಪ್ರಸಿದ್ಧ 'ರೇಡಿಯೋ ಸಿಟಿ ಮ್ಯೂಸಿಕ್ ಹಾಲ್'ನಲ್ಲಿ

ನಡೆದ ಸಂಗೀತನರ್ತನ ಕಾರ್ಯಕ್ರಮಗಳನ್ನು ನೋಡಿದೆವು. ಇದು ೬೦೦೦ ಜನರಿಗೆ ಸುಖಾಸನವಿರುವ ಪ್ರಪಂಚದಲ್ಲೇ ಅತಿ ದೊಡ್ಡದಾದ ರಂಗಮಂದಿರವಾಗಿದೆ. ಇದರ ವೇದಿಕೆಯೇ ೧೪೪ ಅಡಿ ಉದ್ದ, ೧೦೦ ಅಡಿ ಅಗಲ, ೬೭ ಅಡಿ ಆಳ ಅಥವಾ ಎತ್ತರದ ಅನುಕೂಲತೆವುಳ್ಳ, ಬೇಕಾದಾಗ, ಬೇಕಿದ್ದ ಆಕಾರಕ್ಕೆ ಬದಲಾಯಿಸಲಾಗುವ, ವ್ಯವಸ್ಥೆಯಿಂದೊಡಗೂಡಿದೆ. ಇದಲ್ಲದೆ, ಸಂಗೀತಗಾರರು, ವಾದ್ಯವೃಂದದವರು, ದೀಪಾಲಂಕಾರ ತಜ್ಞರು—ಇರಲು ಬೇರೆ ಬೇರೆ ಅವಕಾಶಗಳನ್ನೊಳಗೊಂಡಿದೆ. ಆ ನರ್ತನಮಂದಿರದ ವ್ಯವಸ್ಥೆ, ಅಲ್ಲಿ ಮಧ್ಯದಿಂದ ಉದ್ಭವಿಸಿ ಬರುವ ಸುಂದರ ವಿಶಾಲ ವೇದಿಕೆ, ಅಲ್ಲಿಯ ವಿಚಿತ್ರ ದೀಪಾಲಂಕಾರ, ಆ ಗಾಯನ ಕಾರ್ಯಕ್ರಮ—ಇವನ್ನೆಲ್ಲ ನೋಡಿ, ಆ ಮಾಯಾಲೋಕದ ವೈಭವವನ್ನು ಅನುಭವಿಸಬೇಕಲ್ಲದೆ, ಆ ವಿಸ್ಮಯಗಳೆಲ್ಲ ವರ್ಣನಾತೀತವಾಗಿವೆ. ಪುರಾಣಗಳಲ್ಲಿ ಬರುವ ದೇವಲೋಕದ ಅಮರಾವತಿಯಲ್ಲಿ ಸಹ ಇಂತಹ ಒಂದು ಸುವ್ಯವಸ್ಥಿತ ಪರಮವೈಭವ ಇರಲಾರದೆಂದು ಹೇಳಬಹುದು. ಸಭಾಂಗಣದ ಮಧ್ಯದಲ್ಲಿ ಚಂದ್ರೋದಯವಾದಂತೆ ಮೊದಲು ಬೆಳಕೇರಿ ಬರುತ್ತದೆ, ನಂತರ ಸಂಗೀತಗಾರರ ತಂಡೋಪತಂಡ, ಆಮೇಲೆ ಒಂದೇ ರೂಪ, ಗುಣ, ವೇಷ, ಭೂಷಣಗಳಿರುವ ನೂರಾರು ನೃತ್ಯಗಾತಿಯರು—ಇವೆಲ್ಲ ಸುಂದರ ವೃತ್ತಾಕಾರದ ವೇದಿಕೆಯ ಮೇಲೆ ಎದ್ದು ಬಂದು, ಬೇರೆ ಬೇರೆ ಕಡೆಗೆ ಚಲಿಸುತ್ತಿದ್ದು, ನರ್ತನದ ಸಂದರ್ಭಕ್ಕೆ ಸರಿಹೊಂದುವಂತೆ ರಂಜಿಸುತ್ತಲೇ ಇರುತ್ತವೆ. ಕೆಲವೇಳೆ ನೂರಿನ್ನೂರು ಜನ ವೇದಿಕೆಯ ಮೇಲಿದ್ದರೂ, ಬೇರೆ ಬೇರೆ ಹಂತಗಳಲ್ಲಿ ಬಣ್ಣ ಬಣ್ಣದ ದೀಪಾಲಂಕಾರಗಳಿಗೊಳಪಟ್ಟು—ಒಂದು ಮಾಯಾಮಯ ಅದ್ಭುತ ಲೋಕವೇ ಕಣ್ಣಮುಂದೆ ಕುಣಿದಾಡುತ್ತಿರುವಂತೆ ಭಾಸವಾಗುತ್ತದೆ.

ಇವನ್ನೆಲ್ಲ ನೋಡಿಕೊಂಡು ಹೋಟೆಲಿಗೆ ಹೋಗಿ ಮಲಗಿಕೊಂಡೆವು. ರಾತ್ರಿ ಕನಸಿನಲ್ಲಿಯೂ ಈ ಚಿತ್ರಗಳೇ ಮುಂದುವರಿಯುತ್ತಿರುವುದನ್ನು ಕಂಡೆವು.

ಮರುದಿನ ಬೆಳಗ್ಗೆ ನ್ಯೂಯಾರ್ಕಿನ ಬೇರೆ ಬೇರೆ ತರದ ಅಂಗಡಿಗಳಿಗೆ ಹೋದೆವು. ನಮಗೆ ಬೇಕಿದ್ದ ಕೆಲವೆಲ್ಲ ಸಾಮಗ್ರಿಗಳ ವ್ಯಾಪಾರ ನಡೆಸಿದೆವು. ನಮ್ಮ ಬಂಧುಮಿತ್ರರಿಗೆ ಕೊಡಬೇಕೆಂದಿದ್ದ ಕಿರುಕಾಣಿಕೆಗಳನ್ನೆಲ್ಲ ಸಂಗ್ರಹಿಸಿದೆವು. ಹಾಗೂ ಹೀಗೂ ರಾತ್ರಿ ಸಮಯ ಬಿಂಘೊಂಟೆನ್ ಮನೆ ಸೇರಿದೆವು. ಅತ್ಯದ್ಭುತ ಅನುಭವದ ನೆನಪು ಮರೆಯಲಾಗದ ವಿಚಾರವಾಗಿ ಮನಃಫಲಕದಲ್ಲಿ ಬರೆದಿಟ್ಟಂತಾಯಿತು.

(ಸಶೇಷ) ಕೆ. ಆರ್. ಉಡುಪ

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ

ಕರ್ನಾಟಕ ರಾಜ್ಯದ ಜನಸಂಖ್ಯೆ ಮೂರು ಕೋಟಿ ಎಪ್ಪತ್ತು ಲಕ್ಷ. ಅಕ್ಷರಸ್ಥರ ಶೇಕಡ ಪ್ರಮಾಣ ೩೮.೪೬ ರಷ್ಟು. ಭಾರತದ ಶೇಕಡ ಪ್ರಮಾಣ ೩೬.೧೭ ರಷ್ಟಿದ್ದು ಕರ್ನಾಟಕ ಅಕ್ಷರಸ್ಥರ ಸಂಖ್ಯೆಯಲ್ಲಿ ಹನ್ನೊಂದನೆಯ ಸ್ಥಾನ ಪಡೆದಿದೆ. ೧೯೫೧ ರಲ್ಲಿ ಕರ್ನಾಟಕದ ಅಕ್ಷರಸ್ಥರ ಶೇಕಡ ಪ್ರಮಾಣ ೧೮.೮೩ ರಷ್ಟಿತ್ತು. ಅದು ೧೯೬೧ರಲ್ಲಿ ೨೫.೪೦ಕ್ಕೆ ೧೯೭೧ರಲ್ಲಿ ೩೧.೫೨ಕ್ಕೆ ಮತ್ತು ೧೯೮೧ರಲ್ಲಿ ೩೮.೪೬ಕ್ಕೆ ಏರಿದೆ. ಆದರೆ ಕಳೆದ ಮೂರು ದಶಕಗಳಿಂದ ಅನಕ್ಷರಸ್ಥರ ಸಂಖ್ಯೆ ಹೆಚ್ಚುತ್ತಾ ಬಂದಿದೆ. ಇದು ೧೯೬೧ ರಲ್ಲಿ ಒಂದು ಕೋಟಿ ಎಪ್ಪತ್ತೈದು ಲಕ್ಷವಿತ್ತು. ಆದರೆ ೧೯೭೧ರಲ್ಲಿ ೨ ಕೋಟಿಗೆ ಮತ್ತು ೧೯೮೧ ರಲ್ಲಿ ೨ ಕೋಟಿ ೨೮ ಲಕ್ಷಕ್ಕೆ ಏರಿದೆ. ಯಾವುದೇ ಭಾಷೆಯನ್ನು ತಿಳುವಳಿಕೆಯಿಂದ ಓದುವ ಮತ್ತು ಬರೆಯುವ ಯೋಗ್ಯತೆ–ಇರುವವರನ್ನು ಅಕ್ಷರಸ್ಥರೆಂದು ಪರಿಗಣಿಸಲಾಗಿದೆ. ಮತ್ತು ೦.೪ ವಯಸ್ಸಿನ ಎಲ್ಲ ಮಕ್ಕಳನ್ನು ಅನಕ್ಷರರೆಂದು ಭಾವಿಸಲಾಗಿದೆ. ಸ್ವಾತಂತ್ರ್ಯ ಬಂದ ನಂತರ ಶಾಲೆಗಳ ಸಂಖ್ಯೆ ಹೆಚ್ಚಿದ್ದರೂ ಕೂಡ ಜನಸಂಖ್ಯೆಗನುಗುಣವಾಗಿ ಸಾಕ್ಷರರ ಸಂಖ್ಯೆ ಹೆಚ್ಚಿಲ್ಲ. ಜನತೆಯ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ನಿರಕ್ಷರತೆಯನ್ನು ಆದಷ್ಟು ಬೇಗನೆ ನಿರ್ಮೂಲನ ಮಾಡುವುದು ಅಗತ್ಯ.

ಕರ್ನಾಟಕ ರಾಜ್ಯದಲ್ಲಿ ವಯಸ್ಕರ ಶಿಕ್ಷಣದ ಇತಿಹಾಸ ೧೯೧೨ ರಿಂದ ಪ್ರಾರಂಭವಾಗುತ್ತದೆ. ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ೭೦೦೦ ತರಗತಿಗಳನ್ನು ಪ್ರಾರಂಭಿಸಿ, ಸಂಚಾರಿ ಗ್ರಂಥಾಲಯಗಳ ವ್ಯವಸ್ಥೆ ಮಾಡಿದರು. ೧೯೪೦ ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿ ಸಂಘದ ಉಪಸಮಿತಿಯು ವಯಸ್ಕರ ಸಾಕ್ಷರತ ಕಾರ್ಯಕ್ರಮವನ್ನು ಹಾಕಿಕೊಂಡಿತ್ತು. ಬೆಂಗಳೂರಿನಲ್ಲಿಯೂ ಕೂಡ ಇದೇ ರೀತಿಯ ಪ್ರಯತ್ನಗಳು ನಡೆದವು. ೧೯೪೧ ರಲ್ಲಿ "ಮೈಸೂರು ಸಂಸ್ಥಾನ ಅಕ್ಷರ ಪ್ರಚಾರ ಸಮಿತಿ" ಜನ್ಮತಾಳಿತು. ಇದೇ ಸಮಿತಿ ಮುಂದೆ ೧೯೪೫ ರಲ್ಲಿ ವಯಸ್ಕರ ಶಿಕ್ಷಣ ಸಮಿತಿಯಾಗಿ ಮಾರ್ಪಟ್ಟಿತು. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಜಾರಿಯಲ್ಲಿ ಬರುವ ಮುನ್ನ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು ಅನಕ್ಷರತೆಯ ನಿರ್ಮೂಲನಕ್ಕಾಗಿ ಶ್ಲಾಘನೀಯವಾದ ರೀತಿಯಲ್ಲಿ ಕಾರ್ಯನಿರ್ವಹಿಸಿ ೧೯೮೦ ರಷ್ಟೊತ್ತಿಗೆ ೧೧,೦೫೬೧೦ ವಯಸ್ಕರನ್ನು ಅಕ್ಷರಸ್ಥರನ್ನಾಗಿ ಮಾಡಿದೆ.

ಭಾರತ ಸರಕಾರ ವಯಸ್ಕರ ಶಿಕ್ಷಣದ ಮಹತ್ವವನ್ನರಿತು ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ೧೯೭೮ ರಲ್ಲಿ ರೂಪಿಸಿತು. ಈ ಕಾರ್ಯಕ್ರಮ ೧೫-೩೫ ವರ್ಷ ವಯೋಮಿತಿಯಲ್ಲಿರುವ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿ ಅವರ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವುದೇ ಇದರ ಉದ್ದೇಶವಾಗಿದೆ. ಇದರ ಪರಿಕಲ್ಪನೆ ವಿಸ್ತಾರಗೊಂಡಿದ್ದು ಮೂರು ಗುರಿಗಳನ್ನು ಹೊಂದಿದೆ.

೧) ಸಾಕ್ಷರತೆ
೨) ಅರಿವು
೩) ಕ್ರಿಯಾಶೀಲತೆ.

೧೯೭೮ ರಲ್ಲಿ ಸುಮಾರು ೧೦ ಕೋಟಿ ಅನಕ್ಷರಸ್ಥರಿರುವುದಾಗಿ ಅಂದಾಜು ಮಾಡಲಾಗಿದ್ದು ೬ನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ೧೯೯೦ರ ಹೊತ್ತಿಗೆ ಇವರೆಲ್ಲರನ್ನು ಅಕ್ಷರಸ್ಥರನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಒಂದು ಅಂದಾಜಿನ ಪ್ರಕಾರ ೧೫-೩೫ ವಯಸ್ಸಿನೊಳಗಿನ ನಿರಕ್ಷರರ ಸಂಖ್ಯೆ ೬೦ ಲಕ್ಷ. ಈ ಸಮಸ್ಯೆಯ ಮಹತ್ವವನ್ನರಿತು ಈ ಕಾರ್ಯಕ್ರಮವನ್ನು ಸರಕಾರವು ಕನಿಷ್ಟ ಅವಶ್ಯಕತೆಯ ಕಾರ್ಯಕ್ರಮ ಹಾಗೂ ಹೊಸ ೨೦ ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಸೇರಿಸಿದೆ.

ಕೇಂದ್ರ ಸರಕಾರವು, ಈ ಕಾರ್ಯಕ್ರಮದ ಅಂಗವಾಗಿ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಪ್ರಕಾರ ಒಂದು ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ೩೦ ವಯಸ್ಕರನ್ನು ಸೇರ್ಪಡೆ ಮಾಡುವ ಅವಕಾಶವಿದೆ. ಇಂತಹ ೩೦ ವಯಸ್ಕರ ಶಿಕ್ಷಣ ಕೇಂದ್ರಗಳ ಮೇಲ್ವಿಚಾರಣೆಗಾಗಿ ಒಬ್ಬ ಮೇಲ್ವಿಚಾರಕರನ್ನು ನೇಮಿಸುವ ಹಾಗೂ ಇಂತಹ ೨೦೦ ಕೇಂದ್ರಗಳಿರುವ ಯೋಜನೆಗೆ ಒಬ್ಬ ಸಹಾಯಕ ಯೋಜನಾಧಿಕಾರಿಗಳನ್ನು ಮತ್ತು ಒಬ್ಬ ಯೋಜನಾಧಿಕಾರಿಗಳನ್ನು ನೇಮಿಸಲಾಗುತ್ತದೆ. ಈ ರೀತಿಯ ೩೦೦ ಕೇಂದ್ರಗಳ ಒಂದು ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಗೆ ಕೇಂದ್ರ ಸರ್ಕಾರವು ೧೦೦ ಕ್ಕೆ ೧೦೦ ರಷ್ಟು ಧನಸಹಾಯ ನೀಡುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವೂ ಕೂಡ, ಕೇಂದ್ರ ಸರ್ಕಾರದ ಯೋಜನೆಯ ರೀತಿಯಲ್ಲಿಯೇ ೧೦೦ ಕೇಂದ್ರಗಳ ಯೋಜನೆಗಳನ್ನು ರೂಪಿಸಿದೆ. ರಾಜ್ಯ ಯೋಜನೆಯ ವೆಚ್ಚವನ್ನು ರಾಜ್ಯ ಸರಕಾರವೇ ೧೦೦ಕ್ಕೆ ೧೦೦ ರಷ್ಟು ಪೂರೈಸುತ್ತಿದೆ. ಇದಲ್ಲದೆ ಸ್ವಯಂ ಸೇವಾ ಸಂಸ್ಥೆಗಳು, ನೆಹರು ಯುವಕ ಕೇಂದ್ರಗಳು,

ವಿಶ್ವವಿದ್ಯಾಲಯಗಳೂ ಕೂಡ ಈ ಮಾದರಿಯ ಯೋಜನೆಗಳನ್ನು ಜಾರಿಯಲ್ಲಿ ತರುತ್ತಿವೆ. ಇಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ಉದಾರವಾಗಿ ಧನ ಸಹಾಯ ಮಾಡುತ್ತವೆ. ೧೯೭೮ ರಿಂದ ೧೯೮೩ ರವರೆಗೆ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿದ್ದ ಕಾರ್ಯಕ್ರಮಗಳ ವಿವರಗಳು ಕೆಳಗಿನಂತಿವೆ.

	ವಯಸ್ಕರ ಶಿಕ್ಷಣ ಕೇಂದ್ರಗಳು	ದಾಖಲಾದ ವಯಸ್ಕರ ಸಂಖ್ಯೆ	ವೆಚ್ಚ ಲಕ್ಷ ರೂಪಾಯಿಗಳಲ್ಲಿ ಕೇಂದ್ರ	ರಾಜ್ಯ	ಒಟ್ಟು
೭೮–೭೯ ಸಿದ್ಧತಾ ವರ್ಷ		—	—	—	—
೭೯–೮೦	೭೧೧೬	೨,೧೪,೦೦೦	೧೧.೬೮	೧೯.೯೫	೩೧.೬೩
೮೦–೮೧	೬೫೫೧	೧.೯೯,೦೦೦	೬೯.೫೯	೩೯.೮೧	೧೦೯.೪೦
೮೧–೮೨	೭೨೧೨	೨,೧೨,೦೦೦	೭೩.೪೮	೪೪.೨೮	೧೧೭.೭೬
೮೨–೮೩	೭೪೧೧	೨,೧೮,೬೩೧	೭೦ ೭೯	೫೪.೫೦	೧೨೫.೨೯

೧೯೮೩-೮೪ ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಮೂರು ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಗಳು ಮಂಜೂರಾಗಿದ್ದು, ಇವುಗಳನ್ನು ಧಾರವಾಡ, ಗುಲ್ಬರ್ಗಾ ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಕೇಂದ್ರ ಸರ್ಕಾರದ ಮುನ್ನೂರು ಕೇಂದ್ರಗಳ ೧೬ ಯೋಜನೆಗಳು ೧೬ ಜಿಲ್ಲೆಗಳಲ್ಲಿ ಜಾರಿಯಲ್ಲಿದ್ದು ೪೮೦೦ ವಯಸ್ಕರ ಶಿಕ್ಷಣ ಕೇಂದ್ರಗಳ ಮೂಲಕ ೧,೪೪೦೦೦ ವಯಸ್ಕರು ಲಾಭ ಪಡೆಯುತ್ತಿದ್ದಾರೆ. ರಾಜ್ಯ ಸರಕಾರದ ೧೦೦ ಕೇಂದ್ರಗಳ ೩೦ ಯೋಜನೆಗಳು ಜಾರಿಯಲ್ಲಿದ್ದು ೩೦೦೦ ಕೇಂದ್ರಗಳ ಮೂಲಕ ೯೦,೦೦೦ ವಯಸ್ಕರು ಲಾಭ ಪಡೆಯುತ್ತಿದ್ದಾರೆ. ಕೇಂದ್ರದ ನಾಲ್ಕು ಯೋಜನೆಗಳು ಮತ್ತು ರಾಜ್ಯದ ೧೯ ಯೋಜನೆಗಳನ್ನು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ನೇರವಾಗಿ ನಡೆಸಲಾಗುತ್ತಿದೆ. ಇದಲ್ಲದೆ ಈ ವರ್ಷ ರಾಜ್ಯ ಸರ್ಕಾರದಿಂದ ಇನ್ನೂ ೧೨ ಯೋಜನೆಗಳು ಮಂಜೂರಾಗುವ ಸಾಧ್ಯತೆ ಇದೆ. ಒಟ್ಟಾರೆ ೨.೭೦ ಲಕ್ಷ ವಯಸ್ಕರನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸುವ ಗುರಿ ಹೊಂದಲಾಗಿದ್ದು ಇದಕ್ಕಾಗಿ ೧೮೮.೦೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. ಈ ಯೋಜನೆಯ ಕಾರ್ಯಾಚರಣೆಯ ಸಂದರ್ಭದಲ್ಲಿ ಎದುರಾಗುತ್ತಿರುವ ಸಮಸ್ಯೆಗಳು ಕೆಳಗಿನಂತಿವೆ.

೧) ವಯಸ್ಕರು ಈ ಕಾರ್ಯಕ್ರಮದಲ್ಲಿ ಸ್ವಯಂ ಪ್ರೇರಣೆಯಿಂದ ಭಾಗ ವಹಿಸುತ್ತಿಲ್ಲ.

೨) ಗ್ರಾಮದ ಮುಖಂಡರು ಈ ಕಾರ್ಯಕ್ರಮದ ಬಗ್ಗೆ ಆಸಕ್ತಿವಹಿಸುತ್ತಿಲ್ಲ.

೩) ಶಿಕ್ಷಕರು ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿಲ್ಲ.

೪) ಮೇಲ್ವಿಚಾರಕರು ಸಮರ್ಥವಾದ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿಲ್ಲ.

೫) ವಿವಿಧ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮದ ಹೊಂದಾಣಿಕೆ ಸಮರ್ಪಕವಾದ ರೀತಿಯಲ್ಲಿ ನಡೆಯುತ್ತಿಲ್ಲ.

೬) ಸಾಕ್ಷರೋತ್ತರ ಕಾರ್ಯಕ್ರಮಗಳ ಕೊರತೆ.

ಮೇಲೆ ಸೂಚಿಸಿರುವ ಸಮಸ್ಯೆಗಳನ್ನು ಪರಿಹರಿಸಲು ಕೆಳಗೆ ನಮೂದಿಸಿದ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು.

೧) ವಯಸ್ಕರಲ್ಲಿ ಪ್ರೇರಣೆಯುಂಟುಮಾಡಲು ಎರಡು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು. ಒಂದು ಪ್ರಚಾರ ಮಾಧ್ಯಮಗಳ ಬಳಕೆ, ಇದರಿಂದ ಕಲಿಕೆಯ ವಾತಾವರಣವನ್ನುಂಟು ಮಾಡಲು ಸಾಧ್ಯ. ಇದಕ್ಕಾಗಿ, ಚಿತ್ರ ಪ್ರದರ್ಶನ, ಮನರಂಜನೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ವಿವಿಧ ಇಲಾಖೆಗಳಲ್ಲಿರಬಹುದಾದ ಪ್ರೊಜೆಕ್ಟರ್, ಫಿಲ್ಮ್ ಸ್ಕ್ರೀನ್, ಟೇಪ್ ರೆಕಾರ್ಡರ್‌ಗಳ ಬಳಕೆ ಸುವ್ಯವಸ್ಥಿತ ರೀತಿಯಲ್ಲಿ ಮಾಡಿಕೊಳ್ಳುವುದು.ಎರಡನೆಯದಾಗಿ ವಯಸ್ಕರ ಮನಸ್ಸನ್ನು ಸೆರೆಹಿಡಿಯುವ ಕಲಿಕೆಯ ಸಾಮಗ್ರಿಗಳನ್ನೊದಗಿಸುವುದು. ಸಾಕಷ್ಟು ಪ್ರಯೋಗ ಚರ್ಚೆ, ಮತ್ತು ಅನುಭವದ ಆಧಾರದ ಮೇಲೆ ಈಗ ಇವುಗಳನ್ನು ಸಿದ್ಧಪಡಿಸಲಾಗಿದೆ. ಈಗಿರುವ ಕಲಿಯೋಣ ಬಾ ಮತ್ತು ತಿಳಿಯೋಣ ಬಾ ಪುಸ್ತಕಗಳಲ್ಲಿ ಇನ್ನೂ ಸುಧಾರಣೆ ಮಾಡಲು ಸಾಧ್ಯ. ಇದಕ್ಕೆ ಪೂರಕವಾಗಿ ಬೋಧನಾ ಸಲಕರಣೆಗಳನ್ನೊದಗಿಸಬೇಕಾಗುವುದು. ಈಗ ಚಾರ್ಟುಗಳ ಒಂದು ಸೆಟ್ಟನ್ನು ಸಿದ್ಧಪಡಿಸಿ ಹಂಚಲಾಗಿದೆ. ಈ ಕಾರ್ಯ ರಾಜ್ಯ ಸಂಪನ್ಮೂಲ ಕೇಂದ್ರದಿಂದ ನಡೆಯುತ್ತಿದೆ. ಮೈಸೂರಿನಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಇದನ್ನು ಕೇಂದ್ರ ಸರ್ಕಾರ ಸ್ಥಾಪಿಸಿದೆ. ಈ ಕೇಂದ್ರದ ಕಾರ್ಯ ಚಟುವಟಿಕೆಗಳು ಉತ್ತಮವಾದಷ್ಟು ವಯಸ್ಕರ ಶಿಕ್ಷಣ ಕಾರ್ಯದ ಯಶಸ್ಸು ಹೆಚ್ಚುತ್ತದೆ. ಈ ಕಲಿಕೆ ಸಾಮಗ್ರಿಗಳ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯ. ವಿಶ್ವವಿದ್ಯಾನಿಲಯಗಳು ಮತ್ತು

ಸಂಶೋಧನಾ ಕೇಂದ್ರಗಳು ಈ ದಿಶೆಯಲ್ಲಿ ಪ್ರಯತ್ನಗಳನ್ನು ಮಾಡುವುದು. ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಪುಸ್ತಕಗಳನ್ನು ಸಿದ್ಧ ಮಾಡುತ್ತಿರುವುದು ಈ ದಿಶೆಯಲ್ಲಿ ಇಟ್ಟ ಪ್ರಗತಿಯು ಹೆಜ್ಜೆ.

೨. ಶಿಕ್ಷಕರು ಗ್ರಾಮದ ನಿವಾಸಿಗಳೇ ಆಗಿರುವುದರಿಂದ ಅವರಿಗೆ ಮಾಹೆಯಾನ ೫೦ ರೂ.ಗಳ ಸಂಭಾವನೆ ಕೊಡಲಾಗುತ್ತದೆ. ಇವರು ಪ್ರತಿನಿತ್ಯ ವಾರದಲ್ಲಿ ೬ ದಿನಗಳು ಮಾತ್ರ ಸಾಯಂಕಾಲ ಒಂದೂವರೆ ಗಂಟೆಯ ಸಮಯ ಕೇಂದ್ರಗಳನ್ನು ನಡೆಸಬೇಕಾಗುತ್ತದೆ. ಈ ಸಂಭಾವನೆ ಬಹಳ ಕಡಿಮೆ. ಆದ್ದರಿಂದ ಇವರ ಸಂಭಾವನೆಯನ್ನು ಹೆಚ್ಚಿಸಿ ಸತ್ವಯುತವಾದ ತರಬೇತಿಯನ್ನು ಇವರಿಗೆ ಕೊಡುವುದು ಅವಶ್ಯಕ. ಸಂಭಾವನೆ ಹೆಚ್ಚಿಸುವುದರಿಂದ ಕಾರ್ಯಕ್ರಮ ಯಶಸ್ವಿಯಾಗಿ ಜರುಗುವುದೆಂದು ತಿಳಿದರೆ ತಪ್ಪಾಗುತ್ತದೆ. ಶಿಕ್ಷಕರು ಸಮರ್ಪಣ ಭಾವದಿಂದ ಗ್ರಾಮದ ಋಣ ತೀರಿಸಬೇಕೆಂಬ ಅಭಿಮಾನದಿಂದ ಕೆಲಸ ಮಾಡುವುದರಲ್ಲಿ ಯಶಸ್ಸಿನ ಗುಟ್ಟು ಅಡಗಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ಸುಧಾರಣೆಯನ್ನು ರಾಜ್ಯ ಸಂಪನ್ಮೂಲ ಕೇಂದ್ರ ಮಾಡಬೇಕು. ಈಗಿನ ತರಬೇತಿಯ ಅವಧಿ (೨೧ ದಿನಗಳಷ್ಟು) ಸಾಕು, ಅದರ ವಸ್ತು ಸಬಲವಾಗಿದೆಯೇ ಮುಂತಾದ ವಿಷಯಗಳ ಬಗ್ಗೆ ಅಧ್ಯಯನ ಮತ್ತು ವಿಶ್ಲೇಷಣೆ ಅಗತ್ಯ.

೩. ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮತ್ತು ನಗರ ಸಭೆಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸುವುದು ಅವಶ್ಯಕ. ಎಲ್ಲಿಯವರೆಗೆ ಗ್ರಾಮ ಮತ್ತು ತಾಲ್ಲೂಕು ಮುಖಂಡರು ತಮ್ಮ ತಮ್ಮ ಗ್ರಾಮ ಮತ್ತು ತಾಲ್ಲೂಕುಗಳಲ್ಲಿ ಎಲ್ಲರೂ ಅಕ್ಷರಸ್ಥರಾಗಬೇಕೆಂಬ ಅಭಿಮಾನ ತಾಳುವುದಿಲ್ಲವೋ ಅಲ್ಲಿಯವರೆಗೆ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಹಾಲಿ ನಡೆಯುತ್ತಿರುವ ಕೇಂದ್ರಗಳಿಗೆ ವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗುವಂತೆ ಅವರು ತಮ್ಮ ವೈಯಕ್ತಿಕ ಪ್ರಭಾವ ಬೀರಬೇಕು. ಈ ದಿಶೆಯಲ್ಲಿ ರಾಜ್ಯ ಸರ್ಕಾರದ ಒಂದು ಯೋಜನೆಯನ್ನು ಸಿದ್ಧಪಡಿಸುತ್ತಿದೆ.

೪. ಮೇಲ್ವಿಚಾರಕರು ಕೇವಲ ಸಂದರ್ಶನ ಕೊಟ್ಟು ವಯಸ್ಕರ ಸಂಖ್ಯೆಯನ್ನು ಬರೆದುಕೊಂಡು ಬಂದರೆ ಸಾಲದು, ಅವರು ಶಿಕ್ಷಕರೊಡನೆ ಒಂದಾಗಿ ಕೇಂದ್ರದ ಚಟುವಟಿಕೆಗಳಲ್ಲಿ ಪಾಲ್ಗೊಂಡು, ಗ್ರಾಮಸ್ಥರನ್ನು ಭೇಟಿ ಮಾಡಿ ಸಮಸ್ಯೆಗಳನ್ನು ಚರ್ಚಿಸಿ ಕೇಂದ್ರದ ಯಶಸ್ಸಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಇವರಿಗೂ ಕೂಡ ಉತ್ತಮವಾದ ರೀತಿಯಲ್ಲಿ ತರಬೇತಿ ನೀಡುವುದು ಅವಶ್ಯಕ ಮತ್ತು ಇವರೂ ಕೂಡ ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು.

೫. ವಿವಿಧ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸರಿಯಾದ ಹೊಂದಾಣಿಕೆ ಅಗತ್ಯ. ಅಕ್ಷರ ಜ್ಞಾನವಿಲ್ಲದ ಪ್ರಜೆಗಳ ಅಭಿವೃದ್ಧಿಯ ಮಾತ ನಾಡಿದರೆ ಅದು ಫಲ ಕೊಡದು. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ವಿವಿಧ ಇಲಾಖೆಗಳಲ್ಲಿರಬಹುದಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಪರಿಣಾಮ ಕಾರಿಯಾದ ರೀತಿಯಲ್ಲಿ ಅವುಗಳನ್ನು ಬಳಸಲು ಕಾರ್ಯಕ್ರಮವನ್ನು ಸಿದ್ಧ ಪಡಿಸಬೇಕು. ಮತ್ತು ಅದನ್ನು ಆಚರಣೆಯಲ್ಲಿ ತರಬೇಕು. ಇತ್ತೀಚೆಗೆ ನವದೆಹಲಿ ಯಲ್ಲಿ ನಡೆದ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಈ ವಿಷಯಕ್ಕೆ ಹೆಚ್ಚಿನ ಒತ್ತು ಕೊಡಲಾಗಿದೆ


೬. ಸಾಕ್ಷರೋತ್ತರ ಕಾರ್ಯಕ್ರಮಗಳ ಕೊರತೆಯಿಂದಾಗಿ ೧೦ ತಿಂಗಳ ಸಾಕ್ಷರತೆಯ ಕಾರ್ಯಕ್ರಮದ ನಂತರ ಪುನಃ ವಯಸ್ಕರು ನಿರಕ್ಷರತೆಯ ಕೂಪ ದಲ್ಲಿ ಬೀಳುತ್ತಾರೆ. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಪುನರ್ ಪರಿಶೀಲಿಸಲು ಕೇಂದ್ರ ಸರಕಾರ ನೇಮಿಸಿದ ಡಾ! ಡಿ. ಎಸ್. ಕೊಠಾರಿಯವರ ಸಮಿತಿ ವಯಸ್ಕರ ಶಿಕ್ಷಣಕ್ಕೆ ಮೂರು ವರ್ಷಗಳ ಕಾರ್ಯಕ್ರಮವನ್ನು ಸೂಚಿಸಿದೆ. ಎರಡನೆ ವರ್ಷದಲ್ಲಿ ತಾನು ಕಲಿತ ಅಕ್ಷರಜ್ಞಾನ ಮತ್ತು ಅರಿವಿನ ದೃಢೀಕರಣ ವನ್ನು ಮಾಡಿಕೊಳ್ಳಲು ಮತ್ತು ಮೂರನೆ ವರ್ಷದಲ್ಲಿ ಕ್ರಿಯಾಶೀಲತೆಗೆ ಸಂಬಂಧಿ ಸಿದ ಕುಶಲತೆಗಳನ್ನು ಬಲಪಡಿಸಿಕೊಂಡು ಆತ್ಮವಿಶ್ವಾಸದಿಂದ ತನ್ನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಸಹಾಯಕವಾಗು ವಂತೆ ಕಾರ್ಯಕ್ರಮಗಳಿರಬೇಕೆಂದು ಶಿಫಾರಸ್ಸು ಮಾಡಿದೆ. ನಮ್ಮ ರಾಜ್ಯದಲ್ಲಿ ೧೯೮೩-೮೪ನೆ ವರ್ಷದಿಂದ ನವಸಾಕ್ಷರ ಗಾಗಿ ಸಾಕ್ಷರೋತ್ತರ ಕಾರ್ಯಕ್ರಮ ಪ್ರಾರಂಭಿಸಲಾಗಿದು, ಅವರಿಗಾಗಿ ರಚಿತವಾದ ಪುಸ್ತಕಗಳನ್ನು ಕೇಂದ್ರಗಳಿಗೆ ಒದಗಿಸಲು ಮತ್ತು ವಯಸ್ಕರ ಶಿಕ್ಷಣ ಸಮಿತಿಯು ಪ್ರಕಟಿಸುತ್ತಿರುವ 'ಬೆಳಕು' ಪತ್ರಿಕೆಯನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ.

೭. ಈ ಕಾರ್ಯಕ್ರಮಗಳಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಮತ್ತು ಸ್ವಯಂಸೇವಾ ಸಂಸ್ಥೆಗಳನ್ನು ಹೆಚ್ಚಿನ ರೀತಿಯಲ್ಲಿ ತೊಡಗಿಸುವುದು ಅಗತ್ಯವಾಗಿದೆ. ಆದರಿಂದ ಈ ಕಾರ್ಯಕ್ರಮ ಏಕರೂಪವಾಗಿರಬೇಕೆಂಬ ನಿಯಮವಿಲ್ಲ. ಕೇಂದ್ರ ಸರಕಾರದ ಮಾರ್ಗಸೂಚಿಯಂತೆ ಈ ಕಾರ್ಯಕ್ರಮ ಗಳು : ೧) ಕಲಿಯುವವನ ಪರಿಸ್ಥಿತಿ ಹಾಗೂ ಅಗತ್ಯಕ್ಕೆ ಅನುಗುಣವಾಗಿರ ಬೇಕು. ೨) ಕಲಿಯುವ ಅವಧಿ, ಕಾಲ, ಸ್ಥಳ, ಬೋಧನಾ ವಿಧಾನ ಮುಂತಾದವು ಗಳಲ್ಲಿ ಬದಲಾವಣೆಗೆ ಆದ್ಯತೆ ಇರಬೇಕು. ೩) ವ್ಯಾಸಂಗ ಕ್ರಮ, ಕಲಿಸುವ

ಹಾಗೂ ಕಲಿಯುವ ವಸ್ತು ಮತ್ತು ಕಲಿಸುವ ವಿಧಾನ ವೈವಿಧ್ಯತೆಯಿಂದ ಕೂಡಿರಬೇಕು ಎಂದು ತಿಳಿಸಲಾಗಿದೆ. ಹೀಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಸಮಗ್ರವಾದ ರೀತಿಯಲ್ಲಿ ಯೋಚಿಸಿ ಕಾರ್ಯಾಚರಣೆಗೆ ತರುವುದು ಅಗತ್ಯವಾಗಿದೆ. ಈ ಕಾರ್ಯಕ್ರಮ ಒಂದು ಆಂದೋಲನವಾಗಿ ಏರ್ಪಡುವುದು ಕೂಡ ಅವಶ್ಯಕವಾಗಿದೆ.

ಅಂತರರಾಷ್ಟ್ರೀಯ ಸಾಕ್ಷರತಾ ದಿನದಂದು, ಈ ಕಾರ್ಯಕ್ರಮದಲ್ಲಿ ತೊಡಗಿರುವ ಎಲ್ಲರೂ ನಿಷ್ಠೆ ಮತ್ತು ದಕ್ಷತೆಯಿಂದ ಕಾರ್ಯಪ್ರವೃತ್ತರಾಗುವುದು ಅಗತ್ಯ. ವಿಶೇಷವಾಗಿ ವಯಸ್ಕರು ಮತ್ತು ಗ್ರಾಮಸ್ಥರು ಇದರ ಬಗ್ಗೆ ಹೆಚ್ಚಿನ ಆಸ್ಥೆ ಮತ್ತು ಅಭಿಮಾನ ತಾಳಬೇಕು. ಅವರು ಮನೆ ಬಾಗಿಲಿಗೆ ಬಂದ ಜ್ಞಾನದ ಬೆಳಕನ್ನು ಮನತುಂಬ ಸ್ವಾಗತಿಸಲು ತಮ್ಮ ಬಾಗಿಲುಗಳನ್ನು ತೆರೆಯಬೇಕು.

ಕೆ. ಶಾಂತಯ್ಯ



ಅನೇಕರು ಶಾಸ್ತ್ರಗಳನ್ನೋದಿದರೂ ಮೂರ್ಖರಾಗಿಯೇ ಇರುತ್ತಾರೆ.
ಕ್ರಿಯಾಶೀಲನಾದವನು ಮಾತ್ರವೇ ವಿದ್ವಾಂಸನೆನಿಸುತ್ತಾನೆ.

—ಜಗನ್ನಾಥ ಕವಿ

ಅನೇಕರು ಸಮುದ್ರದ ಗಂಭೀರ ಘರ್ಜನೆಯಂತೆ ಮಾತನಾಡುತ್ತಾರೆ.
ಆದರೆ ಅವರ ಜೀವನ ನಾರುವ ಕೊಚ್ಚೆ.

—ಖಲೀಲ್ ಜಿಬ್ರಾನ್

ರಕ್ತಪಾತವಿಲ್ಲದೆಂಬುದನ್ನು ಬಿಟ್ಟರೆ, ಚುನಾವಣೆಗಳು ಯುದ್ಧದಷ್ಟೇ ಅನರ್ಥಕಾರಿ.

—ಬರ್ನಾರ್ಡ್ ಷಾ.

ದೇವಾಲಯಗಳು

ಭರತಖಂಡ ಧರ್ಮಪ್ರಧಾನ ದೇಶ. ಇಲ್ಲಿಯ ಜನ ಅನಾದಿಕಾಲದಿಂದಲೂ ಧರ್ಮ, ದೈವಗಳ ಬಗೆಗೆ ಅಪಾರ ಶ್ರದ್ಧೆ ಭಕ್ತಿ ನಿಷ್ಠೆಗಳನ್ನು ತೋರುತ್ತ ಬಂದಿದ್ದಾರೆ. ಧರ್ಮ ದೈವಗಳು ನಾಣ್ಯದ ಎರಡು ಮುಖಗಳಿದ್ದಂತೆ. ಅದರಲ್ಲೂ ದೈವ (ಎಂದರೆ ದೇವಾಲಯಗಳು) ಈ ದೇಶದ ಸಂಸ್ಕೃತಿಯನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿವೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹರಡಿಹಬ್ಬಿನಿಂತಿರುವ ದೇವಾಲಯಗಳು ಭಕ್ತರಿಗೆ ಮುಕ್ತಿಮಂದಿರಗಳಾಗಿಯೂ ಸೌಂದರ್ಯೋಪಾಸಕರಿಗೆ ಕಲಾಕೇಂದ್ರಗಳಾಗಿಯೂ ಕಂಗೊಳಿಸುತ್ತಿವೆ. ಇವುಗಳ ನಿರ್ಮಾಣಕ್ಕೆ ಕಾರಣ ನಮ್ಮ ಜನತೆಯಲ್ಲಿ ಬೇರುಬಿಟ್ಟಿರುವ ಭಕ್ತಿ ನಿಷ್ಠೆಗಳು.

ದೇವಾಲಯ ಎಂದರೆ (ದೇವ+ಆಲಯ)=ದೇವರು ಇರುವ ಮನೆ ಎಂದರ್ಥ. ಇದಕ್ಕೆ ದೇವಸ್ಥಾನ (ದೇವ+ಸ್ಥಾನ)=ದೇವರು ಇರುವ ಸ್ಥಳ, ದೇವಾಗಾರ (ದೇವ+ಆಗಾರ)=ದೇವರು ಇರುವ ಮನೆ, ದೇವರಗುಡಿ ಎಂಬ ಹೆಸರುಗಳೂ ರೂಢಿಯಲ್ಲಿವೆ.

ದೇವಾಲಯಗಳ ನಿರ್ಮಾಣಕ್ಕೆ ಧನಿಕರೂ ದರಿದ್ರರೂ ಧರ್ಮಬುದ್ಧಿಯಿಂದ ಮುಂದಾಗಿಬಂದು ದಾನಧರ್ಮಗಳನ್ನು ನೀಡಿರುವುದಕ್ಕೆ ಅನೇಕ ಶಾಸನಾಧಾರಗಳಿವೆ. ಶ್ರವಣಬೆಳಗೊಳದ ಬಳಿಯ ಬೊಮ್ಮೇನಹಳ್ಳಿಯ ಕ್ರಿ. ಶ. ೧೧೩೮ರ ಒಂದು ಶಾಸನ ಹೀಗಿದೆ: "ಕಿಱಿಯ ಬಸವಾಚಾರಿ ಸಂಸಾರಭೀತನಾ....ಯ ಕೆಱೆಯುಂ ಕಟ್ಟಿಸಿ ದೇವಾಲಯಮುಮಂ ಮಾಡಿಸಿ ತನ್ನ....ದಾನಿ ತಪಸ್ವಿಯಾಗಿ ಧರ್ಮ್ಮವುಂ ಪ್ರತಿಪಾಳಿಸಿ." ಇದರ ಅರ್ಥ ಇಷ್ಟು: ಕಿರಿಯ ಬಸವಾಚಾರಿ ಎಂಬಾತ ಸಂಸಾರಕ್ಕೆ ಹೆದರಿ, ಕೆರೆ ಕಟ್ಟಿಸಿ, ದೇವಾಲಯ ಮಾಡಿಸಿ, ತಪಸ್ವಿಯಾಗಿ ಧರ್ಮವನ್ನು ಪ್ರತಿಪಾಲಿಸಿದ. ಇದೇ ರೀತಿ ಸಂಸಾರಕ್ಕೆ ಭಯಪಟ್ಟು ದೇವಾಲಯಗಳನ್ನು ಕಟ್ಟಿಸಿ ಪುಣ್ಯ ಸಂಪಾದಿಸಿಕೊಂಡವರು ಹಲವಾರು ಜನ. ಕಡೂರಿನ ಒಂದು ಶಾಸನದಲ್ಲಿ "ಮಹಾಸಂಸಾರ ಭೀತನಪ್ಪ ಆಯಿಕಜೀಯ ನೆತ್ತಿಸಿದ ದೇವಾಲಯ ಎಂದಿದೆ. ಸಂಸಾರಕ್ಕೆ ಬಹಳವಾಗಿ ಭೀತಿಗೊಂಡ ಆಯಿಕಜೀಯ ಎಂಬಾತನು ಕಟ್ಟಿಸಿದ ದೇವಾಲಯ ಎಂಬುದು ಇದರ ತಾತ್ಪರ್ಯ.

ಮಾನವದೇಹ ನಶ್ವರ. ಇದು ನೀರ ಮೇಲಣ ಗುಳ್ಳೆಯಂತೆ ತೋರಿ ಅಡಗಿ ಹೋಗುತ್ತದೆ. ಹೀಗೆಯೇ ಐಶ್ವರ್ಯ ಮತ್ತು ಅಧಿಕಾರ, ಇವೂ ನಶ್ವರ. ಈ ಅಶಾಶ್ವತವಾದುದನ್ನು ಶಾಶ್ವತಗೊಳಿಸಬೇಕು ಎಂಬ ಮನೋಭಾವ ನಮ್ಮ ಜನತೆಯಲ್ಲಿ ಬಲವಾಗಿದ್ದುದರಿಂದ ಹೆಣ್ಣು ಗಂಡು ಎಂಬ ಪಕ್ಷಪಾತವಿಲ್ಲದೆ ದೇವಾಲಯಗಳನ್ನು ಕಟ್ಟಿಸಿರುವುದಕ್ಕೆ ಆಧಾರಗಳಿವೆ. ದಾವಣಗೆರೆಯ ಕೊಂಡಜ್ಜಿ ಹೋಬಳಿ ಸಿಂಬನೂರು ಎಂಬಲ್ಲಿರುವ ಶಾಸನದಲ್ಲಿ ಹೀಗೆ ಹೇಳಿದೆ:

ಪಡೆದರ್ಥಂ ಕಳ್ಳರಿಂ ದಾಯಿಗರವಶಿಪರಿಂ ಭೂಪರಿಂ ಕಿಚ್ಚಿನಿಂದಂ
ಕಿಡುಗುಂ ತಾನೆಂದಿದಂ ಶಾಶ್ವತಮೆನಿಸಿ....ಶಾಶ್ವತಂ ಮಾಡೆ ಕಿಂಪಾ
ಗಡೆ ಶ್ರೀ ಪ್ರಾಣಕಾಂತ್ರನ ಜಿನಪತಿ ಸದ್ಗೃಹಮಂ ಸಿಂಬನೂರೊಳು
ಕಡುಚಲ್ವಿಂ ಮಾಡಿಸಲು ಗುಡಿಯಾಧಿಕ ಸತ್ಕೀರ್ತಿಯಿಂ ಕಾಳಿಯಕ್ಕಂ

ಈ ಪದ್ಯದ ಅರ್ಥ ಇಷ್ಟು: ಸಂಪಾದಿಸಿದ ಹಣ ಕಳ್ಳರಿಂದ ದಾಯಾದಿಗಳಿಂದ ಅರಸುಗಳಿಂದ ಬೆಂಕಿಯಿಂದ ನಾಶವಾಗುತ್ತದೆ. ಆದುದರಿಂದ ಈ ಅಶಾಶ್ವತವಾದುದನ್ನು ಶಾಶ್ವತವಾಗಿಸಬೇಕೆಂದು ಕಾಳಿಯಕ್ಕ ಎಂಬಾಕೆ ಪ್ರಸಿದ್ಧ ನಾದ ಸಿಂಬನೂರಿನಲ್ಲಿ ಜಿನಮಂದಿರವನ್ನು ಅಧಿಕವಾದ ಸತ್ಕೀರ್ತಿಯಿಂದ ಅತ್ಯಂತ ರಮ್ಯವಾಗಿ ಕಟ್ಟಿಸಿದಳು. ಇದೇ ರೀತಿ ಈಚೆಂಗಲಿನ ಹಿಂದೆ ಇದ್ದ ದಾನಚಿಂತಾಮಣಿ ಅತ್ತಿಮಬ್ಬೆ ಜಿನಬಿಂಬಗಳನ್ನು ನಿರ್ಮಾಣ ಮಾಡಿ ಸ್ವರ್ಣ ಜೊತೆಗೆ ಜಿನಪ್ರತಿಮೆಗಳನ್ನು ದಾನಮಾಡಿದಾಳೆ. ಅಷ್ಟೇ ಅಲ್ಲ ಈ ದಾನಚಿಂತಾಮಣಿ ಅಭಯದಾನವನ್ನೂ ಅನ್ನದಾನವನ್ನೂ ವಸ್ತ್ರದಾನವನ್ನೂ ಮಾಡಿದ್ದಾಳೆ.

ದೇವಾಲಯಗಳನ್ನು ಕಟ್ಟಿಸಿ ಪುಣ್ಯ ಸಂಪಾದಿಸುವುದು ಒಂದು ವಿಧವಾದರೆ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ಪುಣ್ಯಗಳಿಸುವುದು ಮತ್ತೊಂದು ವಿಧ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ನೋಡಬಹುದು. [illegible] ಒಂದು ಶಾಸನದಲ್ಲಿ "ಶಾಂತಿಬೊಮ್ಮಯ್ಯನ ಮಗ ಪಲ್ಲಯ್ಯ ಗೌಡಯ್ಯ ಬಸವಯ್ಯ ವೀರಯ್ಯ ಮದುಮಯ್ಯಂಗಳು ತಂದು ಕುಲಸ್ವಾಮಿ ನಕುಲೀಶ್ವ(ರ) ದೇವರ ಜೀರ್ಣೋದ್ಧಾರವಂ ಮಾಡಿ" ಎಂದು ಹೇಳಿದೆ. ತಮ್ಮ ಕುಲದೇವತೆಯಾದ ನಕುಲೀಶ್ವರ ದೇವರ ದೇವಾಲಯವನ್ನು ಪಲ್ಲಯ್ಯ ಗೌಡಯ್ಯ ಬಸವಯ್ಯ ವೀರಯ್ಯ ಮದುಮಯ್ಯ ಇವರು ಜೀರ್ಣೋದ್ಧಾರ ಮಾಡಿದರು. ಇದಕ್ಕಿಂತಲೂ ಸ್ವಾರಸ್ಯಕರವಾದ ಮೊಳಕಾಲ್ಮೂರಿನ ಒಂದು ಶಾಸನ ಹೀಗೆ ಸಾರುತ್ತಿದೆ:

"ಇಟ್ಟಿಗೆಯ ದೇಗುಲಮಂ ಕಳೆದು ಕಳಶನಿರ್ಮಾಣಂ ಲಿಂಗಶಿವಜೀಯರ್ ಭಿಕ್ಷಾವೃತ್ತಿಯಿನ್ನಂ ಕಲ್ಲದೇಗುಲವುಂ ದೇಗುಲಂಗಳುಮಂ ಸಮಯಿಸಿ ಕೊಣ್ಡಂ ಗಳುಮಂ ಕಟ್ಟಿಸಿದರ್". ಭಿಕ್ಷಾವೃತ್ತಿಯನ್ನು ಮಾಡುತ್ತಿದ್ದ ಶಿವಲಿಂಗಜೀಯ ಎಂಬುವರು ಇಟ್ಟಿಗೆಯ ದೇವಾಲಯ ಕೆಡಪಿಸಿ ಕಲ್ಲಿನಲ್ಲಿ ದೇವಾಲಯ ಕಟ್ಟಿಸಿದರು. ಅಲ್ಲದೆ ಬೇರೆ ದೇವಾಲಯಗಳನ್ನೂ ಕಟ್ಟಿಸಿ ಕೊಂಡಗಳನ್ನೂ ಮಾಡಿಸಿದರು ಎಂಬುದು ಇದರ ಅರ್ಥ.

ಈ ದೇಶದ ಜನತೆಯ ಧರ್ಮಬುದ್ಧಿಗೆ ಮತ್ತೊಂದು ದೃಷ್ಟಾಂತ ಕೊಡಬಹುದಾಗಿದೆ. ವಿಷ್ಣುವರ್ಧನ ಮಹಾರಾಜನ ದಂಡನಾಯಕನಾಗಿದ್ದ ಗಂಗಚಮೂಪತಿ ಎಂಬಾತ ಚೋಳಸಾಮಂತರನ್ನು ಸೋಲಿಸಿದ. ಇದರಿಂದ ಸಂತೋಷಗೊಂಡ ವಿಷ್ಣುವರ್ಧನ ಗಂಗಚಮೂಪತಿಗೆ ಏನುಬೇಕಾದರೂ ಬೇಡಿಕೊಳ್ಳುವಂತೆ ತಿಳಿಸುವನು. ಆದರೆ ಆತನು ಬೇಡಿಕೊಂಡದ್ದಾದರೂ ಏನು?

ಅವನಿಪನೆಸಗಿತ್ತ ಪಸೆಂ
ದನರಿವರವೊಲುಳಿದವಸ್ತುವಂ ಬೇಡದೆ ಭೂ
ಭುವನಂ ಬಣ್ಣಿಸೆ ಗೋವಿಂ
ದವಾಡಿಯಂ ಬೇಡಿದಂ ಜಿನಾರ್ಚನಲುಬ್ಧಂ

ಗಂಗವಾಡಿಯ ಬಸದಿಗಳೆನಿತೊಳವನಿತುಮಂ ತಾನೆಯುದ್ಧರಿಸಿದಂ
ಗಂಗವಾಡಿಯು ಗೊಮ್ಮಟದೇವರ್ಗೆ ಸುತ್ತಾಲಯಮುಮನೆಯ್ದೆ ಮಾಡಿಸಿದಂ

ರಾಜ ಬೇಡಿದ್ದನ್ನು ಕೊಡುತ್ತಾನೆ ಎಂದು ಅವರಿವರ ಹಾಗೆ ಲೌಕಿಕವಾದ ವಸ್ತುಗಳನ್ನು ಬೇಡಿಕೊಳ್ಳದೆ ಗೋವಿಂದವಾಡಿ ಎಂಬ ಗ್ರಾಮ ಪಡೆದು ಅದನ್ನು ಗೊಮ್ಮಟೇಶ್ವರ ದೇವರ ಪೂಜೆಗೆ ಬಿಟ್ಟುಕೊಟ್ಟ. ಗಂಗವಾಡಿಯಲ್ಲಿದ್ದ ಬಸದಿಗಳೆಲ್ಲವನ್ನೂ ಜೀರ್ಣೋದ್ಧಾರ ಮಾಡಿದ. ಗೊಮ್ಮಟದೇವಾಲಯಕ್ಕೆ ಸುತ್ತುಗೋಡೆ (ಪ್ರಾಕಾರ) ಯನ್ನು ಕಟ್ಟಿಸಿದ. ಎಂಬುದು ಇದರ ತಾತ್ಪರ್ಯ.

ದೇವಾಲಯಗಳನ್ನು ಕಟ್ಟಿಸುತ್ತಿದ್ದವರ ಹೆಸರುಗಳನ್ನೇ ಆ ದೇವಾಲಯಗಳಿಗೆ ಇಡುತ್ತಿದ್ದುದು ಒಂದು ಸಂಪ್ರದಾಯವಾಗಿದ್ದಂತೆ ಕಂಡುಬರುತ್ತದೆ. ಇದಕ್ಕೆ ಸಾಕಷ್ಟು ಶಾಸನಾಧಾರಗಳೂ ಇವೆ. ವಿಜಯಾದಿತ್ಯ ಎಂಬಾತ ಕಟ್ಟಿಸಿದ ದೇವಾಲಯ ವಿಜಯಾದಿತ್ಯ ಭಟ್ಟಾರಕ ದೇವಸ್ಥಾನ. ಲೋಕಮಹಾದೇವಿ ಕಟ್ಟಿಸಿದ್ದು ಲೋಕೇಶ್ವರ ಭಟ್ಟಾರಕ ದೇವಸ್ಥಾನ. ಸಿದಿಲಂಕರಾಮ ಕಟ್ಟಿಸಿದ ದೇವಾಲಯಕ್ಕೆ ಸಿದಿಲೇಶ್ವರ ಎಂದೂ ಕೋಟಿಗಾವುಂಡ ಕಟ್ಟಿಸಿದುದಕ್ಕೆ ಕೋಟೀಶ್ವರ ಎಂದೂ ಚಾಮರಾಜನಗರದಲ್ಲಿ ಚಾಮರಾಜಒಡೆಯರು ಕಟ್ಟಿಸಿದ

ದೇವಾಲಯಕ್ಕೆ ಚಾಮರಾಜೇಶ್ವರ ಎಂದೂ ಹೆಸರುಗಳಿವೆ. ವ್ಯಕ್ತಿಗಳ ಹೆಸರಿನಲ್ಲಿ ದೇವಾಲಯಗಳು ನಿರ್ಮಾಣಗೊಂಡಿರುವುದು ಇಂದು ಹೊಸದೇನೂ ಅಲ್ಲ.

ಭಾರತೀಯರ ಜನಜೀವನದಲ್ಲಿ ದೇವಾಲಯಗಳು ಮಹತ್ತರ ಪಾತ್ರವನ್ನು ನಿರ್ವಹಿಸಿವೆ ಈ ದೇವಾಲಯಗಳ ನಿರ್ಮಾಣ ನಮ್ಮ ಜನರ ಧರ್ಮಬುದ್ಧಿಗೂ ದೈವಭಕ್ತಿಗೂ ಚಿರಂತನ ಸಾಕ್ಷಿಯಾಗಿದೆ.

ಎನ್. ಬಸವಾರಾಧ್ಯ



ಆರೋಗ್ಯವು ಒಳ್ಳೇ ಲಾಭವಾಗಿದೆ. ಸಂತೋಷವು ಒಳ್ಳೇ ಧನವಾಗಿದೆ. ವಿಶ್ವಾಸವು ಒಳ್ಳೆಯ ಬಂಧನವಾಗಿದೆ. ನಿರ್ವಾಣವು ನಿಜವಾದ ಸುಖವಾಗಿದೆ.

—ಮಹಾವೀರ

ಜ್ಞಾನದ ಗುರಿ ಜ್ಞಾನವೇ ಹೊರತು ಹಣವಾಗಲಿ, ಯಶಸ್ಸಾಗಲಿ ಅಲ್ಲ.

—ನ್ಯೂಮನ್

ಚಿನ್ನ, ಬೆಳ್ಳಿಗಳು ಮಾತ್ರ ನಾಣ್ಯಗಳಲ್ಲ. ಗುಣವೂ ನಾಣ್ಯವೇ. ಇದು ಜಗತ್ತಿನ ಎಲ್ಲ ಕಡೆಗೂ ಚಲಾವಣೆಯಾಗುತ್ತದೆ.

—ಸಾಫೋಕ್ಲಿಸ್

ಮುಖರ್ಜಿ ಪತ್ತೆ ಮಾಡಿದ ಶಾಸ್ತ್ರಿ


ಸುಮಾರು ೭೦ ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಕ್ತನ ಸಂಶೋಧನಾಲಯದಲ್ಲಿ ಶ್ರೀ ಆರ್. ಶ್ಯಾಮಾಶಾಸ್ತ್ರಿಗಳು ಈಗ ವಿಶ್ವಪ್ರಸಿದ್ಧ ವಾಗಿರುವ ಕೌಟಿಲ್ಯ ಬರೆದ ಅರ್ಥಶಾಸ್ತ್ರವನ್ನು ಪತ್ತೆ ಮಾಡಿದರೆ, ಆ ಶಾಸ್ತ್ರಿ ಗಳನ್ನು, ಆಗ ಕಲ್ಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಆಶುತೋಷ್ ಮುಖರ್ಜಿ ಪತ್ತೆಮಾಡಿಕೊಟ್ಟ ಸೋಜಿಗ ನಡೆಯಿತು.

೧೯೧೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಮಾರಂಭವೊಂದರಲ್ಲಿ ಭಾಗ ವಹಿಸಲು ಮೈಸೂರಿಗೆ ಆಗಮಿಸಿದ್ದ ಆಶುತೋಷ್ ಮುಖರ್ಜಿಯವರು, ಪ್ರಾಕ್ತನ ಸಂಶೋಧನಾಲಯವನ್ನು ನೋಡಲು ಇಚ್ಛಿಸಿದರು. ಹಾಗೆಯೇ ಮುಖರ್ಜಿ ಓಲೆಗರಿಗಳ ಭಂಡಾರ ಶಾಖೆಯತ್ತ ಬಂದಾಗ ನಡುವಯಸ್ಸಿನ ವ್ಯಕ್ತಿ ಯೊಬ್ಬರು ಕುಳಿತುಕೊಂಡು ಒಂದುಕಡೆ ಓರಣವಾಗಿ ಕ್ರಮಾನುಸಾರ ಜೋಡಿ ಸಿದ್ದ ಓಲೆಗರಿಗಳು ಮತ್ತು ಇನ್ನೊಂದು ಕಡೆ ಓಲೆಗರಿ ಗ್ರಂಥದ ಇಂಗ್ಲೀಷ್ ಭಾಷಾಂತರ ಪ್ರತಿಗಳ ಕಟ್ಟುಗಳನ್ನು ಕಂಡು ಆಕರ್ಷಿತರಾದರು. ಇದೇನು? ಎಂದು ಕೇಳಿದಾಗ ಆ ವ್ಯಕ್ತಿ "ಚಂದ್ರಗುಪ್ತಮೌರ್ಯ ಚಕ್ರವರ್ತಿ ಕಾಲದಲ್ಲಿ ಕೌಟಿಲ್ಯ ಬರೆದಿದ್ದ ಅರ್ಥಶಾಸ್ತ್ರದ ಮೂಲ ಪ್ರತಿಗಳು. ಅವುಗಳಲ್ಲಿ ಬರೆದಿರುವ ಅಂಶಗಳು ಉಪಯುಕ್ತವಾಗಿವೆ. ಆ ಅಂಶಗಳ ಅನುಷ್ಠಾನ ರಾಜ್ಯದ ಆಡಳಿತ ಅವರಲ್ಲು ಅರ್ಥವ್ಯವಸ್ಥೆ ಸಮರ್ಪಕವಾಗಿರಿಸಲು ಪರಿಣಾಮಕಾರಿ ಕ್ರಮವಾಗಿವೆ" ಎಂದು ಹೇಳಿದರು. ಮುಖರ್ಜಿಯವರಲ್ಲಿ ಈ ಮಾತು ಕುತೂಹಲ ಕೆರಳಿ ಮರುದಿನ ನಿರ್ಗಮಿಸಬೇಕಾಗಿದುದನ್ನು ಮುಂದೂಡಿ, ಮೂರು ದಿವಸ ಮೈಸೂರಿನಲ್ಲಿ ಉಳಿದು ಪ್ರಾಕ್ತನ ಸಂಶೋಧನಾಲಯದ ವಿವಿಧ ಶಾಖೆಗಳಿಗೆ ಭೇಟಿ ನೀಡಿ ಬಹುತೇಕ ಪ್ರಾಚೀನ ಅಪ್ರಕಟಿತ ಕೃತಿಗಳ ಮಾಹಿತಿ ಅರಿತರು.

ಆಶುತೋಷ್ ಮುಖರ್ಜಿಯವರು ಅಷ್ಟಕ್ಕೆ ಸುಮ್ಮನಿರದೆ ಆರ್. ಶ್ಯಾಮಾ ಶಾಸ್ತ್ರಿಗಳನ್ನು ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿ ಅನೇಕ ವಿದ್ವತ್ಪೂರ್ಣ ಭಾಷಣ ಮಾಡಿಸಿ, ಶಾಸ್ತ್ರಿಗಳನ್ನು ರಾಷ್ಟ್ರಕ್ಕೆ ಪರಿಚಯ ಮಾಡಿಸಿ, ಅವರೆಂತಹ ಪರಿಣತ ಸಂಶೋಧಕರೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಈ ಉಪನ್ಯಾಸ ಗಳಿಂದ ಗಳಿಸಿದ ಹಣ ಮತ್ತಿತರ ಸೌಕರ್ಯಗಳಿಂದ ನಂತರ ಮೈಸೂರಿನ ಚಾಮುಂಡಿಪುರಂನಲ್ಲಿ ಕಟ್ಟಿಸಿದ ಸ್ವಂತ ಮನೆಗೆ ಶಾಸ್ತ್ರಿಗಳು "ಆಶುತೋಷ್ ಸದನ" ಎಂಬ ನಾಮಫಲಕ ಹಾಕಿಸಿದರು.

ಒಮ್ಮೆ ಆಗಿನ ಮೈಸೂರು ಮಹಾರಾಜರು ವಿದೇಶ ಪ್ರವಾಸ ಕೈಗೊಂಡಿದ್ದಾಗ ಜರ್ಮನಿಯಲ್ಲಿ ತಮ್ಮನ್ನು ಮೈಸೂರಿನ ದೊರೆ ಎಂದು ಅಲ್ಲಿನ ವಿದ್ವಾಂಸರಿಗೆ ಪರಿಚಯಿಸಿದಾಗ ಅವರು "ತಾವು ವಿದ್ವಾಂಸ ಆರ್. ಶಾಮಾಶಾಸ್ತ್ರಿಗಳ ಮೈಸೂರಿನವರೆ?" ಎಂದು ಕೇಳಿದಾಗ ಮಹಾರಾಜರಿಗೆ ತುಂಬಾ ಆಶ್ಚರ್ಯವಾಯಿತಂತೆ. ಆಗ ಕೌಟಿಲ್ಯನ ಅರ್ಥಶಾಸ್ತ್ರದ ಇಂಗ್ಲೀಷ್ ಪುಸ್ತಕಗಳು ವಿದೇಶಗಳಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದುದೇ ಇದಕ್ಕೆ ಕಾರಣ. ವಿದೇಶ ಪ್ರವಾಸದಿಂದ ಮೈಸೂರಿಗೆ ಹಿಂತಿರುಗಿದ ಮೇಲೆ ಶ್ಯಾಮಾಶಾಸ್ತ್ರಿಗಳನ್ನು ಅರಮನೆಗೆ ಕರೆಸಿ ನಸು ನಗುತ್ತಾ "ಶಾಸ್ತ್ರಿಗಳಲ್ಲಿ ಇಲ್ಲಿ ನೀವು ನಮ್ಮ ಪ್ರಜೆ, ಆದರೆ ವಿದೇಶಗಳಲ್ಲಿ ನಾವು ನಿಮ್ಮ ಪ್ರಜೆ" ಎಂದು ವಿನೋದವಾಡಿ ಆಗಿನ ಸಂಪ್ರದಾಯಕ್ಕೆ ತಕ್ಕಂತೆ ಗೌರವಿಸಿ ಕಳುಹಿಸಿದರೆಂಬುದು ಗಮನಾರ್ಹವೆನ್ನಬಹುದು.

ಹ. ಲ. ಶ್ರೀಕಂಠಮೂರ್ತಿ



ಇನ್ನೊಬ್ಬರ ತಪ್ಪನ್ನು ಕೆದಕುವುದು ಯಾವಾಗಲೂ ಲಾಭವಿಲ್ಲದ ಕೆಲಸ.

—ರೆಡ್‌ಯಾರ್ಡ್ ಕಿಪ್ಲಿಂಗ್

ಬಹುಕಾಲ ದುಃಖ ಪೀಡಿತನಾಗಿದ್ದರೆ ದುಃಖವನ್ನು ಕಂಡು ನಗುವಂತಾಗುತ್ತದೆ.

—ಥಾಮಸ್ ಹಾರ್ಡಿ

ಸರಿಸಮಾನರು

(ಕಿರುನಾಟಕ)

[ಒಂದು ಚಿಕ್ಕ ಕೊಠಡಿ. ಪ್ರೊಫೆಸರ್ ಹಾಗೂ ಶ್ರೀಮತಿ ಶರ್ಮ ಯಾರಿಗೋ ಕಾಯುತ್ತಿರುವಂತಿದೆ. ಪ್ರೊಫೆಸರ್ ಪತ್ರಿಕೆ ಓದುತ್ತಿದ್ದರೆ ಶ್ರೀಮತಿ ಶರ್ಮ ಸ್ವೆಟರ್ ಹೆಣೆಯುವುದರಲ್ಲಿ ನಿರತರಾಗಿದ್ದಾರೆ. ಇಬ್ಬರೂ ಮೌನ. ದೇವದತ್ ಕೊಠಡಿಗೆ ಧಾವಿಸಿಬರುತ್ತಾನೆ. ಮುಖದಲ್ಲಿ ಅಸಹನೆ. ತನ್ನ ತಂದೆತಾಯಿಗಳ ಎದುರಿರುವ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ. ಆದರೆ ಅವರು ಅವನನ್ನು ಗಮನಿಸುವುದೇ ಇಲ್ಲ. ಪ್ರೊಫೆಸರ್ ಓದುತ್ತಲೇ ಇದ್ದಾರೆ; ಶ್ರೀಮತಿ ಶರ್ಮ ಸ್ವೆಟರ್ ಹೆಣೆಯುತ್ತಲೇ ಇದ್ದಾರೆ. ಕೊನೆಗೆ ದೇವದತ್ತನೇ ಧೈರ್ಯಮಾಡಿ ಮಾತು ಪ್ರಾರಂಭಿಸುತ್ತಾನೆ.]

ದೇವದತ್ : ಮತ್ತೆ ಹೇಳುತ್ತೇನೆ—ಈ ವ್ಯವಸ್ಥೆ ನನಗೆ ಇಷ್ಟವಿಲ್ಲ.

(ಪ್ರೊಫೆಸರ್ ಹಾಗೂ ಶ್ರೀಮತಿ ಶರ್ಮ ದೇವದತ್ತನನ್ನು ನೋಡುತ್ತಾರೆ.)

ಪ್ರೊ : ಇನ್ನೊಮ್ಮೆ ಹದಿನೈದರವರೆಗೆ ಎಣಿಸು.

(ದೇವದತ್ ೧ರಿಂದ ೧೫ರ ವರೆಗೆ ಎಣಿಸುತ್ತಾನೆ. ಮತ್ತೆ ಪ್ರೊಫೆಸರ್ ಓದುವುದನ್ನೂ ಶ್ರೀಮತಿ ಶರ್ಮ ಸ್ವೆಟರ್ ಹೆಣೆಯುವುದನ್ನೂ ಮುಂದುವರಿಸುತ್ತಾರೆ. ದೇವದತ್ ಕೊಠಡಿಯಲ್ಲಿ ಶತಪಥ ಸುತ್ತ ತೊಡಗುತ್ತಾನೆ. ಹೊರಗೆ ಕಾರ್ ನಿಂತ ಶಬ್ದ. ಪ್ರೊಫೆಸರ್ ಕೈಗಡಿಯಾರ ನೋಡಿಕೊಳ್ಳುತ್ತಾರೆ.)

ಪ್ರೊ : ಜಡ್ಜ್ ಸಾಹೇಬರು ಬಂದಿರಬೇಕು. ದೇವದತ್, ಹೋಗಿನೋಡು.

(ದೇವದತ್ ಹೊರಗೆ ಹೋಗಿ ನೋಡಿಬರುತ್ತಾನೆ.)

ದೇವದತ್ : ಇಲ್ಲ; ಅವರು ಬಂದಿಲ್ಲ. (ಹಿಂದಿನ ಸ್ವರದಲ್ಲಿಯೇ) ನನಗೆ ಈ ವ್ಯವಸ್ಥೆ ಇಷ್ಟವಿಲ್ಲ.

ಪ್ರೊ : ಆದರೆ ನನಗೆ ಇಷ್ಟವಿದೆ.

ಶ್ರೀಮತಿ ಶರ್ಮ : ನನಗೂ....

ಪ್ರೊ : ಈ ವ್ಯವಸ್ಥೆಯನ್ನು ನೀನು ವಿರೋಧಿಸುತ್ತಿರುವುದಾದರೂ ಏಕೆ? ಅಲ್ಲದೆ ಇದು ನಿನ್ನ ಮದುವೆಗೇ ಸಂಬಂಧಪಟ್ಟ ವಿಷಯ. ಹುಡುಗಿಯನ್ನು ನೀನು ನೋಡಬೇಕು. ನೋಡಿ ಅಭಿಪ್ರಾಯ ಹೇಳಬೇಕು. ಎಂತಲೇ ಮಗಳೊಂದಿಗೆ ಇಲ್ಲಿಗೇ ಬರುವಂತೆ ಜಡ್ಜ್ ಸಾಹೇಬರಿಗೆ ಹೇಳಿದ್ದೇನೆ. ಹುಡುಗಿಯನ್ನು ನೋಡು; ಅವಳೊಡನೆ ಮಾತನಾಡು. ನಿನಗೆ ಒಪ್ಪಿಗೆಯಾದರೆ ವಿರೋಧಿಸಲು ನಾವಾದರೂ ಯಾರು?

ಶ್ರೀಮತಿ ಶರ್ಮ: ಹೌದು. ವಿರೋಧಿಸಲು ನಾವಾದರೂ ಯಾರು?

(ಇನ್ನೊಮ್ಮೆ ಕಾರು ನಿಂತ ಶಬ್ದ. ಪ್ರೊಫೆಸರ್ ದೇವದತ್ತನನ್ನು ನೋಡುತ್ತಾರೆ. ಅವನು ಹೊರಗೆ ಹೋಗಿ ನೋಡಿ ಬರುತ್ತಾನೆ.)

ಪ್ರೊ: (ಗಟ್ಟಿಯಾಗಿ) ದೇವದತ್....

(ದೇವದತ್ ೧ ರಿಂದ ೧೫ರ ವರೆಗೆ ಎಣಿಸಲು ಪ್ರಾರಂಭಿಸುತ್ತಾನೆ.)

ಪ್ರೊ: (ಕೈಗಡಿಯಾರ ನೋಡುತ್ತಾ) ಐದು ಗಂಟೆ. ಜಡ್ಜ್ ಸಾಹೇಬರು ಇದೀಗ ಬರುತ್ತಾರೆ.

(ಜಡ್ಜ್ ಸಾಹೇಬರ ಪ್ರವೇಶ. ಜೊತೆಯಲ್ಲಿ ಅವರ ಮಗಳು ಕೂಡ.)

ಜಡ್ಜ್: ನೋಡಿ ಸರಿಯಾಗಿ ಐದು ಗಂಟೆಗೇ ಬಂದೆ. ನನಗೆ ಸಮಯ ಪಾಲನೆಯಲ್ಲಿ ತುಂಬ ನಿಷ್ಠೆ....

(ಪ್ರೊಫೆಸರ್ ಹಾಗೂ ಶ್ರೀಮತಿ ಶರ್ಮ ಅವರಿಗೆ ನಮಸ್ಕರಿಸುತ್ತಾರೆ; ಕುಳಿತುಕೊಳ್ಳುವಂತೆ ತಿಳಿಸುತ್ತಾರೆ. ಆದರೆ ಜಡ್ಜ್ ಸಾಹೇಬರು ನಿಂತೇ ಇರುತ್ತಾರೆ.)

ಜಡ್ಜ್: ಇಲ್ಲ. ಕುಳಿತು ಕೊಳ್ಳಲು ನನಗೆ ಸಮಯವಿಲ್ಲ. ಸರಿಯಾಗಿ ಐದು ಗಂಟೆ ಐದು ನಿಮಿಷದ ವೇಳೆಗೆ ನಾನು ಚೀಫ್ ಜಸ್ಟೀಸ್ ಸಾಹೇಬರನ್ನು ಭೇಟಿಯಾಗಬೇಕಾಗಿದೆ—ಸರಿಯಾಗಿ ಐದು ಗಂಟೆ ಐದು ನಿಮಿಷಕ್ಕೆ. ಇವಳು ಇಲ್ಲಿರುತ್ತಾಳೆ. ಅನಂತರ ಕರೆದೊಯ್ಯಲು ಕಾರನ್ನು ಕಳುಹಿಸುತ್ತೇನೆ. ದೇವದತ್, ನಾಳೆ ನೀವು ನಮ್ಮ ಮನೆಗೆ ಊಟಕ್ಕೆ ಬರಬೇಕು. ಎಂಟು ಗಂಟೆಗೆ; ಸರಿಯಾಗಿ ಎಂಟುಗಂಟೆಗೆ....

(ಸರಿಯಾಗಿ ಐದು ಗಂಟೆ ಐದು ನಿಮಿಷಕ್ಕೆ ನಾನು ಚೀಫ್ ಜಸ್ಟೀಸ್ ಸಾಹೇಬರನ್ನು ನೋಡಬೇಕು ಎಂದು ಜಪಿಸುತ್ತಾ ಜಡ್ಜ್ ಸಾಹೇಬರು ಹೊರಡುತ್ತಾರೆ. ಆಗ ಎಲ್ಲರೂ ಹುಡುಗಿಯತ್ತ ದೃಷ್ಟಿಹರಿಸುತ್ತಾರೆ. ಅವಳು ಕೊಠಡಿಯ ಮೂಲೆಯಲ್ಲಿ ನಿಂತೇ ಇರುತ್ತಾಳೆ—ಅವರನ್ನು ಕಂಡೂ ಕಾಣದಂತೆ.)

ಪ್ರೊ: ಕುಳಿತುಕೊಳ್ಳಮ್ಮ.

ಶ್ರೀಮತಿ ಶರ್ಮ: ಕುಳಿತುಕೊಳ್ಳಮ್ಮ.

(ಹುಡುಗಿ ಕೇಳಿಸಿಕೊಂಡಂತಿಲ್ಲ)

ಹುಡುಗಿ: ಏನಾದರೂ ಹೇಳಿದಿರಾ?

ಪ್ರೊ: (ಗಟ್ಟಿಯಾಗಿ) ಕುಳಿತುಕೊಳ್ಳಮ್ಮ ಎಂದೆ.

ಶ್ರೀಮತಿ ಶರ್ಮ : (ಮತ್ತೂ ಗಟ್ಟಿಯಾಗಿ) ಕುಳಿತುಕೊಳ್ಳಮ್ಮ.

(ಹುಡುಗಿಗೆ ಕೇಳುತ್ತದೆ. ಅವಳು ನಿಧಾನವಾಗಿ ಸೋಫದತ್ತ ಸಾಗುತ್ತಾಳೆ. ನಡುವೆ ಮೇಜಿಗೆ ಢಿಕ್ಕಿಹೊಡೆಯುತ್ತಾಳೆ. ಆದರೆ ಹೇಗೋ ಸಾವರಿಸಿಕೊಂಡು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾಳೆ.)

ಪ್ರೊ : ದೇವದತ್, ನೀನೂ ಕುಳಿತುಕೋ. (ಹುಡುಗಿಗೆ) ಇವನೇ ನಮ್ಮ ಮಗ ದೇವದತ್.

(ಹುಡುಗಿಗೆ ಕೇಳಿಸಿದಂತೆ ಕಾಣುವುದಿಲ್ಲ.)

ಶ್ರೀಮತಿ ಶರ್ಮ : (ಗಟ್ಟಿಯಾಗಿ) ಇವನೇ ನಮ್ಮ ಮಗ ದೇವದತ್.

(ಹುಡುಗಿಗೆ ಕೇಳುತ್ತದೆ. ಆದರೆ ಅವಳು ದೇವದತ್ತನಿಗೆ ವಂದಿಸುವ ಬದಲು ಪ್ರೊಫೆಸರರಿಗೆ ವಂದಿಸುತ್ತಾಳೆ.)

ಪ್ರೊ : ದೇವದತ್ ಆ ಕಡೆ ಕುರ್ಚಿಯಲ್ಲಿ ಕುಳಿತಿದ್ದಾನೆ (ಗಟ್ಟಿಯಾಗಿ) ನಿನ್ನ ಹೆಸರು?

ಹುಡುಗಿ : ಶಿಬ್ಬ.

ಪ್ರೊ : ಶಿಬ್ಬ? ವಿಚಿತ್ರ ಹೆಸರು!

(ಹುಡುಗಿ ಏಳುತ್ತಾಳೆ ಮತ್ತು ನೆಲದಲ್ಲಿ ಏನನ್ನೋ ಹುಡುಕ ತೊಡಗುತ್ತಾಳೆ. ಎಲ್ಲರೂ ಆಸಕ್ತ ಲಕ್ಷ್ಯದಿಂದ ನೋಡುತ್ತಾರೆ.)

ಹುಡುಗಿ : ನನ್ನ ಕನ್ನಡಕ ಎಲ್ಲೋ ಬಿದ್ದು ಹೋಗಿದೆ. ಹುಡುಕಿ ಕೊಡುತ್ತೀರಾ?

(ಪ್ರೊಫೆಸರ್ ಹಾಗೂ ಶ್ರೀಮತಿ ಶರ್ಮರು, ಅವಳ ಕನ್ನಡಕವನ್ನು ಹುಡುಕತೊಡಗುತ್ತಾರೆ.)

ಪ್ರೊ : ಯಾವ ಕನ್ನಡಕವೂ ಇಲ್ಲಿ ಇಲ್ಲವಲ್ಲ?

ಶ್ರೀಮತಿ ಶರ್ಮ : ಇಲ್ಲ, ಯಾವ ಕನ್ನಡಕವೂ ಇಲ್ಲಿಲ್ಲ.

ದೇವದತ್ : ಏಕೆಂದರೆ ಅವಳು ಇಲ್ಲಿಗೆ ಬರುವಾಗ ಕನ್ನಡಕವನ್ನು ಹಾಕಿಕೊಂಡೇ ಬಂದಿಲ್ಲ.

ಪ್ರೊ : ಹೌದು. ನೀನು ಹೇಳಿದ್ದು ಸರಿ.

ಶ್ರೀಮತಿ ಶರ್ಮ : ಹೌದು. ದೇವದತ್ ಹೇಳಿದ್ದು ಸರಿ.

ಪ್ರೊ : (ಹುಡುಗಿಗೆ) ಚಿಂತಿಸಬೇಡ ಬಹುಶಃ ನೀನು ಮನೆಯಲ್ಲಿಯೇ ಬಿಟ್ಟು ಬಂದಿರಬೇಕು. ನೀನು ಏನು ಓದುತ್ತಿದ್ದೀಯೆ?

(ಹುಡುಗಿ ಉತ್ತರಿಸುವುದಿಲ್ಲ. ಪ್ರೊಫೆಸರ್ ಮತ್ತೆ ಗಟ್ಟಿಯಾಗಿ ಅದೇ ಪ್ರಶ್ನೆ ಕೇಳುತ್ತಾರೆ.)

ಹುಡುಗಿ : (ಗಟ್ಟಿಯಾಗಿಯೇ) ಪದವಿಯ ಮೊದಲ ವರ್ಷದ ತರಗತಿಯಲ್ಲಿ ಕಳೆದ ಎರಡು ವರ್ಷಗಳಿಂದ. ಆದರೆ ನನ್ನ ಕನ್ನಡಕ ಎಲ್ಲಿ ಹೋಯಿತು? ಇಲ್ಲಿಗೆ ಬರುವಾಗ ನಾನು ನಿಜವಾಗಿಯೂ ಕನ್ನಡಕ ಹಾಕಿಕೊಂಡು ಬರಲಿಲ್ಲವೇ?

ಪ್ರೊ : ಇಲ್ಲ.

(ಸ್ವಲ್ಪ ಸಮಯ ಮೌನ.)

ಪ್ರೊ : ಯಾವ ಕಾಲೇಜಿನಲ್ಲಿ ಓದುತ್ತಿದ್ದೀಯೆ?

ಹುಡುಗಿ : ಹೇಳಲಿಲ್ಲ? ಪದವಿಯ ಮೊದಲ ವರ್ಷದ ತರಗತಿಯಲ್ಲಿ–ಕಳೆದ ಎರಡು ವರ್ಷಗಳಿಂದ (ಥಟ್ಟನೆ) ಓಹ್!

ಪ್ರೊ : ಇಲ್ಲ. ಇಲ್ಲಿಗೆ ಬರುವಾಗ ನೀನು ನಿಜವಾಗಿಯೂ ಕನ್ನಡಕ ಹಾಕಿಕೊಂಡು ಬಂದಿರಲಿಲ್ಲ

ಹುಡುಗಿ : ಕನ್ನಡಕದ ವಿಷಯದಲ್ಲಿ....ಮತ್ತೆ ಪ್ರಾರಂಭವಾಯಿತು.

ಪ್ರೊ : ಏನು ಪ್ರಾರಂಭವಾಯಿತು?

ಹುಡುಗಿ : ನನ್ನ ಎದೆಗಾಲಿನಲ್ಲಿ ನೋವು. (ನರಳುತ್ತಾ) ಮನೆಗೆ ಹೇಗೆ ಹೋಗಲಿ?

ಪ್ರೊ : ಕಾರು ಬರುತ್ತದಮ್ಮ; ಚಿಂತಿಸಬೇಡ.

ಹುಡುಗಿ : ಆದರೆ, ಇಲ್ಲಿಗೆ ಬರುವಾಗ ನಿಜವಾಗಿಯೂ ನಾನು ಕನ್ನಡಕ ಹಾಕಿಕೊಂಡು ಬಂದಿರಲಿಲ್ಲ ತಾನೆ?

ಪ್ರೊ : ನಿಜವಾಗಿಯೂ.

ಶ್ರೀಮತಿ ಶರ್ಮ : (ಗಟ್ಟಿಯಾಗಿ) ನಿಜವಾಗಿಯೂ.

ಹುಡುಗಿ : ಹಾಗಾದರೆ ಹೋಗುತ್ತೇನೆ ಕಾರೂ ಈಗ ಬರಬಹುದು.

(ಹೋಗುತ್ತಾಳೆ–ಎಡವುತ್ತಾ, ನಡುವೆ ಬಂದಿರುವ ಸಲ ಪೀಠೋಪಕರಣಗಳಿಗೆ ಡಿಕ್ಕಿ ಹೊಡೆಯುತ್ತಾ)

ಪ್ರೊ : ಜಡ್ಜ್ ಸಾಹೇಬರು ತಮ್ಮ ಮಗಳು ಪ್ರತಿಭಾಶಾಲಿ ವಿದ್ಯಾರ್ಥಿನಿ ಎಂದಿದ್ದರಲ್ಲ?

ಶ್ರೀಮತಿ ಶರ್ಮ : ಮತ್ತು ಸೊಗಸಾಗಿ ಹಾಡುತ್ತಾಳೆ ಎಂದೂ.

ಪ್ರೊ : ಆದರೆ ಅವಳು ಕುರುಡಿ.

ಶ್ರೀಮತಿ ಶರ್ಮ : ಮತ್ತು ಕಿವುಡಿ.

ದೇವದತ್ : ಆದರೆ ಮೂಕಿಯಲ್ಲ; ಮಾತನಾಡುತ್ತಾಳೆ.

ಶ್ರೀಮತಿ ಶರ್ಮ : (ಅವನ ಮಾತಿಗೆ ಗಮನ ಕೊಡದೆ) ಮತ್ತು ಸಂಧಿ ವಾತದ ಲಕ್ಷಣವೂ ಇದ್ದಹಾಗಿದೆ.

ಪ್ರೊ : ಪೆದ್ದು ಕೂಡ. ಐ.ಕ್ಯೂ. ಪೂರ್ತಿ ಸೊನ್ನೆ.

ಶ್ರೀಮತಿ ಶರ್ಮ : ಆದರೆ ಹೆಸರು ಮಾತ್ರ ತುಂಬ ತಮಾಷೆಯಾಗಿದೆ.

ಪ್ರೊ : ನನಗಂತೂ ಹುಡುಗಿ ಒಪ್ಪಿಗೆಯಾಗಿಲ್ಲ.

ಶ್ರೀಮತಿ ಶರ್ಮ : ನನಗೂ ಕೂಡ.

ದೇವದತ್ : ಆದರೆ ನಾನು ಒಪ್ಪಿದ್ದೇನೆ. ನಾಳೆ ಜಡ್ಜ್ ಸಾಹೇಬರ ಮನೆಗೆ ಊಟಕ್ಕೂ ಹೋಗುತ್ತೇನೆ.

ಪ್ರೊ : ನನಗೆ ಈ ವ್ಯವಸ್ಥೆ ಇಷ್ಟವಿಲ್ಲ.

ಶ್ರೀಮತಿ ಶರ್ಮ : ನನಗೂ ಇಷ್ಟವಿಲ್ಲ.

ದೇವದತ್ : ಆದರೆ ನನಗೆ ಇಷ್ಟವಿದೆಯಲ್ಲ ?

(ತನ್ನ ತಂದೆ–ತಾಯಿಯರನ್ನು ಅಚ್ಚರಿಗೊಳಿಸುವ ರೀತಿಯಲ್ಲಿ ದೇವದತ್ ಹೊರಗೆ ನಡೆಯುತ್ತಾನೆ.)

(ಮರುದಿನ ಜಡ್ಜ್ ಸಾಹೇಬರ ಊಟದ ಕೊಠಡಿ ಹುಡುಗಿಯೊಬ್ಬಳೇ ಕೈಗಡಿಯಾರ ನೋಡುತ್ತ ಕುಳಿತುಕೊಂಡಿದ್ದಾಳೆ. ಎಂಟುಗಂಟೆ ಹೊತ್ತಿಗೆ ಜಡ್ಜ್ ಸಾಹೇಬರು ಬರುತ್ತಾರೆ.)

ಜಡ್ಜ್ : ಪ್ರತಿಭಾ, ದೇವದತ್ ಬಂದಿಲ್ಲವೇ ಇನ್ನೂ ? ಆಗಲೇ ಎಂಟುಗಂಟೆ. ಸರಿಯಾದ ಸಮಯಕ್ಕೆ ಬಾರದೆ ಇರುವುದನ್ನು ನಾನು ಸಹಿಸಲಾರೆ. ಏಕೆಂದರೆ ನನಗೆ ಸಮಯಪಾಲನೆಯಲ್ಲಿ ತುಂಬ ನಿಷ್ಠೆ.

(ಮನೆಯ ಸೇವಕ ಜಡ್ಜ್ ಸಾಹೇಬರಿಗೆ ಒಂದು ಪತ್ರವನ್ನು ತಂದು ಕೊಡುತ್ತಾನೆ. ಅವರು ಅದನ್ನು ಪ್ರತಿಭಾಳಿಗೆ ಕೊಡುತ್ತಾರೆ.)

ಪ್ರತಿಭಾ : (ಓದುತ್ತಾಳೆ) ದೇವದತ್ ಥ್ಯಾಂಕ್ಸ್ ದಿ ಆನರಬಲ್ ಜಡ್ಜ್ ಫಾರ್ ಹಿಸ್ ಕೈಂಡ್ ಇನ್ವಿಟೇಷನ್ ಟು ಡಿನ್ನರ್....?

(ದೇವದತ್ ಬರುತ್ತಾನೆ. ಕೈಯ್ಯಲ್ಲೊಂದು ಚಿತ್ರ. ಅವನು ಕುಡಿದಂತೆ ಇದೆ.)

ದೇವದತ್ : ಅಂಡ್ ಈಸ್ ಪ್ಲೀಸ್ಡ್ ಟು ಅಕ್ಸೆಪ್ಟ್ ದಿ ಸೇಮ್.

(ಅವರಿಬ್ಬರಿಗೂ ವಂದಿಸುತ್ತಾನೆ. ಜಡ್ಜ್ ಸಾಹೇಬರೂ ಪ್ರತಿಭಾಳೂ ಎದ್ದುನಿಂತು ಅವನನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾರೆ)

ದೇವದತ್ : ಹಲ್ಲೊ, ಜಡ್ಜ್ ಸಾಹೇಬ್. ಹೌಡುಯುಡೂ ? (ಕೈಕುಲುಕಲು

ಕೈಚಾಚುತ್ತಾನೆ. ಪ್ರತಿಭಾ ಗಮನಿಸುವುದಿಲ್ಲ)
(ದೇವದತ್ ತನ್ನ ಕೋಟನ್ನು ಕಳಚಿ ಕುರ್ಚಿಯ ಕೈಮೇಲೆ ಇರಿಸಿ ಕುರ್ಚಿಯ ಮೇಲೆ ಆರಾಮವಾಗಿ ಕುಳಿತುಕೊಳ್ಳುತ್ತಾನೆ.)

ದೇವದತ್ : ಏಕೆ ನಿಂತೇ ಇದ್ದೀರಿ? ಕುಳಿತುಕೊಳ್ಳಿ. ನನ್ನ ಆಹ್ವಾನವನ್ನು ಸ್ವೀಕರಿಸಿ ಬಂದುದಕ್ಕಾಗಿ ನಿಮಗಿಬ್ಬರಿಗೂ ಹಾರ್ದಿಕ ಕೃತಜ್ಞತೆಗಳು. ಏಕೆ ನಿಂತೇ ಇದ್ದೀರಿ ? ಕುಳಿತುಕೊಳ್ಳಿ ದಯವಿಟ್ಟು....
(ದೇವದತ್ ತನ್ನ ಚಿತ್ರವನ್ನು ಅವರತ್ತ ಬೀಸಿದಾಗ ಅವರಿಬ್ಬರೂ ಕುಳಿತುಕೊಳ್ಳುತ್ತಾರೆ.)

ದೇವದತ್ : (ನಗುತ್ತಾ) ಹಾಗೆ....ಅಂಪಹಾಗೆ ನೀವೇನು ತೆಗೆದುಕೊಳ್ಳುತ್ತೀರಿ? ವಿಸ್ಕಿ? ಅಥವಾ ಜಿನ್? ಅಥವಾ ಷ್ಯಾಂಪೆಯನ್?.... ಯಾವುದೂ ಬೇಡವೇ? ಹಾಗಿದ್ದರೆ ಒಂದು ಗ್ಲಾಸ್ ನೀರು?....
(ನಗುತ್ತಾ) ಬಹುಶಃ ಮದ್ಯವಿರೋಧಿಗಳಿರಬೇಕು ನೀವು.

ಜಡ್ಜ್ : ನಾನೇನು ಹೇಳಬೇಕೆಂದಿದ್ದೇನೆ ಎಂದರೆ....

ದೇವದತ್ : ನನಗೆ ಗೊತ್ತಿದೆ ನಿಮಗೆ ನೀರು ಬೇಕು ತಾನೇ? ತರಿಸೋಣ.... ಭಟ್ಟರೇ, (ಭಟ್ಟರು ಬರುತ್ತಾರೆ)

ದೇವದತ್ : ನನಗೆ ಬಚ್ಚಲುಮನೆ ತೋರಿಸುತ್ತೀರಾ?
(ದೇವದತ್ ಭಟ್ಟರನ್ನು ಹಿಂಬಾಲಿಸುತ್ತಾನೆ)

ಜಡ್ಜ್ : ಇವನಿಗೆ ಸಮಯದ ಪ್ರಜ್ಞೆಯೇ ಇದ್ದಂತಿಲ್ಲ; ಹುಚ್ಚನಿರಬೇಕು.

ಪ್ರತಿಭಾ : ಇಲ್ಲವೇ ಕುಡಿದಿರಬೇಕು.

ಜಡ್ಜ್ : ಪಾನೋನ್ಮತ್ತತೆ....ಅರ್ಥಾತ್ ಮದ್ಯದ ಉನ್ಮಾದ....ವ್ಯಕ್ತಿಯ ಮುಖ ನೋಡಿಯೇ ನಾನವನ ಜಾತಕ ಹೇಳಬಲ್ಲೆ....

ಪ್ರತಿಭಾ : ಇವನು ಅಪಾಯಕಾರಿ.

ಜಡ್ಜ್ : ಊಟಕ್ಕೆ ತಡವಾಗುತ್ತಿದೆ. ನನಗೆ ಸಮಯಪಾಲನೆಯಲ್ಲಿ ತುಂಬ ನಿಷ್ಠೆ, ಭಟ್ಟರೇ, ಮಲಗುವ ಕೊಠಡಿಗೇ ಊಟ ತನ್ನಿ.

ಪ್ರತಿಭಾ : ನನಗೂ ಕೂಡ. ಭಟ್ಟರೇ, ಆ ಮನುಷ್ಯ ಬಂದರೆ ನಾವು ಊಟ ಮಾಡಿ ಮಲಗಿಕೊಂಡಿದ್ದೇವೆ ಎನ್ನಿ.
(ದೇವದತ್ ಚಿತ್ರ ಬೀಸುತ್ತ ಬರುತ್ತಾನೆ.)

ದೇವದತ್ : ಕುಳಿತುಕೊಳ್ಳಿ....ನೋಡಿ....ಬಚ್ಚಲು ಮನೆಯಿಂದ ಬರುವಾಗ ದಾರಿ ತಪ್ಪಿಹೋಯಿತು.

(ಎಲ್ಲರೂ ಕುಳಿತುಕೊಳ್ಳುತ್ತಾರೆ. ಭಟ್ಟರು ನೀರಿನ ಗ್ಲಾಸ್‌ಗಳನ್ನು ತೆಗೆದುಕೊಂಡು ಬಂದಾಗ ಅವುಗಳನ್ನು ಜಡ್ಜ್ ಸಾಹೇಬರತ್ತ ಸರಿಸಿ 'ಚಿಯರ್ಸ್' ಎನ್ನುತ್ತಾನೆ. ಅವರು ಕುಡಿಯದಿದ್ದಾಗ ಚಿತ್ರವನ್ನು ಅಲ್ಲಾಡಿಸುತ್ತಾನೆ. ಆಗ ಜಡ್ಜ್ ಸಾಹೇಬರು ನೀರು ಕುಡಿಯುವಂತೆ ನಟಿಸುತ್ತಾರೆ. ದೇವದತ್ ತನ್ನ ಕೈಗಡಿಯಾರ ನೋಡಿಕೊಳ್ಳುತ್ತಾನೆ.)

ದೇವದತ್ : ಆಲ್‌ರೈಟ್. ನೀವೀಗ ಹೋಗಬಹುದು. ನನಗೆ ಮಲಗಲು ಹೋಗುವ ಸಮಯವಾಯಿತು. ಸರಿಯಾಗಿ ಎಂಟು ಗಂಟೆ ಹದಿಮೂರು ನಿಮಿಷ. ನನಗೆ ಸಮಯಪಾಲನೆಯಲ್ಲಿ ತುಂಬ ನಿಷ್ಠೆ.

(ದೇವದತ್ ಜಡ್ಜ್ ಸಾಹೇಬರ ಕೈ ಕುಲುಕುತ್ತಾನೆ.)

ದೇವದತ್ : ಭೋಜನಕ್ಕೆ ಆಹ್ವಾನ ನೀಡಿದುದಕ್ಕಾಗಿ ನನಗೆ ಆಭಾರ ಸೂಚಿಸುವುದೂ ಇಲ್ಲವೇ ?

ಜಡ್ಜ್ : ಓಹ್ ! ಮರೆತೆ. ಥ್ಯಾಂಕ್‌ಯು ವೆರಿಮಚ್.

ದೇವದತ್ : ನೀವು ಬಂದದ್ದು ಸೊಗಸಾಯಿತು. ನನಗೆ ತುಂಬಾ ಸಂತೋಷ ವಾಯಿತು. ಗುಡ್‌ನೈಟ್ (ಕೈಗಡಿಯಾರ ನೋಡಿಕೊಳ್ಳುತ್ತಾ) ಅಬ್ಬ, ದೇವರೇ ಆಗಲೇ ಎಂಟು ಗಂಟೆ ಹದಿನೈದು ನಿಮಿಷ. ಮಲಗಲು ಹೋಗ ಬೇಕು. (ದೇವದತ್ ತನ್ನ ಕೈಗಳನ್ನು ಡೈನಿಂಗ್ ಟೇಬಲ್ ಮೇಲಿರಿಸಿ ಅವುಗಳ ಮೇಲೆ ತಲೆಯನ್ನಿಟ್ಟು ಮಲಗುತ್ತಾನೆ. ಜಡ್ಜ್ ಸಾಹೇಬರು ಒಳಗೆ ಹೋಗುತ್ತಾರೆ. ಪ್ರತಿಭಾ ಚಿತ್ರವನ್ನೆತ್ತಿಕೊಂಡು ದೇವದತ್‌ನಿಗೆ ಮೆಲ್ಲನೆ ಏಟು ಕೊಡುತ್ತಾಳೆ.)

ಪ್ರತಿಭಾ : ಹೇಯ್ ಮಿಸ್ಟರ್.

(ದೇವದತ್ ತತ್‌ಕ್ಷಣ ಏಳುತ್ತಾನೆ)

ದೇವದತ್ : ಇಲ್ಲ. ನಾನು ನಿನ್ನ ಕನ್ನಡಕವನ್ನು ನೋಡಿಲ್ಲ.

ಪ್ರತಿಭಾ : ಥ್ಯಾಂಕ್‌ಯು. ನಾನು ಕನ್ನಡಕ ಧರಿಸವುದೇ ಇಲ್ಲ. ನನ್ನ ದೃಷ್ಟಿ ಸರಿಯಾಗಿದೆ.

ದೇವದತ್ : ಆದರೆ ನಿನ್ನ ಕಿವಿಗಳು ಸರಿಯಾಗಿಲ್ಲ.

ಪ್ರತಿಭಾ : ನಾನು ಕಿವುಡಿಯೂ ಅಲ್ಲ.

ದೇವದತ್ : ಸಂಧಿವಾತದ ಲಕ್ಷಣಗಳು ?

ಪ್ರತಿಭಾ : ಏನೂ ಇಲ್ಲ.

ದೇವದತ್ : ಹಾಗಿದ್ದರೆ ನೀನು ಮೂರ್ಖಳಿರಬೇಕು. ನಿನ್ನ ಐ. ಕ್ಯೂ.ಸೊನ್ನೆ.

ಪ್ರತಿಭಾ : ಊಹು.

ದೇವದತ್ : ಹಾಗಾದರೆ ?

ಪ್ರತಿಭಾ : ನಾನು ನಟನೆ ಮಾಡಿದೆ ಅಷ್ಟೆ. ಏಕೆಂದರೆ ಮದುವೆಯಾಗಿ ನನ್ನ ವಿದ್ಯಾರ್ಥಿ ಜೀವನಕ್ಕೆ ಅಡಚಣೆ ತಂದುಕೊಳ್ಳಲು ನಾನು ತಯಾರಿರಲಿಲ್ಲ. ಆದರೆ ತಂದೆಯನ್ನು ಬೇಸರಪಡಿಸುವುದೂ ನನಗೆ ಸಾಧ್ಯವಿರಲಿಲ್ಲ. ಆದ್ದರಿಂದ—

ದೇವದತ್ : ಒಳ್ಳೆಯದು ನೀನು ಹೋಗಬಹುದು. ನಾನು ನಿದ್ರಿಸಬೇಕು ಗುಡ್‌ನೈಟ್.

(ದೇವದತ್ ಮಲಗುತ್ತಾನೆ. ಮತ್ತೆ ಪ್ರತಿಭಾ ಬೆತ್ತದಿಂದ ಅವನನ್ನು ಮೆಲ್ಲನೆ ತಿವಿಯುತ್ತಾಳೆ. ದೇವದತ್ ಏಳುತ್ತಾನೆ.)

ಪ್ರತಿಭಾ: ಏಯ್, ಕುಡುಕ, ಕೋಟು ಹಾಕಿಕೊಂಡು ಬೇಗ ಹೊರಟುಹೋಗು.

(ದೇವದತ್ ಕೋಟು ಹಾಕಿಕೊಂಡು ಟೈ ಸರಿಪಡಿಸಿಕೊಳ್ಳುತ್ತಾನೆ.)

ದೇವದತ್ : ನಾನು ಕುಡುಕನಲ್ಲ.

ಪ್ರತಿಭಾ : ಹಾಗಾದರೆ ಹುಚ್ಚನಿರಬೇಕು, ಅಥವಾ....

ದೇವದತ್ : ಹುಚ್ಚನೂ ಅಲ್ಲ.

ಪ್ರತಿಭಾ : ಹಾಗಾದರೆ ?

ದೇವದತ್ : ನಾನು ಇನ್ನೊಬ್ಬಳು ಹುಡುಗಿಯನ್ನು ಮದುವೆಯಾಗಲು ನಿರ್ಧರಿಸಿದ್ದೇನೆ. ಆದ್ದರಿಂದ ಹಾಗೆ ನಟನೆ ಮಾಡಿದೆ; ಅಷ್ಟೆ—ಜಡ್ಜ್ ಸಾಹೇಬರು ತಾವಾಗಿ ನನ್ನನ್ನು ಒಪ್ಪದೆ ಇರಲಿ ಎಂದು.

ಪ್ರತಿಭಾ : (ಬೆತ್ತವನ್ನು ದೇವದತ್ತನಿಗೆ ಹಿಂದಿರುಗಿಸುತ್ತಾ) ವಿಚಿತ್ರ !

ದೇವದತ್ : ವಿಚಿತ್ರವೇನೂ ಇಲ್ಲ....ನೀನು ೧ರಿಂದ ೫೦ರವರೆಗೆ ಎಣಿಸು ಎಲ್ಲ ಸರಿಹೋಗುತ್ತದೆ....ಅಬ್ಬ ! ದೇವರೇ ! ನಾನವಳನ್ನು ತತ್‌ಕ್ಷಣ ಭೇಟಿಯಾಗಬೇಕು. ಏಕೆಂದರೆ ಸಮಯಪಾಲನೆಯಲ್ಲಿ ನನಗೆ ತುಂಬ ನಿಷ್ಠೆ.

(ದೇವದತ್ ಬೆತ್ತವನ್ನು ಪ್ರತಿಭಾಳಿಗೇ ಹಿಂದಿರುಗಿಸಿ, ಹೊರಗೆ ಹೊರಟು ಹೋಗುತ್ತಾನೆ. ಪ್ರತಿಭಾ ಅಚ್ಚರಿಯಿಂದ ಅವನ್ನೇ ನೋಡುತ್ತಾ ಎಣಿಕೆ ಆರಂಭಿಸುತ್ತಾಳೆ—ಒಂದು, ಎರಡು, ಮೂರು, ನಾಲ್ಕು....)

(ತೆರೆ)

ಶಂಸಐತಾಳ

ಕರ್ತವ್ಯ ನಿಷ್ಠೆ

ಅತ್ತ-ಇತ್ತ ಓಡಾಟ, ಮಂತ್ರಿ-ನಾಯಕರ ಮನೆ ಮನೆಗೆ ಅಲೆದಾಟ ಮತ್ತು ಅಲ್ಲಿ-ಇಲ್ಲಿ ದೈನ್ಯಾಲಾಪ ಮುಂತಾದವುಗಳ ಪ್ರಯೋಜನ. ಜಿಲ್ಲೆಯ ಅಧಿಕಾರಿಯನ್ನು ಕಾಣುವ ತವಕ ಮುಟ್ಟಿತ್ತು. ಒಂದು ವೇಳೆ ಈ ಅಧಿಕಾರಿ ಡಿ.ಇ.ಓ ಹಾಗೂ ಇತರ ಮೂರು-ನಾಲ್ಕು ಜನ ಸಣ್ಣ ಪುಟ್ಟ ಅಧಿಕಾರಿಗಳಿಗೆ ಏನಾದರೂ ಫೋನ್ ಮಾಡಿಬಿಟ್ಟರಂತೂ....; ಕೆಲಸ ಸರಸರನೆ ಆಗಿಬಿಡುವುದು ಮತ್ತು ಈ ಓಡಾಟ, ಬಾಗಿಲುಗಳಿಗೆ ಅಲೆಯುವುದು, ದೈನ್ಯಾಲಾಪ ಇವುಗಳಿಂದ ನನಗೆ ಮುಕ್ತಿ ಸಿಗುವುದು ಎಂದು ಯೋಚಿಸಿದೆ.

ಜಿಲ್ಲಾಧಿಕಾರಿಯನ್ನು 'ಕಾಂಟ್ಯಾಕ್ಟ್' ಮಾಡಲು ಬಹಳ ಪ್ರಯತ್ನಪಟ್ಟೆ, ಆದರೆ ಜಯಶೀಲನಾಗಲಿಲ್ಲ; ಆಗ ನಾನು ಅವರನ್ನು ಅವರ ಬಂಗಲೆಯಲ್ಲಿ ಬೆಳಿಗ್ಗೆಯೇ ಭೇಟಿ ಮಾಡಬೇಕೆಂದು ನಿಶ್ಚಯಿಸಿದೆ.

ಬೆಳಗಿನ ಹೊತ್ತೆ ಜಿಲ್ಲೆಯ ಇಷ್ಟು ದೊಡ್ಡ ಅಧಿಕಾರಿಯನ್ನು ಅವರ ಬಂಗಲೆಗೆ ಹೋಗಿ 'ಡಿಸ್ಟರ್ಬ್' ಮಾಡುವುದು ಉಚಿತವಾಗಿರಲಿಲ್ಲ, ನಿಜ, ಆದರೆ ಅಷ್ಟು ಒತ್ತಡವಿತ್ತು. ಒತ್ತಡ—ನಮ್ಮ ಕಾಲೋನಿಯಲ್ಲಿ ಯಾವ ಶಾಲೆಯೂ ಇರಲಿಲ್ಲ. ನಮ್ಮ ಕಾಲೋನಿಯ ಅಸೋಸಿಯೇಷನ್ ಭೂಮಿ, ಹಣ ಮತ್ತು ಇತರ ಅವಶ್ಯಕತೆಗಳ ವ್ಯವಸ್ಥೆಯನ್ನು ಮಾಡಿಕೊಂಡಿತ್ತು; ಕೇವಲ ಶಾಲೆಯ ಕಟ್ಟಡದ ನಿರ್ಮಾಣ ಹಾಗೂ ಅದನ್ನು ತೆರೆಯುವುದರಲ್ಲಿ ಕೆಲವು ಚಿಕ್ಕ ಪುಟ್ಟ ಅಡಚಣೆಗಳಿದ್ದವು. ಅವು ಅನೇಕ ಲೇಖನಿಗಳಿಂದ ನೋಟ್-ಷೀಟ್ಸ್. ಟಿಪ್ಪಣಿಗಳ ಕಾರಣದಿಂದ ದೊಡ್ಡದಾಗಿ ಬೆಳೆದಿತ್ತು. ಅವುಗಳನ್ನು ದೂರಮಾಡುವ ಪ್ರಯತ್ನಗಳಲ್ಲಿ ಸುಮಾರು ಒಂದು ವರುಷವೇ ಕಳೆದಿತ್ತು. ಇಷ್ಟಾಗಿ ಆ ವಿಷಯ ಈಗ ಜಿಲ್ಲೆಯ ಈ ಅಧಿಕಾರಿಯ ತನಕ ಬಂದಿತ್ತು.

ಬಂಗಲೆಯ ಗೇಟಿಗೆ ಅಂಟಿಕೊಂಡಿದ್ದ ನೇಮ್ ಪ್ಲೇಟ್‌ಅನ್ನು ನೋಡಿ ಓದಿ, ಈ ಅಧಿಕಾರಿಯ ನೇಮ್ ಪ್ಲೇಟ್ ಮತ್ತು ಅದರ ಮೇಲೆ ಬರೆದಿರುವ ಹೆಸರೇ ಇಷ್ಟೊಂದು ಸುಂದರವಾಗಿರಬೇಕಾದರೆ ಅವನ ಮನಸ್ಸು ಇದಕ್ಕಿಂತಲೂ ಸುಂದರವಾಗಿರಬೇಕಲ್ಲವೆ? ಎಂದು ಸಂತೋಷವಾಯಿತು. ನೇಮ್ ಪ್ಲೇಟಿನ

೧೯೮೪, ಏಪ್ರಿಲ್ ತಿಂಗಳ 'ನವನೀತ್'ನಲ್ಲಿ ಬಂದಿರುವ ರಾಜೇಂದ್ರ ಕುಮಾರ್ ಶರ್ಮಾ ಅವರ 'ವಫಾದಾರ್' ಹಿಂದೀ ಕತೆಯ ಕನ್ನಡಾನುವಾದ.

ಕೆಳಗೆ ಇನ್ನೊಂದು ಪ್ಲೇಟ್ ಅಂಟಿಕೊಂಡಿತ್ತು, ಅದರ ಮೇಲೆ ದೊಡ್ಡ ಅಧಿಕಾರಿಯನ್ನು ಭೇಟಿ ಮಾಡುವ ಟೈಮಿಂಗ್ಸ್ ಬರೆಯಲ್ಪಟ್ಟಿತ್ತು; ಟೈಮಿಂಗ್ಸ್ ನೋಡಿ, ಇಷ್ಟು ದೊಡ್ಡ ಅಧಿಕಾರಿಯನ್ನು ಅವರ ಬಂಗಲೆಯಲ್ಲಿಯೇ ಡಿಸ್ಟರ್ಬ್ ಮಾಡಬೇಕಲ್ಲ ಎಂದು ಅಂದುಕೊಂಡಿದ್ದ ನನ್ನ ಮನಸ್ಸಿನ ಅಪರಾಧ ಭಾವನೆ ಸ್ವಲ್ಪ ಸ್ವಲ್ಪ ಕಡಿಮೆಯಾಗತೊಡಗಿತು. ಏಕೆಂದರೆ ನಾನು ಅವರ ಭೇಟಿಯ ಸಮಯಕ್ಕೆ ಸರಿಯಾಗಿಯೇ ಬಂದಿದ್ದೆ.

ನಾನು ಸ್ವಲ್ಪವೂ ಹಿಂಜರಿಯದೆ ಬಂಗಲೆಯ ಒಳಕ್ಕೆ ನುಗ್ಗಿದ ಕೂಡಲೇ ಒಳಗಿನ ವೈಭವವನ್ನು ಕಂಡು ಯಾವುದೋ ಅರಮನೆಗೆ ಬಂದೆನೇನೊ ಅನ್ನಿಸಿತು. ದೇಹಾದ್ಯಂತ ಭಯ ತುಂಬಲಾರಂಭಿಸಿತು. ಅತ್ತಿತ್ತ ನೋಡುತ್ತ ಇನ್ನೂ ಸ್ವಲ್ಪ ದೂರವೂ ಹೋಗಿಲ್ಲ. ಇದ್ದಕಿದ್ದಂಗೆ ಕೇಳಿಸಿತು—'ಏಯ್, ಎಲ್ಲಿ ನುಗ್ಗುತ್ತಿದ್ದೀಯೆ?'

ಆ ಕಂಚಿನ ಶಬ್ದ ಮತ್ತು ಆಕಸ್ಮಿಕತೆ ನನ್ನ ಕಾಲುಗಳನ್ನೇ ಕಟ್ಟಿಹಾಕಿದಂತಾಯಿತು! ನಾನು ಇದ್ದಲ್ಲಿಯೇ ಕೀಲಿಸಿದಂತೆ ನಿಂತುಬಿಟ್ಟೆ. ಬೆಚ್ಚಿ ನೋಡಿದೆ—ಬಲಗಡೆಯಿಂದ ಸ್ವಸ್ಥಕಾಯದ ಇಬ್ಬರು ತರುಣ ಗಾರ್ಡ್‌ಗಳು ನನ್ನ ಕಡೆಗೇ ಮೇಲೆ ಬೀಳುವಂತೆ ಬರುತ್ತಿದ್ದಾರೆ. ಅವರು ಮೆಟ್ಟಿದ್ದ ಬೂಟುಗಳ ಟಕ್‌ಟಕ್‌ಟಕ್, ನಿಮಿರಿ ನಿಲ್ಲುವಂತೆ ಇಸ್ತ್ರಿಮಾಡಿ ಧರಿಸಿದ್ದ ಉಡುಪಿನ ಖಸ್ಸ್-ಖಸ್-ಖಸ್ಸ್ ಶಬ್ದ ಮತ್ತೆ ಕೈಯಲ್ಲಿ ಹಿಡಿದಿದ್ದ ದೊಣ್ಣೆ ಮುಂತಾದುವುಗಳ ಪ್ರಭಾವ ಎಷ್ಟಾಯಿತೆಂದರೆ, ಕ್ಷಣಕಾಲ ನಾನು ಬಂದ ಉದ್ದೇಶವನ್ನೇ ಮರೆತುಬಿಟ್ಟೆ.

'ಎಲ್ಲಿಗೆ ನುಗ್ಗಿ ಹೋಗುತ್ತಿದ್ದೀಯೋ?' ನನ್ನ ತೀರ ಹತ್ತಿರಕ್ಕೆ ಬಂದ ಒಬ್ಬ ಗಾರ್ಡನು ಕೇಳಿದಾಗ ನಾನು ಇಬ್ಬರನ್ನೂ ಅತ್ಯಂತ ಸ್ನೇಹದಿಂದ ನೋಡಿದೆ—ಎಂಥ ಪರ್ಸನಾಲಿಟಿ?' ಜೇಬಿನ ಮೇಲೆ ಚಿಕ್ಕದಾದ ಕಪ್ಪು ಪ್ಲಾಸ್ಟಿಕ್ ಪ್ಲೇಟ್ಸ್ ಮೇಲೆ ಅವರ ಹೆಸರುಗಳು ಬರೆಯಲ್ಪಟ್ಟಿದ್ದವು—ರಮೇಶ್‌ಕುಮಾರ್ ಶರ್ಮಾ, ಗೋವಿಂದದಾಸ್ ದೇಶಮುಖ್.

ವಯಸ್ಸಿನಲ್ಲಿ ನನಗಿಂತಲೂ ಸ್ವಲ್ಪ ಚಿಕ್ಕವರಾಗಿದ್ದ ಈ ಯುವಕರು ಈ ರೀತಿ ಮಾತಾಡಿದ್ದನ್ನು ಕೇಳಿ ನನಗೆ ನಿಜಕ್ಕೂ ವಿಚಿತ್ರವಾಗಿಯೇನೊ ಕಾಣಿಸಿತು, ಆದರೆ ಇಲ್ಲಿನ ಸಭ್ಯತೆಯೆ ಹೀಗೇನೋ ಎಂದು ಯೋಚಿಸಿಯೂ ಬಿಟ್ಟೆ. ಆದುದರಿಂದ ನಾನೂ ಕೂಡ ನಿರ್ಲಕ್ಷ್ಯಭಾವದಿಂದಲೇ ಹೇಳಿದೆ—'ಖನ್ನಾ ಸಾಹೇಬರನ್ನು ನೋಡಬೇಕಿತ್ತು.' ಮತ್ತೆ ಮುಂದುವರಿಯಲು ತೊಡಗಿದಾಗ

ರಮೇಶ ಒಂದೇ ಬಾರಿಗೆ ಮುಂದೆ ಬಂದು ಹೇಳಿದ. 'ಸಾಹೇಬರನ್ನು ಈಗಲೇ ನೋಡಲಾಗುವುದಿಲ್ಲ.'

ನಾನು ಗೇಟಿನ ಕಡೆಗೆ ತೋರಿಸುತ್ತ ಹೇಳಿದೆ—'ಆದರೆ ಅವರನ್ನು ಭೇಟಿ ಮಾಡುವ ಸಮಯ ಇದೇ ಎಂದು ಅಲ್ಲಿ ಬರೆದಿದೆ,' ಎಂದು ಹೇಳಿ ನನ್ನ ರಿಸ್ಟ್ ವಾಚ್ ಕಟ್ಟಿದ್ದ ಕೈಯನ್ನು ಅವನ ಮುಂದೆ ಚಾಚಿದೆ.

ನನ್ನ ಈ ಮಾತನ್ನು ಕೇಳಿ ಇಬ್ಬರೂ ವ್ಯಂಗ್ಯವಾಗಿ ಮುಗುಳ್ನಕ್ಕರು ಮತ್ತು ಗೋವಿಂದ ಗಂಭೀರವಾಗಿ ಹೇಳಿದ, 'ಗಡಿಯಾರದ ಲೆಕ್ಕಾಚಾರಕ್ಕೆ ತಕ್ಕಂತೆ ಅಲ್ಲಿ ಬರೆದಿರುವಂತೆ ಇಲ್ಲಿ ನಡೆಯುತ್ತದೆಯೆ?'

'ಅಲ್ಲದೆ ಆಗುವುದೆಲ್ಲ ಬರೆಯಲಾಗುತ್ತದೆಯೆ? ಎಂದು ರಮೇಶನೂ ಗಂಭೀರ ವಾಗಿ ಹೇಳಿದಾಗ 'ಈ' ಸಾಮಾನ್ಯ ನೌಕರಿ ಮಾಡುವವರ ಮನಸ್ಸು ಬುದ್ಧಿ ಯಲ್ಲಿಯೂ ಇಂಥ ಇಷ್ಟು ಗಂಭೀರವಾದ ವಿಷಯಗಳು ತುಂಬಿಕೊಂಡಿವೆ ಯೆಂದರೆ....ಎಂದರೆ ನಿಜಕ್ಕೂ ನಮ್ಮ ದೇಶ ಎಚ್ಚರವಾಗಿದೆ ಎಂದು ನನಗೆ ಚಟ್ಟನೆ ಅನ್ನಿಸಿತು. ನಾನು ಉತ್ಸಾಹದಿಂದ ಹೇಳಿದೆ—'ನಿಮ್ಮ ಮಾತು ಗಳನ್ನು ಕೇಳಿದರೆ ನೀವಿಬ್ಬರೂ ಸಾಕಷ್ಟು ವಿದ್ಯಾವಂತರಂತೆ ಕಾಣುತ್ತೀರಿ ಮತ್ತು ನೋಡುವುದಕ್ಕೂ ಸಾಕಷ್ಟು ಪುಷ್ಟವಾಗಿ ಆರೋಗ್ಯವಂತರಂತೆ ಕಾಣುತ್ತೀರಿ.ಹೀಗಿರುವಾಗ ಈ ಸಾಧಾರಣವಾದ ನೌಕರಿಯನ್ನು ಏಕೆ ಮಾಡು ತ್ತಿದ್ದೀರಿ?'

ನನ್ನ ಈ ಮಾತಿನಿಂದ ಇಬ್ಬರ ಮುಖಗಳು ಬಿಳಚಿಕೊಂಡವು, ಕೂಡಲೆ ಅವರ ಕಣ್ಣುಗಳಲ್ಲಿ ದೀಪ ಚಿಮ್ಮಿತು. ನಂತರ ಇಬ್ಬರೂ ಪರಸ್ಪರ ನೋಡಿ ಕೊಂಡರು, ಆದರೆ ಈ ಸಾರಿ ಅವರು ವ್ಯಂಗ್ಯವಾಗಿ ನಗಲಿಲ್ಲ. ಅಲ್ಲಿಯೇ ಬೆಂಚಿನ ಕಡೆ ತೋರಿಸುತ್ತ ರಮೇಶ ಹೇಳಿದ 'ಸಾಹೇಬರು ಇನ್ನೂ....ಈ ಬೆಂಚಿನ ಮೇಲೆ ಕುಳಿತುಕೋ ಮತ್ತು....!'

ನಾನು ಬೆಂಚಿನ ಮೇಲೆ ಕುಳಿತುಕೊಂಡೆನೊ ಇಲ್ಲವೊ ಗೋವಿಂದ ಹೇಳಿದ. 'ಏನು ಕೆಲಸ ಆಗಬೇಕಿದೆ ಸಾಹೇಬರಿಂದ, ಎಲ್ಲಿಯಾದರೂ ಕೆಲಸಕ್ಕೆ ಶಿಫಾರಸ್ಸು ಮಾಡಿಸಬೇಕೆ, ಅಥವಾ ಯಾರ ಬಗ್ಗೆ ಯಾದರೂ ದೂರು ಗೀರು ಬರೆಸಬೇಕೆ?'

ನಾನು ನಗುತ್ತ ಹೇಳಿದೆ, 'ನನಗೆ ಕೆಲಸವೂ ಬೇಕಾಗಿಲ್ಲ, ಯಾರನ್ನೂ ನಿಂದಿಸಬೇಕಾಗಿಯೂ ಇಲ್ಲ, ನಾನು ಇಲ್ಲಿಗೆ ಒಂದು ಒಳ್ಳೆಯ ಕೆಲಸಕ್ಕಾಗಿ ಬಂದಿದ್ದೇನೆ, ಪುಣ್ಯ ಧರ್ಮದ ಕೆಲಸವೆಂದೇ ತಿಳಿದುಕೊ.'

ನನ್ನ ನಿಷ್ಕಾಮ ಭಾವನೆಯಿಂದ ಕೂಡಿದ ಮಾತಿನಿಂದ ಅವರು ಸ್ವಲ್ಪವೂ

ಪ್ರಭಾವಿತರಾಗಲಿಲ್ಲ. ಗೋವಿಂದನೇ ಮಾತನಾಡಿದ. 'ಏಕೆ ಗೊಂದಲವಲ್ಲಿ ಸಿಕ್ಕಿಕೊಳ್ಳುತ್ತೀಯೆ, ನೀನು? ಒಳ್ಳೆಯ ಮತ್ತು ಪುಣ್ಯಧರ್ಮದ ಕಾಲ ಎಂದೊ ಮುಗಿದುಹೋಯಿತು.

'ಅವರವರ ವಿಚಾರ ಮಿ. 'ನಾನು ನಗುತ್ತಲೆ ಹೇಳಿದೆ.' ನನಗೆ ತಾವು ದೊಡ್ಡ ಸಾಹೇಬರ ಭೇಟಿ ಮಾಡಿಸಿಬಿಡಿ-ಸಾಕು, ಹಾಗೆ ನನ್ನ ಹತ್ತಿರ ಈ ಕ್ಷೇತ್ರದ ವಿಧಾಯಕ (ಶಾಸಕ)ನ ಶಿಫಾರಸ್ಸು ಪತ್ರವೂ ಇದೆ. ನನ್ನ ಕೆಲಸ ಆಗಿಬಿಟ್ಟರೆ ಭಗವಂತನಿಗೆ ಲಕ್ಷ ಲಕ್ಷ ನಮಸ್ಕಾರಗಳು.'

ಅವರಿಬ್ಬರೂ ನನ್ನ ಅಕ್ಕಪಕ್ಕದಲ್ಲಿ ಕುಳಿತುಬಿಟ್ಟರು. ರಮೇಶ ಆಶ್ಚರ್ಯ ದಿಂದ ಕೇಳಿದ. ಈ ಕ್ಷೇತ್ರದ ವಿಧಾಯಕರಿಗೆ ತಾವು ಗೊತ್ತೆ?

'ಪ್ರಾಯಶ ಒಮ್ಮೆ ಸಾಹೇಬರನ್ನು ಬಿಟ್ಟರೆ ನನ್ನನ್ನು ಈ ಊರಿನಲ್ಲಿ ಎಲ್ಲರೂ ಬಲ್ಲರು. ಏಕೆ?'

'ಹಾಗಿದ್ದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿಯೂ ತಮ್ಮ ಗುರುತಿರ ಬೇಕು?'

'ಬಹಳ ಚೆನ್ನಾಗಿ ಏಕೆ?'

'ಮತ್ತೆ ಸ್ಟೀಲ್ ಪ್ಲಾಂಟ್‌ನ ಅಧಿಕಾರಿಗಳೊಂದಿಗೆ?'

'ಅವರೊಂದಿಗೂ ನನ್ನ ಒಳ್ಳೆಯ ಪರಿಚಯವಿದೆ. ಏಕೆ?'

ಇಬ್ಬರ ಮುಖದ ಮೇಲೂ ನನ್ನ ಬಗ್ಗೆ ಗೌರವ ಶ್ರದ್ಧೆ ಆಳವಾಗಿ ಬೇರೂರ ತೊಡಗಿತು. ಅಂಜುತ್ತ ಅಂಜುತ್ತ ಮಾತನಾಡಿದ ಗೋವಿಂದ, 'ಹಾಗಿದ್ದರೆ ತಾವು ನಮ್ಮ ಕೆಲಸ ಮಾಡಿಸಿಕೊಡಬಲ್ಲಿರಿ. ನಾವಿಬ್ಬರೂ ಬಿ.ಎ. ಪಾಸಾಗಿ ದ್ದೇವೆ. ತಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ನಮ್ಮ ಕಾರ್ಡನ್ನು ಹೊರಡಿಸಿ ಮತ್ತು....ಮತ್ತು ಸ್ಟೀಲ್‌ಪ್ಲಾಂಟಿನ ಒಬ್ಬಿಬ್ಬರು ಅಧಿಕಾರಿಗಳಿಗೆ ಹೇಳಿ ಯಾವುದಾದರೂ ರೀತಿಯ ಒಂದು ನೌಕರಿಯನ್ನು....ಇಲ್ಲದಿದ್ದರೆ ಇಡೀ ಆಯುಸ್ಸೆಲ್ಲ ಸಾಹೇಬರು–ಮೇಮ್‌ಸಾಹೇಬರಿಗೆ ಸೆಲ್ಯೂಟ್ ಮಾಡುತ್ತ ಮಾಡುತ್ತಲೇ ಕಳೆದು ಹೋಗುವುದು!

ನಾನು ಒಂದೇ ಸಾರಿ ಯಾವ ಉತ್ತರವನ್ನು ಕೊಡದಿದ್ದುದನ್ನು ನೋಡಿ ರಮೇಶನು ನನ್ನ ಭುಜವನ್ನು ಹಿಡಿದುಕೊಂಡು, ಮೆಲ್ಲಗೆ ಹೇಳಿದನು, 'ತಾವು ಚಿಂತೆಯಲ್ಲಿ ಮುಳುಗುವ ಅವಶ್ಯಕತೆಯಿಲ್ಲ. ಇಂಥ ಕೆಲಸ ಬಿಟ್ಟಿ ಆಗುವುದಿಲ್ಲ ಎಂಬುದು ಗೊತ್ತು, ಏನೇ ಖರ್ಚು ವೆಚ್ಚ ಆಗುವುದೊ, ನಾವು ಮಾಡು ತ್ತೇವೆ. ಏನು ದೇಶಮುಖ್?'

'ಐನೂರು ಕೊಡುವುದಕ್ಕೆ ಸಿದ್ಧವಾಗಿದ್ದೇವೆ, ಬಾಬೂಸಾಬ್.' ಗೋವಿಂದನು ಹೇಳಿದನು.

'ಏನು, ಶರ್ಮಾ, ಪೋಸ್ಟ್ ಆಫೀಸಿನಲ್ಲಿ ನಮ್ಮ ಬ್ಯಾಲೆನ್ಸ್ ಇಷ್ಟಿರಬಹುದಲ್ಲವೆ?'

ನಾನು ಸಹಾನುಭೂತಿಯಿಂದ ಹೇಳಿದೆ, 'ನೋಡಪ್ಪಾ, ನಾನು ತಮ್ಮ ಕೆಲಸವನ್ನೂ ಮಾಡಿಸಿಕೊಡುವುದಕ್ಕೆ ನನ್ನಿಂದ ಸಾಧ್ಯವಾಗುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ, ನಿಶ್ಚಿಂತರಾಗಿರಿ—ನನ್ನ ಪ್ರಯತ್ನಗಳು ಹಣದ ಆಧಾರದ ಮೇಲೆ ನಡೆಯುವುದಿಲ್ಲ. ಆದರೆ ತಾವು ಖನ್ನಾಸಾಹೇಬರಿಗೆ ಇಷ್ಟೊಂದು ಹತ್ತಿರದಲ್ಲಿದ್ದೀರಿ, ಅವರಿಗೆ ಹೇಳಿ ಅವರಿಂದ ತಮ್ಮ ಕೆಲಸವನ್ನು ಏಕೆ ಮಾಡಿಸಿಕೊಳ್ಳುವುದಿಲ್ಲ?'

ಗೋವಿಂದ ಬಂಗಲೆಯ ಕಡೆಗೆ ನೋಡಿ ಮೆಲ್ಲಗೆ ಹೇಳಿದ 'ಸಾಹೇಬರು, ಅದೂ ನಮ್ಮ ಕೆಲಸವನ್ನು ಮಾಡುವವರು! ಮಾತನಾಡುವುದೂ ನಿಷಿದ್ಧವಾಗಿದೆ. ಇಲ್ಲಂತು ಬರಿ ಸಂಕೇತಗಳಿಂದ ಕೆಲಸವಾಗುತ್ತದೆ–ಸಂಕೇತಗಳಿಂದ.'

'ಹಾಗಾದರೆ ಯಾವಾಗಲಾದರೂ ಮೇಮ್‌ಸಾಹೇಬರಿಗೆ ಹೇಳಿ....!'

'ಮೇಮ್‌ಸಾಹೇಬರಂತೂ ಸಾಹೇಬರಿಗೂ ಸಾಹೇಬರು.' ರಮೇಶನು ಒಂದು ಥರಾ ಸಿಟ್ಟಿನಿಂದ ಹೇಳಿದನು, 'ಹಗಲು ರಾತ್ರಿ ಕತ್ತೆಯಂತೆ ಕೆಲಸ ತೆಗೆಯುತ್ತಾರೆ, ಆದರೆ ನನುಗೆ ಅನುಕೂಲವಾಗುವ ಮಾತನ್ನು ಕೇಳುವುದನ್ನಂತೂ ಅವರು ಕಲಿತೇ ಇಲ್ಲ. ಒಮ್ಮೆ ಇದನ್ನು ತೆಗೆದುಕೊಂಡು ಬಾ, ಒಮ್ಮೆ ಅದನ್ನು. ಒಮ್ಮೆ ತೋಟಕ್ಕೆ ನೀರು ಹಾಕು, ಇನ್ನೊಮ್ಮೆ ಕಾಳು ಗೋಧಿ ತರಕಾರಿಗಳಿಗೆ ನೀರು ಹಾಕು ಮತ್ತು ಟೀ ತಯಾರು ಮಾಡುವ ತನಕ ಹೇಳುತ್ತಾರೆ. ಹ್ಞೂ ಹೌದು.'

'ಏನು, ಇಲ್ಲಿ ವ್ಯವಸಾಯವೂ ನಡೆಯುತ್ತದೆಯೆ?'

'ನೋಡುತ್ತಿಲ್ಲವೆ–ಬಂಗಲೆಯ ಸುತ್ತಮುತ್ತ ಎಷ್ಟೊಂದು ಭೂಮಿ ಇದೆ. ಇಲ್ಲಿ ಹಣ್ಣು ಬೆಳೆಯುತ್ತವೆ. ತರಕಾರಿ ಬೆಳೆಯುತ್ತವೆ. ಧಾನ್ಯ-ಗೋಧಿ ಮತ್ತು ಇತರ ವಸ್ತುಗಳೂ ಬೆಳೆಯುತ್ತವೆ. ಈ ಎಲ್ಲ ವಸ್ತುಗಳೂ ನಿರಾಂತಕವಾಗಿ ಮಾರಾಟವಾಗುತ್ತವೆ.

'ಮಾರಾಟವಾಗುತ್ತವೆ?' ನಾನು ಆಶ್ಚರ್ಯದಿಂದ ಕೇಳಿದೆ 'ತಿನ್ನುವುದಿಲ್ಲವೆ?'

'ತಿನ್ನುವುದಕ್ಕೇ ಹೊರಗಿನಿಂದ ಬಿಟ್ಟಿ ಮಾಲು ಬರುತ್ತದೆ.'

ನಾನು ರಿಸ್ಟ್‌ವಾಚ್ ನೋಡುತ್ತ ಹೇಳಿದೆ 'ನೋಡಿ, ನನ್ನ ಈ ಚೀಟಿಯನ್ನು ಸಾಹೇಬರ ತನಕ ಮುಟ್ಟಿಸಿ ಬಿಡಿ, ಇಲ್ಲದಿದ್ದರೆ 'ಭೇಟಿಮಾಡುವ ಸಮಯ' ಮೀರಿ ಹೋಗುತ್ತದೆ.' ಕಾಗದದ ಚೂರನ್ನು ತೆಗೆದುಕೊಂಡು ಅದರಲ್ಲಿ ನನ್ನ ಹೆಸರು ಕೆಲಸವನ್ನು ಬರೆಯತೊಡಗಿದೆ.

ಗೋವಿಂದ ನಗುತ್ತ ಹೇಳಿದ. 'ಆದರೆ ಸಾಹೇಬರು ಇನ್ನು ಮೇಮ್ ಸಾಹೇಬರ ಜೊತೆ....ನಾಚಿಕೆಯೇ ಆಗುವುದಿಲ್ಲ'ಬೆಡ್ ಟೀ' ಕುಡಿಯುವ ಸಮಯದಲ್ಲಿ ಕೂಡ ಇಬ್ಬರೂ ಜೊತೆಯಲ್ಲಿಯೇ ಮಲಗಿಕೊಂಡಿರುತ್ತಾರೆ. ಅಡಿಗೆಯವನು ಹೇಳುತ್ತಿದ್ದ, ಒಂದು ದಿನ ಇಬ್ಬರೂ ಎಂಥ ಸ್ಥಿತಿಯಲ್ಲಿ ಮಲಗಿದ್ದರೆಂದರೆ....!'

'ತನ್ನ ಯಜಮಾನನ ವಿಷಯದಲ್ಲಿ ಹೀಗೆಲ್ಲ ಮಾತನಾಡಬಾರದು' ನಾನು ಕಾಗದವನ್ನು ರಮೇಶನ ಕಡೆಗೆ ಚಾಚುತ್ತಾ ಹೇಳಿದೆ, 'ನೋಡು, ಬಹುಶಃ ಸಾಹೇಬರು ಭೇಟಿಮಾಡುವ ಕೋಣೆಯಲ್ಲಿ....!'

'ಅಣ್ಣಾ ಅವರೆ,' ಮಾತನ್ನು ಮಧ್ಯದಲ್ಲಿಯೇ ತಡೆದು ಕಾಗದವನ್ನು ತೆಗೆದುಕೊಳ್ಳುತ್ತ ರಮೇಶ ಹೇಳಿದ, 'ನಾವು ಅನೇಕ ತಿಂಗಳುಗಳಿಂದ ನೋಡುತ್ತಿದ್ದೇವೆ — ಸಾಹೇಬರು ತಡವಾಗಿ ಏಳುತ್ತಾರೆ, ನಾಸ್ತಾ ಮಾಡುತ್ತಾರೆ, ಬಾತ್‌ರೂಮಿಗೆ ಹೋಗುತ್ತಾರೆ, ಪುನಃ ನಾಸ್ತಾ ಮಾಡುತ್ತಾರೆ, ಆಮೇಲೆ ಮೇಮ್‌ಸಾಬ್ ಜೊತೆಯಲ್ಲಿ ಹರಟೆ ಹೊಡೆಯುತ್ತಾರೆ ಮತ್ತೆ....!

'ಮತ್ತೆ ಭೇಟಿಮಾಡಲು ಬರುವವರು ?'

'ಇನ್ನೊಂದು ದಿನ ಬರುತ್ತಾರೆ.'

'ಅವರೆ ಪ್ರತಿದಿನವೂ ಹೀಗೆಯೇ ನಡೆಯುತ್ತದೆ ಎಂದು ನೀವು ಹೇಳುತ್ತಿದ್ದೀರಿ.'

'ಪ್ರಾಯಃ ಪ್ರತಿ ನಿತ್ಯವೂ ಹೀಗೆಯೇ ನಡೆಯುತ್ತದೆ,' ಗೋವಿಂದ ನಗುತ್ತ ಹೇಳಿದ, 'ಆಸೆಯೆಂಬುದು ಇರುತ್ತದೆಯಲ್ಲ. ಮತ್ತೆ ನಾವು ಎಷ್ಟೊಂದು ಆಶಾವಾದಿಗಳು ಎಂಬುದು ತಮಗೆ ಗೊತ್ತೇ ಇದೆ? ನೋಡಿ–ಒಂದಲ್ಲ ಒಂದು ದಿನ ಸಾಹೇಬರು ನಮಗೆ ಯಾವುದಾದರೂ ಒಂದು ಕಚೇರಿಯಲ್ಲಿ ಕೆಲಸ ಕೊಡಿಸೇ ಕೊಡಿಸುತ್ತಾರೆಂಬ ಭರವಸೆಯ ಮೇಲೆ ನಿತ್ಯವೂ ಸಾಹೇಬರು ಮೇಮ್‌ಸಾಬ್ ಇಬ್ಬರಿಗೂ ನೆಟ್ಟಗೆ ನಿಂತು ಟಕ್ ಎಂದು ಸಲ್ಯೂಟ್ ಮಾಡುತ್ತೇವೆ, ಆದರೆ....! ತಾವಾದರೂ ನಮಗೆ ಕೆಲಸವನ್ನು ಮಾಡಿಕೊಡುವಿರಲ್ಲವೆ–

ಅದೇ ಆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಕಾರ್ಡ್ ತೆಗೆಸಿ, ಸ್ಟೀಲ್ ಪ್ಲಾಂಟ್‌ನಲ್ಲಿ ನೌಕರಿ ಗಿಟ್ಟಿಸಿಕೊಡುವಿರಲ್ಲವೆ?

ಹೇಳಲಿಲ್ಲವೆ, ಪ್ರಯತ್ನಪಡುವೆನೆಂದು? ನಾನು ಚಿಂತಾಮಗ್ನನಾಗಿ ಹೇಳಿದೆ, 'ಆದರೆ ಇಂದು ಸಾಹೇಬರನ್ನು ಭೇಟಿಯಾಗುವುದು ಅನಿವಾರ್ಯ, ನನಗೆ.'

'ನಮ್ಮ ಕೆಲಸ ಮಾಡಿಸಿಕೊಡುವಿರಾ?' ರಮೇಶನು ವ್ಯಾಪಾರೀ ಮನೋಭಾವದ 'ಟೋನ್'ನಲ್ಲಿ ಮಾತಾಡಿದಾಗ ನಾನು ಹೇಳಿದೆ, ಪ್ರಯತ್ನ ಮಾಡುವೆನು, ಹೇಳಲಿಲ್ಲವೆ ಮತ್ತು ತಮ್ಮಿಬ್ಬರ ಕೆಲಸ ಆಗುವುದೆಂಬ ಭರವಸೆಯೂ ಇದೆ.'

'ಹಾಗಾದರೆ ನಾವು ತಮ್ಮನ್ನು ಸಾಹೇಬರೊಂದಿಗೆ ಭೇಟಿ ಮಾಡಿಸಿದೆವೇ....!' ರಮೇಶ ಉತ್ಸಾಹದಿಂದ ಹೇಳಿದ, 'ನಮ್ಮ ಮಾತಂತೂ ಅಷ್ಟೊಂದು ವಿಶೇಷವಾಗಿ ನಡೆಯುವುದಿಲ್ಲ, ಆ ಡ್ರೈವರನನ್ನು ಸಂಪಾಡಿಕೊಳ್ಳಬೇಕು. ಈಗಲೇ ಕರೆಯುತ್ತೇನೆ. ಆದರೆ ಸಾಬ್ ಅವನ ಒಂದು ಕೆಲಸವನ್ನು ಮಾಡಿಕೊಡಬೇಕಾಗುವುದು.'

'ಕೆಲಸ—ಏನು?'

'ಅವನ ಮಗ ಎಂ.ಎ. ಮಾಡಿಕೊಂಡು ಮನೆಯಲ್ಲಿ ಕುಳಿತಿದ್ದಾನೆ.' ಗೋವಿಂದನು ಹೇಳಿದ. ಅವನ ಕಾರ್ಡನ್ನು ತೆಗೆಸಬೇಕು. ನೌಕರಿ ಕೊಡಿಸಬೇಕು ಮತ್ತು....!'

'ನಿಮ್ಮ ಜೊತೆಜೊತೆಯಲ್ಲಿಯೇ ಅವನ ಕೆಲಸವನ್ನೂ ಮಾಡಿಸಿಕೊಡುತ್ತೇನೆ.' ನಾನು ಬೇಸರದಿಂದ ಹೇಳಿದೆ. 'ಆದರೆ ನನಗೆ ಮೊದಲು ಸಾಹೇಬರ ಭೇಟಿ ಮಾಡಿಸು.'

ರಮೇಶ ಖಟ್-ಖಟ್-ಖಟ್ ಶಬ್ದ ಮಾಡುತ್ತ ಒಂದು ಕಡೆ ಹೊರಟು ಹೋದ. ಭೇಟಿ ಮಾಡುವವರು ಇನ್ನೂ ಕೆಲವರು ಬಂದರು. ಗೋವಿಂದನು ನಿಧಾನವಾಗಿ ಹೇಳಿದ. 'ಭಾಈಸಾಬ್, ತಾವು ರಮೇಶ ಮತ್ತು ಡ್ರೈವರನ ಕೆಲಸ ಮಾಡದಿದ್ದರೂ ಚಿಂತೆಯಿಲ್ಲ. ಆದರೆ ನನ್ನದನ್ನಂತು....ನನ್ನ ತಾಯಿ ನನ್ನ ಮದುವೆಗೆ ಬಹಳವಾಗಿ ಒತ್ತಾಯ ಮಾಡುತ್ತಿದ್ದಾಳೆ. ಆದರೆ ಈ ಚಿಕ್ಕ ಕೆಲಸದಲ್ಲಿ ಮದುವೆಯನ್ನು ಇನ್ನೊಬ್ಬಂಗಾಗಿ ಮಾಡಿಕೊಳ್ಳುವುದೇ-ಹ್ಞಂ?'

ರಮೇಶ ಒಬ್ಬ ಇಳಿಪ್ರಾಯದ ಮನುಷ್ಯನೊಂದಿಗೆ ಬಂದು ಹೇಳಿದ, ಇವನು

ಘನಶ್ಯಾಮ ಡ್ರೈವರ್. ಇವನಿಗೆ ನಾನು ಎಲ್ಲವನ್ನು ತಿಳಿಸಿಬಿಟ್ಟಿದ್ದೇನೆ, ಇವನು ನಿಮಗೆ ಸಾಹೇಬರ ಭೇಟಿ ಮಾಡಿಸುವನು.

'ಸಾಹೇಬರಿಗೆ 'ಟೀಸರ್' ಇಲ್ಲ ಎಂದು ಹೇಳಲಿಲ್ಲವೆ. 'ಘನಶ್ಯಾಮನು ಹೇಳಿದ ಕೂಡಲೇ ಗೋವಿಂದನು ಅವನನ್ನು ಒಂದು ಕಡೆಗೆ ಕರೆದುಕೊಂಡು ಹೋಗಿ ಏನನ್ನೋ ತಿಳಿಸತೊಡಗಿದ. ಆಗಲೇ ರಮೇಶ ಮೆಲ್ಲಗೆ ಹೇಳಿದ, ಸಾಬ್ ಈ ಡ್ರೈವರ್ ಮಗನಿಗೆ ಬಹಳ ಅಹಂಕಾರ ಇದೆ, ತಾವು ಇವನ ಮತ್ತು ಗೋವಿಂದನ ಕೆಲಸ ಮಾಡಿಕೊಡದಿದ್ದರೂ ಚಿಂತೆಯಿಲ್ಲ, ಆದರೆ ನನ್ನ ಕೆಲಸವನ್ನು ಮಾತ್ರ ತಾವು ಮಾಡಿಕೊಡಲೇಬೇಕು. ಅದೇ ನನ್ನ ತಂದೆ ಇದ್ದಾರಲ್ಲ, ಅವರು ರಿಟೈರ್ಡ್ ಆಗಲಿದ್ದಾರೆ.'

ಗೋವಿಂದನು ನನ್ನನ್ನು ತನ್ನತ್ತ ಬರಲು ಸೂಚಿಸಿ ಕರೆದ. ನನ್ನ ಜೊತೆಯಲ್ಲಿ ರಮೇಶನೂ ಬಂದುಬಿಟ್ಟ. ಘನಶ್ಯಾಮನು ನನ್ನತ್ತ ಶಂಕಾದೃಷ್ಟಿಯಿಂದ ನೋಡುತ್ತ ಹೇಳಿದ, 'ಬಾಬೂಜಿ, ನಮ್ಮ ಕೆಲಸ ಆಗುವುದು ತಾನೆ?'

ಗೋವಿಂದನು ಹೆದರುತ್ತ ಹೇಳಿದನು 'ಇವರು ಮಾತಿನಲ್ಲಿ ದೃಢವಾಗಿ ಇದ್ದಾರೆ. ಘನಶ್ಯಾಮ್, ಇವರ ಮುಖವನ್ನು ನೋಡುತ್ತಿಲ್ಲವೆ, ಎಂಥ ಸೌಜನ್ಯ ಪ್ರವೃತ್ತಿ ತುಂಬಿ ತುಳುಕುತ್ತಿದೆ.'

'ನನ್ನ ಜೊತೆಯಲ್ಲಿ ಬನ್ನಿ' ಘನಶ್ಯಾಮ್ ಹೇಳಿದ. 'ನೀವಿಬ್ಬರೂ ಗೇಟಿನ ಬಳಿ ಹೋಗಿ.'

ಅವರಿಬ್ಬರೂ ಹೊರಟುಹೋದಮೇಲೆ ಅವನು ಮೆಲ್ಲಗೆ ಹೇಳಿದ, 'ಬಾಬೂಜಿ, ತಮ್ಮ ಕೆಲಸವನ್ನು 'ಇವರಲ್ಲಿ,' ನಾನು ಮಾಡುತ್ತಿದ್ದೇನೆ, ಇವರಿಬ್ಬರ ಕೆಲಸವನ್ನು ತಾವು ಮಾಡಿ ಬಿಡಿ, ನನ್ನ ಮಗನ ಕಾರ್ಡನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ತೆಗೆಸಿ, ಸ್ಟೀಲ್‌ಪ್ಲಾಂಟ್‌ನಲ್ಲಿ ನೌಕರಿ....! ತಾವು ಅಲ್ಲಿ ಬೆಂಚಿನಮೇಲೆ ಕುಳಿತುಕೊಳ್ಳಿ, ನಾನು ನೋಡುತ್ತೇನೆ.'

ನಾನು ಒಪ್ಪಿಗೆಯನ್ನು ಸೂಚಿಸುತ್ತ ತಲೆ ಅಲ್ಲಾಡಿಸಿದೆ.

* * *

ನಾನು ಬೆಂಚಿನ ಮೇಲೆ ಕುಳಿತುಕೊಂಡೆ ಮತ್ತು ರಿಸ್ಟ್‌ವಾಚ್ ನೋಡುತ್ತಲೆ ಇನ್ನೂ ಸಾಹೇಬರ ಭೇಟಿಯಾಗದಿದ್ದರೆ ನನ್ನ ಕೆಲಸವೆಲ್ಲ ನಷ್ಟವಾಗಿಬಿಡುವುದು ಎಂದು ಯೋಚಿಸತೊಡಗಿದೆ. ನನಗೂ ಆಫೀಸಿಗೆ ಹೊರಡುವ ಸಮಯ ಸಮೀಪವಾಗುತ್ತಿತ್ತು. ಗೋವಿಂದ ರಮೇಶ ನನ್ನನ್ನು ಒಂದೇ ಸಮನೆ ದೃಷ್ಟಿಯಿಂದ ನೋಡುತ್ತಿದ್ದರು.

ನಾನು ಸಹ ಕಾಲ ಕಳೆಯುವ ಉದ್ದೇಶದಿಂದ ಇಬ್ಬರನ್ನೂ ಸ್ನೇಹದಿಂದ ನೋಡಿದ್ದೆ. ತಡ ಅವರು ಪುನಃ ನನ್ನ ಬಳಿಗೆ ಬಂದರು. ರಮೇಶ ಈ ಸಾರಿ ದೈನ್ಯದಿಂದ ಹೇಳಿದ. ಬಾಊಸಾಬ್, ನಮ್ಮ ಕೆಲಸವನ್ನು ನೆನಪಿನಲ್ಲಿಟ್ಟುಕೊಳ್ಳಿ, ತಮ್ಮ ಕೃಪೆಯಿಂದ ನಮ್ಮ ಜೀವನಕ್ಕೂ ಆಧಾರವಾದರೆ ನಾವು ಜೀವನಪಿಡೀ ತಮ್ಮನ್ನು ನೆನಸಿಕೊಳ್ಳುತ್ತೇವೆ.'

'ಹೌದು ಸಾರ್.' ಗೋವಿಂದನೂ ಹೇಳಿದ, ಜೀವಮಾನವೆಲ್ಲ ತಮ್ಮನ್ನು ನೆನಸಿಕೊಳ್ಳುತ್ತೇವೆ.'

ಗೋವಿಂದ ರಮೇಶರು ನನ್ನ ಕಾರಣದಿಂದ ಇಷ್ಟು ಅಲ್ಪ ಸಮಯದಲ್ಲಿಯೇ ನೀನು ಇಂದ ತಾವು, ತಾವು ಇಂದ ಭಾಊಸಾಹೇಬ್-ಸಾಬ್, ಗರ್ವ ಅಹಂಕಾರದಿಂದ ದೈನ್ಯ ಶ್ರದ್ಧೆಯವರೆಗೆ ಇಳಿದು ಬಂದಿದ್ದರು. ಇದರಿಂದಾಗಿ ನಾನು ಸ್ವಲ್ಪವೂ ಚಕಿತನಾಗುತ್ತಿರಲಿಲ್ಲ. ಏಕೆಂದರೆ ಮನುಷ್ಯ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕಾಗಿ ಏನೇನನ್ನು ಮಾಡುವುದಿಲ್ಲ, ಮತ್ತೆ ಇವರಾದರೂ....!'

ಅವರಿಬ್ಬರೂ ನನ್ನೊಂದಿಗೆ ಈ ಮಾತನ್ನು ಹೇಳಿದರು—ಘನಶ್ಯಾಮ ಡ್ರೈವರನ ಕೆಲಸ ತಾವು ಹೇಳದಿದ್ದರೂ ಹಾಗೆಯೇ ಆಗಿಬಿಡುತ್ತದೆ; ಏಕೆಂದರೆ ಅವನು ಸಾಬ್-ಮೇಮ್‌ಸಾಬ್‌ಗೆ ಬಹಳ ಬೇಕಾದವನು. ಜೀಪಿನ ಲಾಗ್ ಬುಕ್ ಅನ್ನು ಸುಳ್ಳುಸುಳ್ಳೆ ತುಂಬುತ್ತಾನೆ ಮತ್ತು ಅವನಿಗೆ 'ಮೇಲಿನ ದುಡಿಮೆಯೂ' ಇದೆ. ನಾನು ಅವರ ಕೆಲಸವನ್ನು ಮಾಡಿಸಿಕೊಡುವುದಾಗಿ ಪೂರ್ಣ ಭರವಸೆಯನ್ನು ಕೊಟ್ಟಮೇಲೆ ಅವರಿಂದ ಬಿಡುಗಡೆ ದೊರಕಿತು.

ಗೋವಿಂದ ರಮೇಶರು ಒಂದು ಕಾಗದವನ್ನು ಕೊಟ್ಟರು. ಅದರಲ್ಲಿ ಅವರ ಎಲ್ಲ ವಿವರಗಳು, ರಿಜಿಸ್ಟ್ರೇಷನ್ ನಂಬರು ಮತ್ತು ಇತರ ವಿಷಯಗಳೂ ಬರೆಯಲ್ಪಟ್ಟಿದ್ದವು. ನಾನು ಅವೆಲ್ಲವನ್ನು ಓದುತ್ತಿರುವಾಗಲೇ ಘನಶ್ಯಾಮ ಬಂದುಬಿಟ್ಟ ಮತ್ತು ನಗುತ್ತ ಹೇಳಿದ, 'ಸಾಹೇಬರಿಗೆ ಬಿಡುವೇ ಇಲ್ಲ. ಯಾವುದೋ ತುರ್ತಾದ ಮೀಟಿಂಗ್‌ಗೆ ಹೋಗಬೇಕಾಗಿದೆ, ಸಮಯವಿಲ್ಲ ಎಂದು ಹೇಳತೊಡಗಿದರು. ಆಗ ಅವರು ನನ್ನ ಸಂಬಂಧಿಗಳು, ಭೇಟಿ ಆಗಲೇಬೇಕು ಎಂದು ಹೇಳಿದೆ. ನಡೆಯಿರಿ—ಆದರೆ ನನ್ನ ಹುಡುಗನ ಕಾರ್ಡ್ ತೆಗೆಯಿಸಿ, ಸ್ಟೀಲ್‌ಪ್ಲಾಂಟ್‌ನಲ್ಲಿ ನೌಕರಿ ಕೊಡಿಸುವ ಕೆಲಸವನ್ನು ನೆನಪಿನಲ್ಲಿಟ್ಟುಕೊಂಡಿರಬೇಕು—ಗೊತ್ತೆ.'

'ಇದೂ ಮರೆಯುವಂಥ ವಿಷಯವೆ?' ನಾನು ಏಳುತ್ತ ಹೇಳಿದೆ, ಆಗ

ರಮೇಶ ಹೇಳಿದ–! 'ಭಾಊಸಾಬ್ ನಮ್ಮ ಕಾಗದವನ್ನು ಸ್ವಲ್ಪ ಹುಷಾರಾಗಿ ಇಟ್ಟುಕೊಳ್ಳಬೇಕು.'

'ಆಗಲಿ-ಆಗಲಿ' ನಾನು ಕಾಗದವನ್ನು ಜೇಬಿನಲ್ಲಿಟ್ಟುಕೊಳ್ಳುತ್ತ ಹೇಳಿದೆ. ಘನಶ್ಯಾಮನೂ ಒಂದು ಕಾಗದವನ್ನು ಕೊಡುತ್ತ ಹೇಳಿದ, 'ಇದನ್ನೂ ಕೂಡ, ಇದರಲ್ಲಿ ನನ್ನ ಮಗನ ವಿವರಗಳೆಲ್ಲ ಇವೆ.' ನಡೆಯಿರಿ, ಸಾಹೇಬರು ಕರೆಯುತ್ತಿದ್ದಾರೆ.'

ನಾನು ಹೊರಡುತ್ತಿದಂತೆಯೇ ಗೋವಿಂದ ರಮೇಶರೂ ನನ್ನ ಜೊತೆ ಹೊರಟರು. ಘನಶ್ಯಾಮನು ಕಾರವಾಗಿ ಹೇಳಿದನು–'ನೀವು ನಿಮ್ಮ ಡ್ಯೂಟಿ ನೋಡಿಕೊಳ್ಳಿ, ಸಾಹೇಬರೇನಾದರೂ ಕಂಡರೆ 'ಸಸ್ಪೆಂಡ್' ಮಾಡಿಬಿಡುವರು.'

ಇಬ್ಬರೂ ಸ್ತಂಭಿತರಾಗಿ ನಿಂತುಬಿಟ್ಟರು. ನಾವು ಮುಂದೆ ಹೋದಮೇಲೆ ಘನಶ್ಯಾಮನೇ ಹೇಳಿದ,–'ಇಬ್ಬರೂ ಕತೆಗಳು, ಸಾಬ್, ಒಳ್ಳೆಯ ನೌಕರಿಯೇ ಇವೆ. ಅವರೂ ತಮಗೆ ತೊಂದರೆ ಕೊಡುತ್ತಿದ್ದಾರೆ, ತಾವು ನನ್ನ ಮಗನ ಕೆಲಸ ಮಾಡಿಸಿಕೊಡಿ, ಅಷ್ಟೆ ...ಹೋಗಿ ಒಳಗೆ, ಸಾಬ್ ...'

ನಾನು ಒಳಗೆ ಪ್ರವೇಶಿಸಿದಾಗ ಹಾಲಿನ ಅಲಂಕಾರವನ್ನು ನೋಡಿ ಆಶ್ಚರ್ಯಚಕಿತನಾಗಿಬಿಟ್ಟೆ. ದೊಡ್ಡ ಟೇಬಲ್ಲಿನ ಹತ್ತಿರ ಎತ್ತರವಾದ ಕುರ್ಚಿಯಮೇಲೆ ಕುಳಿತ್ತಿದರು ಖನ್ನಾಸಾಬ್—ಮೂವತ್ತು ಮೂವತ್ತೆರಡು ವರ್ಷಗಳ ಯುವಕ, ಆದರೆ ಕಣ್ಣುಗಳು ಎಷ್ಟು ರಹಸ್ಯಮಯವಾದವು ಎಂದರೆ ನನ್ನ ಮೇಲೆ ನೋಡಿ ಹಾಕುತ್ತಿದ್ದವು. ನನ್ನ ನಮಸ್ಕಾರಕ್ಕೆ ಅವರು ಯಾವ ಉತ್ತರವನ್ನು ಕೊಡಲಿಲ್ಲ, ನಾನು ನನ್ನ ಕೆಲವು ಕಾಗವ ಪತ್ರಗಳನ್ನು ಅವರ ಮುಂದಿಟ್ಟೆ.

ಕಾಗವ ಪತ್ರಗಳ ಮೇಲೆ ಒಮ್ಮೆ ಸ್ಥೂಲ ದೃಷ್ಟಿಯನ್ನು ಹಾಯಿಸಿ ಹೇಳಿದರು, 'ಕಾಲೋನಿಯಲ್ಲಿ ಸ್ಕೂಲ್ ಕಟ್ಟಿಸಲು ಬಯಸುತ್ತೀರ?'

'ಯಸ್ ಸರ್' ನಾನು ನಮ್ರವಾಗಿ ಹೇಳಿದೆ, 'ಭಿಲಾಯಿ ಸ್ಟೀಲ್‌ಪ್ಲಾಂಟ್ ಏರಿಯಾ'ದಲ್ಲಿ ಅನೇಕ ಸ್ಕೂಲುಗಳಿವೆ, ಕಾಲೇಜು ಕೂಡ ಇವೆ. ಆದರೆ ನಮ್ಮ ಕಾಲೋನಿ ಇಲ್ಲಿ ಇರುವುದರಿಂದ ...ಸರ್ ನಾವೂ ಕೂಡ ನಮ್ಮ ಕಾಲೋನಿಯಲ್ಲಿ ಒಂದು ಒಳ್ಳೆಯ ಸ್ಕೂಲ್ ತೆರೆಯಲು ಬಯಸುತ್ತೇವೆ. ಅದರಿಂದ ಅಲ್ಲಿನ ನಿವಾಸಿಗಳ ಮಕ್ಕಳು ಸಹ....'

ವಿಧಾಯಕರು ಈ ಎಲ್ಲ ವಿಷಯಗಳನ್ನು ಈ ಪತ್ರದಲ್ಲಿ—ಈ ಸಿಫಾರಸ್ಸಿನ ಪತ್ರದಲ್ಲಿ ಬರೆದಿದ್ದಾರೆ. ವ್ಯಂಗ್ಯವಾಗಿ ನಗುತ್ತ ಖನ್ನಾಸಾಬ್ ಹೇಳಿದರು—

'ನಾವು ಈ ವಿಧಾಯಕರ ಆದೇಶಗಳಿಂದಲೇ ಕೆಲಸ ಮಾಡುತ್ತೇವೆ ಎಂದು ನೀವುಗಳು ತಿಳಿದಿರುವಂತಿದೆ?'

'ಸರ್' ವಿಷಯ ಅಡ್ಡದಾರಿ ಹಿಡಿಯುತ್ತಿರುವುದನ್ನು ತಪ್ಪಿಸುವ ದೃಷ್ಟಿಯಿಂದ ಅದನ್ನು ತಡೆಯಲು ನಮ್ರವಾಗಿ ಹೇಳಿದೆ. 'ವಿಧಾಯಕ ಮಹಾಶಯರು ಇಲ್ಲಿ ಆದೇಶ ನೀಡುತ್ತಿಲ್ಲ. ಬದಲು ಆ ಕ್ಷೇತ್ರದಲ್ಲಿ ಸ್ಕೂಲಿನ ಅವಶ್ಯಕತೆಯನ್ನು ಹೇಳುತ್ತ... ನಾವು ಜನರಿಂದ ಚಂದಾ ವಸೂಲು ಮಾಡಿದ್ದೇವೆ ಮತ್ತು.... '

'ನಮಗೆ ಎಲ್ಲವೂ ಗೊತ್ತು.'

'ಏನು ಸರ್?'

'ದೊಡ್ಡ ದೊಡ್ಡ ಜನ, ಟ್ಯಾಕ್ಸ್ ಕದಿಯಲು, ಬ್ಲ್ಯಾಕ್ ಮನಿಯನ್ನು ವೈಟ್ ಮನಿ ಮಾಡಲು ಹೆಚ್ಚು ಹೆಚ್ಚಾಗಿ ಚಂದಾ ಕೊಡುತ್ತಾರೆ.' ಅವರು ಹೇಳಿದರು, 'ಮತ್ತು ನಿಮ್ಮಂಥ ಜನ ಚಂದಾ ಹಣವನ್ನು ನುಂಗುವುದಕ್ಕೆ ನಾಯಕತ್ವವನ್ನು ವಹಿಸುತ್ತೀರಿ. ಲಿಸನ್—ಸರಕಾರ ಈಗ ಇದನ್ನೆಲ್ಲ ಸಹಿಸುವುದಿಲ್ಲ.'

ನಾನು ನಮ್ರನಾಗಿಯೇ ಹೇಳಿದೆ, 'ಸರ್, ತಾವು ಹೇಳುವುದು ಸರಿ ಇರಬಹುದು, ಆದರೂ ಸ್ಕೂಲನ್ನು ಕಟ್ಟಿಸುವ—ತೆರೆಯುವಂಥ ಪವಿತ್ರ ಕಾರ್ಯ ನಡೆಯುತ್ತಿದೆಯಲ್ಲವೆ, ಸರಕಾರಕ್ಕೆ ಇವೆಲ್ಲ ಸಹನೆಯಿಲ್ಲದಿದ್ದರೆ - ನಮ್ಮ ಕಾಲೋನಿಯಲ್ಲಿ ಸ್ಕೂಲು ಇಲ್ಲದಿರುವುದು ಹೇಗೆ ಸತ್ಯ—ಏಕೆ ಸತ್ಯ?'

'ಸರಕಾರಕ್ಕೆ ಬಹಳ ಕೆಲಸಗಳಿವೆ. ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡಾಗ, ಯಾವುದೋ ಒಂದು ಕ್ಷೇತ್ರದಲ್ಲಿ ಸ್ಕೂಲಿನ ಅಭಾವದಿಂದ ಅಶಿಕ್ಷಿತರಾಗಿಯೇ ಒಂದು ಪೀಳಿ ಉಳಿದುಕೊಂಡರೆ ತಾನೆ ಏನಾಗಿಬಿಡುತ್ತದೆ? ವ್ಯತ್ಯಾಸವೇನಾಗುತ್ತದೆ?'

ನಾನು ಗಂಭೀರವಾಗಿ ಹೇಳಿದೆ, 'ಇದು ನಿಮ್ಮಂಥವರ ದೃಷ್ಟಿಯಾಗಬಲ್ಲುದು, ಸರ್ಕಾರದ ದೃಷ್ಟಿಯಲ್ಲ....ಏಕೆಂದರೆ....'

'ಏಕೆಂದರೆ?'

ಆದುದರಿಂದಲೇ ನಿಮ್ಮಂಥವರ ಮಕ್ಕಳು ನಮ್ಮ ಮಕ್ಕಳ ಮೇಲೆ ಅಧಿಕಾರ ನಡೆಸುವರು, ನಮ್ಮ ಮೇಲೆ ನಡೆಸುತ್ತಿದ್ದಾರೆ.'

'ವ್ಹಾಟ್ ಡು ಯು ಮೀನ್?'

'ಪಿತೂರಿ' ನಾನು ನಿರ್ಲಕ್ಷ್ಯದಿಂದ ಹೇಳಿದೆ.

'ಗೆಟ್ ಔಟ್.' ಖನ್ನಾಸಾಬ್ ಕೋಪದಿಂದ ಹೇಳಿದರು. ನಾನು ಸಹ

ಸಿಟ್ಟಿನಿಂದ ಹೇಳಿದೆ–! 'ನಮ್ಮ ಅಧಿಕಾರ ನಮಗೆ ಗೊತ್ತಿದೆ.'

'ಐ ಸೆ ಯೂ ಗೆಟ್ ಔಟ್ ಫ್ರಂ ಮೈ ಹೌಸ್' ಅವರು ಸಿಟ್ಟಿನಿಂದ ಹೇಳಿದಾಗ ನಾನೂ ಸಿಟ್ಟಿನಿಂದ ಹೇಳಿದೆ, 'ಇದು ನಿಮ್ಮಪ್ಪನ ಮನೆಯಲ್ಲ, ಈ ರೀತಿ ನನ್ನನ್ನು... ದಿಸ್ ಈಸ್ ಗೌರ್ನಮೆಂಟ್ ಕ್ವಾರ್ಟರ್.'

ಖನ್ನಾಸಾಬ್ ಘನಶ್ಯಾಮ ಮತ್ತು ಗಾರ್ಡ್ ಗೋವಿಂದ-ರಮೇಶರನ್ನು ಜೋರಾಗಿ ಕೂಗಿದರು. ನಾನು ಈ ಮೂವರಿಗೂ ನನ್ನಿಂದ ಕೆಲಸ ಮಾಡಿಸಿಕೊಳ್ಳಬೇಕಾಗಿದೆ. ನನ್ನ ಬಗ್ಗೆ ಕ್ರಿಸ್ಟಿ ಗೌರವವನ್ನು...ಎಂದು ಸಂತೋಷ ಪಡುತ್ತ ಕಾಗದ ಪತ್ರಗಳನ್ನು ಎತ್ತಿಕೊಳ್ಳುತ್ತಿರುವಂತೆಯೇ ಅವರು ಬಂದರು.

'ಈ ಅಸಭ್ಯ ವ್ಯಕ್ತಿಯನ್ನು ಒದ್ದು ಗೇಟಿನಿಂದ ಆಚೆಗೆ ಎಸೆಯಿರಿ.'

ಮೂವರೂ ನನ್ನ ಮೇಲೆ ನಾಯಿಗಳಂತೆ ಬಿದ್ದು ನನ್ನನ್ನು ನೂಕುತ್ತ ಎಳೆಯುತ್ತ ಹೊರಗೆ ತಂದು ಗೇಟಿನ ಕಡೆಗೆ ಕರೆದುಕೊಂಡು ಹೋಗುತ್ತಿದ್ದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಏಕೆಂದರೆ, ಸ್ವಲ್ಪ ಹೊತ್ತಿಗೆ ಮುಂಚೆ ಈ ಮೂವರು ...

ಗೇಟಿನಿಂದ ಹೊರಗೆ ಬರುತ್ತಿದ್ದಂತೆಯೇ ಘನಶ್ಯಾಮನು ಕೈಮುಗಿದು ಪಶ್ಚಾತ್ತಾಪ ಮಾಡುತ್ತ, 'ಕ್ಷಮಿಸಿ, ಬಾಬೂಜಿ, ನೌಕರಿಯ ಪ್ರಶ್ನೆ ಇದು....'

'ಹೌದು, ಬಾಬೂಸಾಹೇಬ್.' ಮಧ್ಯದಲ್ಲಿಯೇ ಮಾತು ಕತ್ತರಿಸುತ್ತ ರಮೇಶ ಹೇಳಿದ. 'ಇಲ್ಲದಿದ್ದರೆ ನಾವು ಕಮಾಂಡರಿಗೆ ಈ ರೀತಿ ವರ್ತಿಸುತ್ತಿದ್ದೆವೆ.

'ತಾವು ಮಹಾ ವ್ಯಕ್ತಿಗಳು, ಸಾಬ್, ಮಹಾ ವ್ಯಕ್ತಿಗಳು!' ಗೋವಿಂದನು ಕೈಮುಗಿದು ಹೇಳಿದ. 'ನಮಗೆ ಗೊತ್ತು, ತಾವು ಧರ್ಮದ ಕೆಲಸ....', 'ಹೌದು, ಸಾಬ್, ಈ ಎಳೆದಾಟದಲ್ಲಿ ನಮ್ಮ ಆ ಕಾಗದ ಅಲ್ಲಿ ಇಲ್ಲಿ ಎಲ್ಲಿಯೂ ಬಿದ್ದು ಹೋಗಲಿಲ್ಲತಾನೆ, ನಮ್ಮ ನೌಕರಿ....'

'ನನ್ನ ಮಗನ ನೌಕರಿಯ ಕಾಗದವೂ ಇದೆಯಲ್ಲ.' ಘನಶ್ಯಾಮ್ ಮಾತನ್ನು ಕತ್ತರಿಸಿ ಹೇಳಿದ, 'ನಮ್ಮ ಕೆಲಸವನ್ನು ಖಂಡಿತ....'

'ಏನು ವಿಷಯ?' ಖನ್ನಾಸಾಬ್ ಅಲ್ಲಿಂದಲೇ ಕೇಳಿದರು, 'ಪೋಲಿಸ್‌ರನ್ನು ಕರೆಸಬೇಕೇನು?'

ನಾನು ಖನ್ನಾಸಾಬನ್ನು ದುರುಗುಟ್ಟಿಕೊಂಡು ನೋಡಲು ರಮೇಶ ಸಿಟ್ಟಿನಿಂದ ಹೇಳಿದ 'ಅರೇ, ನಮ್ಮ ಸಾಹೇಬರನ್ನು ದುರುಗುಟ್ಟಿಕೊಂಡು ನೋಡುತ್ತೀಯಾ, ಓಡಿಹೋಗು, ಇಲ್ಲದಿದ್ದರೆ ಕಣ್ಣು ಕಿತ್ತು ಕೈಗೆ ಕೊಡುವೆನು?'

'ಮತ್ತು ಈ ನಿನ್ನ ಕೈಗಳನ್ನು ಮುರಿದು ಭುಜದ ಮೇಲೆ ಇಟ್ಟುಬಿಡುವೆನು'

ಗೋವಿಂದ ನನ್ನ ಕೈಗಳನ್ನು ಎಳೆಯುತ್ತ ಹೇಳಿದ ಓಡಿ 'ಹೋಗು!'

ಘನಶ್ಯಾಮ ನನ್ನನ್ನು ನೂಕುತ್ತ ಹೇಳಿದ, 'ಓಡು ಇಲ್ಲಿಂದ, ಇಲ್ಲದಿದ್ದ ಪೋಲೀಸರು ಬಂದುಬಿಟ್ಟರೆ ಆರು ತಿಂಗಳು ಕಠಿಣ ಸಜೆ ಆಗುತ್ತದೆ.'

ನಾನು ಮೂವರ ಕೋಪದಿಂದ ಕೆಂಪಾದ ಮುಖಗಳನ್ನು ನೋಡಿ ಖನ್ನಾಸಾಬ್ ಬಗ್ಗೆ ಅವರಲ್ಲಿದ್ದ ಕರ್ತವ್ಯ ನಿಷ್ಠೆಯನ್ನು ಕಂಡು ಸಂತೋಷಪಟ್ಟೆ ಮತ್ತು ಬಟ್ಟೆಯನ್ನು ಸರಿಪಡಿಸಿಕೊಳ್ಳುತ್ತ ಹೊರಡಲು ಸಿದ್ಧನಾದಾಗ... ಮೂವರೂ ಗೇಟಿನ ಕಡೆಗೆ, ನೋಡುತ್ತ, ನನ್ನ ಪಾದಗಳನ್ನು ಮುಟ್ಟಿ— ಕಾಗದ, ನೌಕರಿ, ಇನ್ನೂ ಏನೇನೊ ಹೇಳುತ್ತಿದ್ದರು—ಗದ್ಗದಿತ ಕಂಠದಿಂದ.

ಡಾ॥ ಬಿ. ನಂ. ಚಂದ್ರಯ



ದೀನರೂ ದುಃಖಿಗಳೂ ದೇವರಲ್ಲವೇ? ಮೊದಲು ಅವರನ್ನು ಏಕೆ ಪೂಜಿಸ ಬಾರದು?

—ಸ್ವಾಮಿವಿವೇಕಾನಂದ

ಪ್ರತಿಭಾಶಾಲಿಯಾದ ತಪ್ಪಿಗಾಗಿ ಸಾರ್ವಜನಿಕರಿಗೆ ಕೊಡುವ ತೆರಿಗೆಯೇ ಆರೋಪಣೆ.

....ಸ್ವಿಫ್ಟ್

ಒಂದು ವಿವಾದವನ್ನು ಚರ್ಚಿಸದೆಯೇ ತೀರ್ಮಾನಿಸುವುದಕ್ಕಿಂತ ಚರ್ಚಿ ಸಿಯೂ ತೀರ್ಮಾನಿಸದಿರುವುದು ಲೇಸು.

—ಜೋಸೆಫ್ ಔಬರ್ಟ್

ನಮ್ಮ ಜೀವನದ ಮಹತ್ತರ ಶಕ್ತಿ—ಮಾನಸ ಚುಂಬಕ

ಇಂಗ್ಲೆಂಡಿನ ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ಕೆಲವು ವಿದ್ಯಾರ್ಥಿಗಳ ಕಣ್ಣಿಗೆ ಪಟ್ಟಿ ಕಟ್ಟಿ ಅವರನ್ನು ಒಂದು ಕಾರಿನಲ್ಲಿ ಕೂರಿಸಲಾಯಿತು. ನೀವು ಪರಸ್ಪರ ಮಾತಾಡಬೇಡಿ ಎಂದು ಅವರಿಗೆ ಆದೇಶಿಸಲಾಯಿತು. ತಮ್ಮನ್ನು ಎಲ್ಲಿಗೆ, ಯಾವ ಕೆಲಸಕ್ಕೆ ಹೀಗೆ ಕರೆದೊಯ್ಯಲಾಗುತ್ತಿದೆಯೆಂದು ಆ ವಿದ್ಯಾರ್ಥಿಗಳಿಗೆ ತಿಳಿದಿರಲಿಲ್ಲ. ಒಂದು ಗಂಟೆಯ ಕಾಲ ಕಾರು ರಸ್ತೆಗಳನ್ನು ಹಾಯ್ದು ಹೋಗುತ್ತಾ, ಸುತ್ತ ಬಳಸುತ್ತಾ ಕಡೆಗೆ ನಿಂತಿತು. ವಿದ್ಯಾರ್ಥಿಗಳ ಕಣ್ಣುಗಳ ಮೇಲೆ ಇನ್ನೂ ಪಟ್ಟಿಯಿತ್ತು. ಕಡೆಗೆ ಅವರನ್ನು ಕಾರಿನಿಂದಿಳಿಸಿ ಮಧ್ಯ ಇಂಗ್ಲೆಂಡಿನ ಬೆಟ್ಟ ಗುಡ್ಡಗಳ ಕಾಡಿನಲ್ಲಿ "ಸ್ವಚ್ಛಗೊಳಿಸಲಾದ ನಿಶ್ಶಬ್ದ ವಾತಾವರಣ"ವಿರುವ ಜಾಗ ಒಂದಕ್ಕೆ ಕರೆದೊಯ್ಯಲಾಯಿತು.

ವಿಶ್ವವಿದ್ಯಾನಿಲಯದ ಪ್ರಾಣಿವಿಜ್ಞಾನಿ ರೋಬಿನ್ ಬೇಕರ್‌ರವರು ಓರ್ವ ವಿದ್ಯಾರ್ಥಿಯನ್ನು ಒಂದೆಡೆಗೆ ಕರೆದೊಯ್ದು "ಹೇಳು, ನಮ್ಮ ವಿಶ್ವವಿದ್ಯಾಲಯ ಯಾವ ದಿಕ್ಕಿನಲ್ಲಿದೆ? ಎಂದು ಪ್ರಶ್ನಿಸಿದರು. ಆಗ ಶರದ್‌ಋತುವಿನ ಕಾಲ. ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದ ದಿಕ್ಕಿನೆಡೆಗೆ ತನ್ನ ಬೆರಳು ಮಾಡಿ ತೋರಿಸಿದ!

ಅನೇಕ ಪ್ರಾಣಿಗಳಲ್ಲಿ ತಮ್ಮ ಮನೆಗೆ ಮರಳಿ ಹೋಗುವ ಸಹಜ ಬುದ್ಧಿಶಕ್ತಿಯಿರುತ್ತದೆ. ಇಂತಹ ಪ್ರಾಣಿಗಳಲ್ಲಿ, ಬಸವನಹುಳವಂತೆ ಮಂದವಾಗಿ ಚಲಿಸುವ ಪ್ರಾಣಿಗಳಿಂದ ಹಿಡಿದು ವೇಗವಾಗಿ ಹಾರುವ ಪಾರಿವಾಳ ಮತ್ತು ಜೇನುಹುಳಗಳೂ ಸೇರಿವೆ. ಮಾನವನಿಗೂ ಸಹಜ ದಿಕ್ಕಿನ ಅರಿವಿದೆ. ನಮ್ಮ ಈ ಸಹಜ ದಿಕ್ಕಿನ ಅರಿವು ತುಂಬಾ ಕ್ಷೀಣವಾಗಿರಬಹುದು ಅಥವಾ ನಾವು ಈ ಬಗ್ಗೆ ಗಮನವನ್ನೇ ಕೊಡದಿರಬಹುದು, ಆದರೆ ನಮ್ಮ ಈ ಸಾಮರ್ಥ್ಯ ನಾವು ನೋಡುವ, ಕೇಳುವ ಅಥವಾ ಮೂಸಿ ವಾಸನೆ ನೋಡುವ ಶಕ್ತಿಯಷ್ಟೇ ವಾಸ್ತವಿಕ ಎಂದು ಬೇಕರ್ ಹೇಳುತ್ತಾರೆ. ಇದು 'ಚುಂಬಕೀಯ ಶಕ್ತಿ' ಎಂಬುವುದು ಅವರ ನಂಬಿಕೆ. ಕಾರಣ, ಕಣ್ಣುಗಳಿಗೆ ಪಟ್ಟಿ ಕಟ್ಟಿದ್ದ ವಿದ್ಯಾರ್ಥಿಗಳು ಸರಿಯಾದ ದಿಕ್ಕನ್ನು ತೋರಿಸಿದರು.

ಸಂಶೋಧಕರು, ಮನೆಗೆ ಮರಳಿ ಹೋಗುವ ಸರಿಯಾದ ದಿಕ್ಕಿನ ಅರಿವಿರುವ

ನವನೀತ 'ಸಪ್ರೋಟ್ಸ್ ಮನ್' ಹಿಂದಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟಗೊಂಡ, "ಹಮಾರೆ ಜೀವನ್ ಕೀ ಮಹಾನ್ ಶಕ್ತಿ ಮಾನಸ್ ಚುಂಬಕ್" ಲೇಖನದ ಕನ್ನಡಾನುವಾದ.

ಪ್ರಾಣಿಗಳನ್ನು ಗಮನಿಸಿದಾಗ ಅವುಗಳ ಮೆದುಳಿನಲ್ಲಿ ದಿಗ್ದರ್ಶಕ–ಯಂತ್ರವಿದೆ ಎಂದು ಅನ್ನಿಸುತ್ತದೆ' ಎಂದು ಬಹು ಹಿಂದಿನಿಂದಲೇ ಹೇಳುತ್ತಾ ಬಂದಿದ್ದಾರೆ. ಇದಕ್ಕೆ ಸಾಕ್ಷ್ಯಾಧಾರವಾಗಿ ಸಂಶೋಧಕರಿಗೆ ಅನೇಕ ಪ್ರಮಾಣಗಳು ಸಿಕ್ಕಿವೆ. ಉದಾಹರಣೆಗೆ ಮನೆಗೆ ಮರಳಿ ಬರುವ ಪಾರಿವಾಳದ ಮೆದುಳಿನಲ್ಲಿ ಲೋಹದ ಆಕ್ಸೈಡ್‌ನಂತಹ ಚಿಕ್ಕ ಚಿಕ್ಕ ಕಣಗಳಿರುತ್ತವೆ. ಇದನ್ನು ಚುಂಬಕೀಯ ಲೋಹದ ಆಕ್ಸೈಡ್ ಅಥವಾ 'ಲೋಡ್ ಸ್ಟೋನ್' ಎನ್ನುತ್ತಾರೆ. ಈ ಧಾತುವನ್ನು ಪ್ರಾರಂಭಿಕ ದಿಗ್ದರ್ಶಕ–ಯಂತ್ರ ತಯಾರಿಸುವಾಗ ಉಪಯೋಗಿಸಲಾಗಿತ್ತು.

ಈಚೆಗೆ, ಹಾವಸೆ (ಪಾಚಿ), ಚಿಟ್ಟೆಗಳು, ಡಾಲ್ಫಿನ್ ಮತ್ತು ಟ್ಯೂನಾ ಮೀನುಗಳು ಹಾಗೂ ಋತು ಬದಲಾದಾಗ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವ ಕೆಲವು ಪಕ್ಷಿಗಳಲ್ಲೂ ಚುಂಬಕೀಯ ಲೋಹದ ಆಕ್ಸೈಡ್‌ಗಳ ಕಣಗಳು ಕಂಡು ಬಂದಿವೆ. ಬೇಕರ್‌ರವರ ಪ್ರಕಾರ ಮಾನವನಲ್ಲೂ ಚುಂಬಕೀಯ ಲೋಹದ ಆಕ್ಸೈಡ್‌ಗಳ ಕಣಗಳಿರಬಹುದು. ಈ ಕಣ, ಮೂಗು ಕಪಾಳ ಸೇರುವ ಮೆದುಳಿನ ಬಳಿಯಿರುತ್ತವೆ. ಇದರಿಂದಾಗಿಯೂ ಮನುಷ್ಯನಿಗೆ ಯಾವುದೇ ಚುಂಬಕೀಯ ಆಕರ್ಷಣೆಯು ಅರಿವಾಗುತ್ತದೆ (ಬೇಕರ್‌ರವರ ಯುಕ್ತಿಗಳ ಪರಿಣಾಮಗಳನ್ನು ಪುಷ್ಟೀಕರಿಸುವ ಪ್ರಯತ್ನಗಳು ಅಸಫಲವಾಗಿವೆ. ಮನುಷ್ಯನಲ್ಲೂ ಮನೆಗೆ ಮರಳುವ ಸಹಜ ಚುಂಬಕೀಯ ಬುದ್ಧಿಶಕ್ತಿಯಿದೆ ಎಂಬುದನ್ನು ಒಪ್ಪಲು ಅನೇಕ ಸಂಶೋಧಕರು ಸಿದ್ಧರಿಲ್ಲ).

ಸೂರ್ಯನಿಂದಾಲೋಕಿತ ಗ್ರಹದಲ್ಲಿ ನಾವು ವಾಸಿಸುತ್ತೇವೆ. ಅಧಿಕಾಂಶ ಜೀವಿತ ಪ್ರಾಣಿಗಳು ಬೆಳಕನ್ನು ಪಡೆಯಲು ಒಂದಲ್ಲ ಒಂದು ಉಪಾಯವನ್ನು ಕೈಗೊಂಡಿವೆ. ನಾವು, ನಾನಾ ವಿಧದ ಧ್ವನಿಗಳಿಂದ ತುಂಬಿದ ಜಗತ್ತಿನಲ್ಲಿ ವಾಸಿಸುತ್ತೇವೆ. ಅಧಿಕಾಂಶ ಪ್ರಾಣಿಗಳು ಕಂಪನವನ್ನು ಅನುಭವಿಸಲು ತಮ್ಮ ಒಂದಲ್ಲ ಒಂದು ಇಂದ್ರಿಯವನ್ನು ವಿಕಸಿತಗೊಳಿಸಿಕೊಂಡಿವೆ. ಪೃಥ್ವಿಯೂ ಒಂದು ವಿಶಾಲಕಾಯ ಚುಂಬಕ. ಹೀಗಾಗಿ, ಮಾನವ ಮತ್ತು ಅನೇಕ ಜೀವಿತ ಪ್ರಾಣಿಗಳ ಮೇಲೆ ಪೃಥ್ವಿಯ ಚುಂಬಕೀಯ ಶಕ್ತಿಯ ಪ್ರಭಾವ ಬೀಳುತ್ತದೆ ಎಂಬ ವಿಚಾರ ಗೊತ್ತಾದ ಮೇಲೆ ನಾವು ಆಶ್ಚರ್ಯಪಡಬೇಕಾಗಿಲ್ಲ.

ಜೀವ ಚುಂಬಕ ವಿಜ್ಞಾನ ಇನ್ನೂ ತನ್ನ ಪ್ರಾರಂಭಿಕ ಅವಸ್ಥೆಯಲ್ಲಿದೆ. ಆದರೆ ಇದು ಆರೋಗ್ಯಕರ ಮತ್ತು ಜೀವನವನ್ನು ಪ್ರಭಾವಿತಗೊಳಿಸುವ ಮಹಾನ್ ಅದೃಶ್ಯ ಶಕ್ತಿಯನ್ನು ಪತ್ತೆ ಹಚ್ಚಲು ಪ್ರಾರಂಭಿಸಿದೆ. ಉದಾಹರಣೆಗೆ, ರಷ್ಯಾದ

ವಿಜ್ಞಾನಿಗಳು ಸೂರ್ಯನ ತಳದಿಂದೇಳುವ ಜ್ವಾಲೆಗಳಿಂದ ಪೃಥ್ವಿಯ ವಾಯುಮಂಡಲದಲ್ಲಿ ಚುಂಬಕೀಯ ಲೋಹದ ಆಕ್ಸೈಡ್ ಕಣಗಳು ಸಿಡಿದಾಗ ಪೃಥ್ವಿಯ ಚುಂಬಕೀಯ ಕ್ಷೇತ್ರದಲ್ಲಿ ಆಕಸ್ಮಿಕವಾಗಿ ಅವ್ಯವಸ್ಥೆಯುಂಟಾಗುತ್ತದೆ. ಆಗ ನೇತ್ರ ರೋಗಿಗಳ ಕಣ್ಣಿನೊಳಗೆ ನೀರಿನ ಒತ್ತಡ ಹೆಚ್ಚುವುದರಿಂದ ರೋಗಿಗೆ ತುಂಬಾ ಕಷ್ಟವಾಗುತ್ತದೆ ಎಂದು ಅಧ್ಯಯನದಿಂದ ಹೇಳಿದ್ದಾರೆ. ಅಮೇರಿಕಾದ ಸಂಶೋಧಕರು 'ಈ ರೀತಿಯ ಭೂ-ಚುಂಬಕೀಯ ಗೊಂದಲವಾದಾಗ ಮನೋರೋಗ ಚಿಕಿತ್ಸಾಲಯಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗುತ್ತದೆ' ಎನ್ನುತ್ತಾರೆ.

ದೇಹ ವಿದ್ಯುತ್ತಿನ ಭೂಮಿಕೆ

ವಾತಾವರಣದಲ್ಲಿ ನಾವು ನಿರ್ಮಿಸುವ ವಿದ್ಯುತ್ ಚುಂಬಕೀಯ ಕ್ಷೇತ್ರಗಳಿಂದ ಸಾಕಷ್ಟು ಹಾನಿಯಾಗುವ ಸಂಭವವಿದೆ. ಕಾಲರಾಡೋನಿಯ ಬಗ್ಗೆ ಸಂಶೋಧನೆ ಮಾಡುತ್ತಿದ್ದ ವಿಜ್ಞಾನಿಗಳಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಂದ ೪೦ ಮೀಟರ್‌ನೊಳಗಿನ ದೂರದಲ್ಲಿರುವ ಅಧಿಕಾಂಶ ಕಟ್ಟಡ ನಿವಾಸಿಗಳಿಗೆ 'ಲ್ಯೂಕೀಮಿಯಾ ಮತ್ತು ಲಿಂಫೋಮಾ' ಕ್ಯಾನ್ಸರ್ ಇತ್ತೆಂಬ ವಿಷಯ ತಿಳಿಯಿತು. ಈ ಟ್ರಾನ್ಸ್‌ಫಾರ್ಮರ್‌ಗಳಿಂದ ಶಕ್ತಿಶಾಲಿ ಚುಂಬಕೀಯ ಕ್ಷೇತ್ರಗಳಾಗುತ್ತವೆ. ಬೇರೆ ಬೇರೆ ಅಧ್ಯಯನಗಳಿಂದ ಚುಂಬಕೀಯ ಕ್ಷೇತ್ರವು ಕೆಲವು ರೀತಿಯ ಕ್ಯಾನ್ಸರ್‌ಗಳನ್ನು ಹೆಚ್ಚಿಸುತ್ತವೆ ಎಂಬ ವಿಷಯ ತಿಳಿದು ಬಂದಿದೆ.

ಕೆಲವು ವ್ಯಕ್ತಿಗಳ ಮೇಲೆ ಸಾಮಾನ್ಯ ಲಘು ಚುಂಬಕೀಯ ಕ್ಷೇತ್ರಗಳಲ್ಲಿನ ಪರಿವರ್ತನೆಗಳ ಪ್ರಭಾವವೂ ಬೀಳಬಹುದು. ಭವಿಷ್ಯದೊಳಗೆ ಏನಿದೆ, ಎಲ್ಲಿ ಏನಿದೆ ಎಂದು ಹೇಳುವ ವ್ಯಕ್ತಿಗಳ ಬಗ್ಗೆ ಅಧ್ಯಯನ ಮಾಡಿದಾಗ, ಇವರ ಈ ಸಾಮರ್ಥ್ಯಕ್ಕೆ ಚುಂಬಕೀಯ ಸಂವೇದನಾ ಶೀಲತೆ ಕಾರಣ ಎಂಬ ವಿಷಯ ತಿಳಿದು ಬಂತು. ಯಾವ ವ್ಯಕ್ತಿಗೆ ಮತ್ತೊಬ್ಬ ವ್ಯಕ್ತಿಯ ಮನಸ್ಸನ್ನರಿಯುವ ಸಾಮರ್ಥ್ಯವಿರುತ್ತದೆಯೋ ಅಂತಹ ವ್ಯಕ್ತಿಗಳ ದೇಹವು ಲಘು ವಿದ್ಯುತ್ ಚುಂಬಕೀಯ ಸಂಕೇತಗಳನ್ನು ಗ್ರಹಿಸುತ್ತದೆ ಎಂದೂ ಕೆಲವು ವಿದ್ವಾಂಸರು ಹೇಳುತ್ತಾರೆ.

ಅನೇಕ ವಿಜ್ಞಾನಿಗಳಿಗೆ ಚುಂಬಕ ವಿಜ್ಞಾನದ ಸಂಶೋಧನೆಗಳ ಬಗ್ಗೆ ಸಂದೇಹವಿದೆ, ಕಾರಣ, ಈ ಪರೀಕ್ಷೆಗಳನ್ನು ಪುಷ್ಟೀಕರಿಸುವುದು ತುಂಬಾ ಕಷ್ಟ. ವಿಜ್ಞಾನಿಗಳು, ಜೀವ ರಾಸಾಯನಿಕ ಆಧಾರದಿಂದಲೇ ಜೀವನವನ್ನರಿಯಲು ಪ್ರಯತ್ನಿ

ಸುತ್ತಾ ಬಂದಿದ್ದಾರೆ. ಅಧಿಕಾಂಶ ರೋಗಗಳಿಗೆ ಚಿಕಿತ್ಸೆಯು ಒಂದಲ್ಲ ಒಂದು ರಸಾಯನದ ಇಂಜೆಕ್ಷನ್ ಮಾತ್ರೆ ಅಥವಾ ಚೂರ್ಣ ತಿನ್ನುವುದರಿಂದಲೇ ವಾಸಿಯಾಗಿದೆ.

ಆದರೆ ನಮ್ಮ ಶರೀರದ ನಿರ್ಮಾಣ ಮತ್ತು ಅಸ್ತಿತ್ವದಲ್ಲಿ ವಿಭಿನ್ನ ರಾಸಾಯನಿಕ ಪದಾರ್ಥಗಳು ಹಾಗೂ ಪ್ರಕ್ರಿಯೆಗಳ ಕೈವಾಡವಿರುವಷ್ಟೇ ವಿದ್ಯುತ್‌ಶಕ್ತಿ ಮತ್ತು ಅದರ ಸ್ಪಂದನಗಳ ಕೈವಾಡವಿದೆ. ವಾಸ್ತವಿಕತೆಯೇನೆಂದರೆ, ನಮ್ಮ ಕೇಂದ್ರೀಯ ಸ್ನಾಯು-ತಂತ್ರಗಳನ್ನು ವಿದ್ಯುತ್ ಸ್ಪಂದನಗಳೇ ನಡೆಸುತ್ತಿವೆ. ವಿಜ್ಞಾನಿಗಳಿಗೆ, ಇದುವರೆಗೂ ವಿದ್ಯುತ್ ಮತ್ತು ಚುಂಬಕೀಯ ಆಕರ್ಷಣೆಗಳ ಮಧ್ಯೆ ರಹಸ್ಯಮಯ ಸಂಬಂಧದ ಗಂಟನ್ನು ಬಿಡಿಸಲು ಸಾಧ್ಯವಾಗಿಲ್ಲವೆಂಬುದು ಸರಿಯಾದರೂ ವಿದ್ಯುತ್ ತರಂಗಗಳು ಪ್ರವಾಹಿತಗೊಳ್ಳುವಲ್ಲಿ ಚುಂಬಕೀಯ ಕ್ಷೇತ್ರಗಳಾಗುತ್ತದೆ ಎಂಬುದನ್ನಂತೂ ಅವರು ಪತ್ತೆಮಾಡಿದ್ದಾರೆ.

ಕೊಲೊರಾಡೋ ವಿಶ್ವವಿದ್ಯಾಲಯದ ಆರೋಗ್ಯ-ವಿಜ್ಞಾನ ಕೇಂದ್ರದಲ್ಲಿ ಡಾ|| ಜಾನ್ ಜಿನರ್ ವ್ಯೈನ್ ಮತ್ತು ಅವರ ಮಿತ್ರರು ಒಂದು ಯಂತ್ರವನ್ನು ಉಪಯೋಗಿಸುತ್ತಿದ್ದಾರೆ. ಈ ಯಂತ್ರದಿಂದ ಶರೀರದ ಸೂಕ್ಷ್ಮ ಚುಂಬಕೀಯ ಕ್ಷೇತ್ರಗಳನ್ನು ಪತ್ತೆಹಚ್ಚಬಹುದು.

ಚುಂಬಕೀಯ ಕ್ಷೇತ್ರವನ್ನು ಪತ್ತೆಹಚ್ಚುವ ಈ ಅತ್ಯಧಿಕ ಸಂವೇದನಾಶೀಲ ಯಂತ್ರ 'ಸುಪರ್ ಕಂಡಕ್ಟಿಂಗ್ ಕ್ವಾಂಟಮ್ ಇಂಟರ್‌ಫಿಯರೆನ್ಸ್ ಡಿವೈಸ್' (ಎಸ್. ಕ್ಯೂ. ಯೂ. ಐ. ಡಿ.)ನಲ್ಲಿ ಇದರ ವಿದ್ಯುತ್ ಪ್ರತಿರೋಧ ಸಾಮರ್ಥ್ಯವನ್ನು ಶೂನ್ಯಗೊಳಿಸಲು, ದ್ರವ ಹೀಲಿಯಮ್ ಗ್ಯಾಸನ್ನು ಉಪಯೋಗಿಸಲಾಗುತ್ತದೆ. ಈ ಯಂತ್ರದಿಂದ ಮೆದುಳಿನೊಳಗೆ ಕೋಶಿಕೆಗಳ ಗುಚ್ಛದ ಚುಂಬಕೀಯ ಕ್ಷೇತ್ರವನ್ನು ತಿಳಿದುಕೊಳ್ಳಲಾಗುತ್ತದೆ. ಆರೋಗ್ಯಕಾರಿ ಮೆದುಳಿನ ಗುಚ್ಛದ ಚುಂಬಕೀಯ ಸಾಮರ್ಥ್ಯವನ್ನು ಧೈರ್ಯಪೂರ್ವಕದಿಂದ ಪರೀಕ್ಷಾ-ಸಂಶೋಧನೆ ಮಾಡಿ ಜಿನರ್‌ವ್ಯೈನ್ ಮತ್ತು ಇನ್ನಿತರ ವಿಜ್ಞಾನಿಗಳು ಮೆದುಳಿನಲ್ಲಿ ವಿಭಿನ್ನ ಕಾರ್ಯ ಮಾಡುವ ಕ್ಷೇತ್ರಗಳನ್ನು ಸರಿ-ಸರಿಯಾಗಿ ಪತ್ತೆಹಚ್ಚುವ ಪ್ರಯತ್ನ ಮಾಡುತ್ತಿದ್ದಾರೆ.

ಆದರೆ ವೈದ್ಯರು ಇದಕ್ಕೂ ಮುಂದುವರಿದು, ಶರೀರದ ವಿದ್ಯುತ್ ಚುಂಬಕೀಯ ಕ್ಷೇತ್ರಗಳಲ್ಲಿ ಅವ್ಯವಸ್ಥೆಯುಂಟಾಗುವ ಕ್ಷೇತ್ರಗಳನ್ನೂ ಸರಿಯಾಗಿ ಗುರುತಿಸಿದರೆ ಆಗ....? ಅಥವಾ ವೈದ್ಯರು ಶರೀರದ ವಿಕಾರಯುಕ್ತ ಸಂಕೇತಗಳ ಜಾಗದಲ್ಲಿ ಮಾನವ ನಿರ್ಮಿತ ಸರಿಯಾದ ಸಂಕೇತಗಳನ್ನು ಕೊಡಲಾರಂಭಿಸಿದರೆ ಅಂದರೆ

ಶರೀರದ ಕೋಶಿಕೆಗಳ ಭಾಷೆಯಲ್ಲಿಯೇ ಶರೀರಕ್ಕೆ ತನಗೆ ತಾನೇ ರೋಗರಹಿತ ಮಾಡಿಕೊಳ್ಳಲು ಆಜ್ಞಾಪಿಸಲಾರಂಭಿಸಿದರೆ, ಆಗ....?

ಚಮತ್ಕಾರದ ಚಿಕಿತ್ಸೆ

ಮೇಲಿನ ಚಮತ್ಕಾರಗಳೂ ನಡೆಯುತ್ತಿವೆ. ನ್ಯೂಯಾರ್ಕ್ ನಗರದ ಕೊಲಂಬಿಯಾ ಪ್ರೆಸ್‌ಬಿಟೇರಿಯನ್ ಮೆಡಿಕಲ್ ಸೆಂಟರ್‌ನಲ್ಲಿ ಡಾ|| ಎಂಡ್ರೂ ಬ್ಯೆಸೆಟ್‌ರವರು ವಿದ್ಯುತ್ ಔಷಧಿ ವಿಜ್ಞಾನ ಕ್ಷೇತ್ರದಲ್ಲಿ ಅಗ್ರಗಣ್ಯರು. ಚಿಕಿತ್ಸಾ ಕ್ಷೇತ್ರದಲ್ಲಿ ವಿದ್ಯುತ್ ಶಕ್ತಿಯು, ಇಂದು ಔಷಧಿಗಳು ಅಥವಾ ಶಸ್ತ್ರಕ್ರಿಯೆ ಯಂತೆಯೇ ಉಪಯೋಗಕಾರಿಯಾಗುತ್ತದೆಂದು ಮತ್ತು ಕೆಲವು ರೋಗಗಳಿಗಂತೂ ಔಷಧಿ ಮತ್ತು ಶಸ್ತ್ರಕ್ರಿಯೆಗಳ ಅಗತ್ಯವೇ ಇಲ್ಲವೆಂದೂ ಅವರು ಭವಿಷ್ಯ ನುಡಿದಿದ್ದಾರೆ.

ಒಬ್ಬ ರೋಗಿಯ ಕಾಲು ಮುರಿದಿದೆ. ಎಷ್ಟೇ ಪ್ರಯತ್ನಿಸಿದಾಗ್ಯೂ ಅವನ ಮುರಿದ ಕಾಲನ್ನು ಹೊಂದಿಸಲಾಗುವುದಿಲ್ಲ. ಇಂಥಹ ರೋಗಿಯೊಬ್ಬ ಡಾ| ಬ್ಯೆಸೆಟ್‌ರವರ ಬಳಿ ಹೋದರೆ ಅವನು ಮನೆಗೆ ಮರಳುವಾಗ ತನ್ನೊಂದಿಗೆ ತಂತಿಗಳಿಂದ ಹೆಣೆದ ಒಂದು ಡಬ್ಬದ ಎರಡು ಪ್ಯಾಡ್‌ಗಳನ್ನೊಯ್ಯುತ್ತಾನೆ. ಈ ಡಬ್ಬವನ್ನು ವಿದ್ಯುತ್ ಪ್ಲಗ್‌ಗೆ ಸೇರಿಸಲಾಗುತ್ತದೆ. ರೋಗಿ, ಮುರಿದೆಲಬುಗಳ ಎರಡೂ ಕಡೆ ಒಂದೊಂದು ಪ್ಯಾಡನ್ನಿಟ್ಟುಕೊಂಡು ಈ ಯಂತ್ರವನ್ನು ಚಾಲೂ ಮಾಡುತ್ತಾನೆ. ಪ್ಯಾಡ್‌ನಲ್ಲಿದ್ದ ಕಾಯಿಲ್‌ನಿಂದ ರೋಗಿಯ ಅಸ್ಥಿ-ಮಾಂಸದಲ್ಲಿ ಎಂಥಹ ಸ್ಪಂದನಶೀಲ ವಿದ್ಯುತ್ ಚುಂಬಕೀಯ ಕ್ಷೇತ್ರವಾಗುತ್ತದೆಂದರೆ ಅದು ಮೂಳೆಗೆ ಸ್ವತಃ ಸೇರಿಕೊಳ್ಳಲು ಆಜ್ಞಾಪಿಸುತ್ತದೆ.

ವಿದ್ಯುತ್ ಚುಂಬಕೀಯ ಕ್ಷೇತ್ರಗಳಿಂದ ಮುರಿದೆಲಬುಗಳು ಶೀಘ್ರವೇ ಸೇರಿಕೊಳ್ಳುತ್ತವೆಯೆಂದು ಕಳೆದ ಕೆಲವು ವರ್ಷಗಳ ವೈಜ್ಞಾನಿಕ ಅಧ್ಯಯನಗಳಿಂದ ರುಜುವಾತಾಗಿದೆ.

ವಿದ್ಯುತ್ ಔಷಧಿ ವಿಜ್ಞಾನದ ಕ್ಷೇತ್ರದಲ್ಲಿ ಬ್ಯೆಸೆಟ್ ಮತ್ತು ಇನ್ನಿತರ ವಿಜ್ಞಾನಿಗಳ ಸಂಶೋಧನೆಗಳಿಂದ ಭವಿಷ್ಯದಲ್ಲಿ ಇನ್ನೂ ಸಫಲತೆಗಳು ಸಿಗುವ ಭರವಸೆಗಳಿವೆ.

ಒಂದು ವೇಳೆ ಸ್ಯಾಲಾಮೆಂಡರ್ (ಬೆಂಕಿಯಲ್ಲಿರುವ ಹಲ್ಲಿಯನ್ನು ಹೋಲುವ ಒಂದು ಪೌರಾಣಿಕ ಸರೀಸೃಪ)ದಂತಹ ಯಾವುದಾದರೂ ಅವಿಯ ಪ್ರಾಣಿಯ ಕಾಲು ಮುರಿದುಹೋದರೆ ಅದರ ಜಾಗದಲ್ಲಿ ಹೊಸ ಕಾಲೊಂದು ತನ್ನಷ್ಟಕ್ಕೆ

ತಾನೇ ಬೆಳೆಯುತ್ತಿತ್ತು. ಅನೇಕ ಪ್ರಾಣಿಗಳಲ್ಲಿ ಈ ಶಕ್ತಿಯಿರುತ್ತದೆ. ಮಾನವನ ಎಳೆಯ ಸಂತಾನದಲ್ಲೂ ಕೆಲವು ಮಿತಿಯವರೆಗೆ ಈ ಶಕ್ತಿಯಿರುತ್ತದೆ. ಕೆಲವು ಮಕ್ಕಳ ಕತ್ತರಿಸಿದ ಬೆರಳು ಮತ್ತೆ ಬೆಳೆಯಬಹುದು.

ಶರೀರದ ಬೆಳವಣಿಗೆಯೊಂದಿಗೇ ಈ ಸಾಮರ್ಥ್ಯ ಕೊನೆಗೊಳ್ಳುತ್ತದೆ. ವಿದ್ಯುತ್ ಶಕ್ತಿಯ ಮೂಲಕ ಶರೀರದ ಯಾವುದಾದರೂ ವಿಶೇಷ ಭಾಗದ ಸಾಮರ್ಥ್ಯವನ್ನು ಹೆಚ್ಚಿಸಿ ರೋಗಿಯ ಶರೀರಕ್ಕೆ 'ಅದು ಸರಿಯಾಗಲಿ ಅಥವಾ ಯಾವ ಅಂಗದ ಅಗತ್ಯವಿದೆಯೋ ಅದನ್ನು ಪುನಃ ನಿರ್ಮಿಸಿಕೊಳ್ಳಲಿ' ಎಂದು ಹೇಳುವ ಸಾಧ್ಯತೆಯಾಗಬಹುದು. ಈ ರೀತಿ ನಾವು ಮೆದುಳಿಗೆ ಅಥವಾ ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸಬಹುದು.

ಸಂಶೋಧಕರು ಪ್ರೌಢ ಇಲಿಗಳ ಅಂಗಗಳನ್ನು ಮತ್ತೆ ಬೆಳೆಸುವಲ್ಲಿ ಯಶಸ್ಸು ಪಡೆದಿದ್ದಾರೆ. ಇಲಿಯೂ ಸ್ತನ್ಯಜೀವಿ. ಇದರ ಶರೀರದಲ್ಲಿಯೂ ವಯಸ್ಸಾದ ಮೇಲೆ ಯಾವುದಾದರೂ ಅಂಗ ನಷ್ಟವಾದರೆ ಮತ್ತೆ ಬೆಳೆಯುವುದಿಲ್ಲ. ಸ್ಪಂದನ-ಶೀಲ ವಿದ್ಯುತ್ ಚುಂಬಕೀಯ ಕ್ಷೇತ್ರಗಳಿಂದಾಗಿ ಮನುಷ್ಯನ ಶರೀರದ ಮೂಳೆಗಳು ಶೀಘ್ರವೇ ಸೇರುತ್ತವೆ ಮತ್ತು ಗಾಯಗಳು ಶೀಘ್ರವೇ ಗುಣಮುಖವಾಗುತ್ತದೆಂಬುದನ್ನು ಸಿದ್ಧಪಡಿಸಲಾಗಿದೆ.

ಔಷಧಿ ಮತ್ತು ಚುಂಬಕಗಳ ಸಂಗಮ

ಮೆದುಳಿನ ಸಾಮರ್ಥ್ಯವನ್ನು ಗುರುತಿಸುವ ಹೊಸ ಯಂತ್ರಗಳಿಂದ ನಾವು ಮಲಗಿದ್ದಾಗ, ನಮ್ಮ ಮೆದುಳಿನ ಚುಂಬಕೀಯ ಕ್ಷೇತ್ರ ಅತಿ ಹೆಚ್ಚು ಪ್ರಬಲವಾಗುತ್ತದೆಂಬುದನ್ನು ತಿಳಿದು ವಿಜ್ಞಾನಿಗಳು ಆಶ್ಚರ್ಯಚಕಿತರಾಗಿದ್ದಾರೆ. ಸೋವಿಯತ್ ಸಂಶೋಧಕರು ಅನೇಕ ವರ್ಷಗಳಿಂದ ನಿದ್ದೆಯ ಬಗ್ಗೆ ಸಂಶೋಧನೆ ಮಾಡುತ್ತಿದ್ದಾರೆ. ಈ ಪರೀಕ್ಷೆಯಲ್ಲಿ, ಒಬ್ಬ ವ್ಯಕ್ತಿಯ ತಲೆಯ ನಾಲ್ಕೂ ಕಡೆಗೆ ವಿಶೇಷ ರೀತಿಯ ಸ್ಪಂದನಾಶೀಲ ವಿದ್ಯುತ್ ಚುಂಬಕೀಯ ಕ್ಷೇತ್ರಗಳನ್ನು ಪ್ರಭಾವಿತಗೊಳಿಸಿ ಅವನಿಂದ ೧೨ ಗಂಟೆಗಳ ಕಾಲ ಮಲಗಿಸಲಾಗುತ್ತದೆ. ಈಗ, ಅತ್ಯಧಿಕ ಸಂವೇದನಾಶೀಲ ಯಂತ್ರ ಎಸ್. ಕ್ಯೂ. ಯು. ಐ. ಡಿ.ಯಿಂದ ಮೆದುಳಿನ ಯಾವುದೇ ಭಾಗದ ಕಾರ್ಯಕಲಾಪದ ಸರಿಯಾದ ಕಾರಣವನ್ನು ಪತ್ತೆಮಾಡಲಾಗುತ್ತದೆ. ಇದರಿಂದ ಈ ಯಂತ್ರ ಮತ್ತು ವಿದ್ಯುತ್ ನಿದ್ದೆಯ ವಿಧಿಯನ್ನು ಒಂದೊಂದು ಸಲ ಒಟ್ಟಿಗೇ ಉಪಯೋಗಿಸಿ ಅನಿವಾರ್ಯ ರೋಗಗಳನ್ನು ಉಪಚರಿಸಲಾಗುತ್ತದೆ. ಭವಿಷ್ಯದಲ್ಲಿ ಈ ಯಂತ್ರಗಳ ಉಪಯೋಗ ಮಾನವ

ರೋಗಗಳ ಚಿಕಿತ್ಸೆಗೆ ಅಥವಾ ಜ್ಞಾನ-ವಿಜ್ಞಾನವನ್ನು ಸುಲಭವಾಗಿ ತಿಳಿದುಕೊಳ್ಳಲು ಉಪಯೋಗಿಸುವ ಸಂಭವವಿದೆ.

ಪಶ್ಚಿಮದ ವಿಜ್ಞಾನಿಗಳು, ಕೆಲವು ವಿಶೇಷ ರೀತಿಯ ವಿದ್ಯುತ್ ಚುಂಬಕೀಯ ತರಂಗಗಳನ್ನು ಪ್ರಯೋಗಿಸಿ ಶರೀರದ ಯಾವುದೇ ಭಾಗವನ್ನು ಜೋಮು ಹಿಡಿಸಬಹುದೆಂಬುದನ್ನು ಕಂಡುಹಿಡಿದಿದ್ದಾರೆ. ಹಲ್ಲುಗಳನ್ನು ಕೀಳಲು ಈ ತರಂಗಗಳನ್ನು ಉಪಯೋಗಿಸಬಹುದು. ಈ ಹೊಸ ವಿಧಾನದಿಂದ ರೋಗವನ್ನು ಶಮನಗೊಳಿಸಬಹುದು. ಅಲ್ಲದೆ, ಜೋಮುಗೊಳಿಸುವ ರಾಸಾಯನಿಕ ಔಷಧಗಳಿಂದಾಗುವ ದುಷ್ಪರಿಣಾಮಗಳಿಂದಲೂ ಇದು ಹೊರತಾಗಿದೆ. ಆದರೆ, ವಿದ್ಯುತ್ ಚುಂಬಕೀಯ ಉಪಚಾರದಿಂದ ಶರೀರಕ್ಕೆ ಏನು ಹಾನಿಯಾಗುತ್ತದೆಂಬುವ ವಿಷಯ ಇನ್ನೂ ತಿಳಿದಿಲ್ಲ.

ಈ ನಡುವೆ ಕೆಲವು ವಿಜ್ಞಾನಿಗಳು ಔಷಧಿಗಳು ಮತ್ತು ಚುಂಬಕೀಯ ಶಕ್ತಿಗಳನ್ನು ಸಂಗಮಗೊಳಿಸಿ ಉಪಯೋಗಿಸುವ ವಿಧಾನವನ್ನು ಕಂಡುಹಿಡಿಯುತ್ತಿದ್ದಾರೆ. ಶರೀರದ ಯಾವ ಭಾಗಕ್ಕೆ ಔಷಧಿಯನ್ನು ಕಳುಹಿಸಬೇಕೋ ಅದಕ್ಕೆದುರಾಗಿ ಒಂದು ಚುಂಬಕವಿಟ್ಟು ಮಾತ್ರೆಯ ಮೂಲಕ ಔಷಧಿಯನ್ನು ಕಳುಹಿಸಲಾಗುತ್ತದೆ. ಈ ರೀತಿ ಶಕ್ತಿಯುತ ಔಷಧಿಗಳನ್ನು ಸ್ವಲ್ಪ-ಸ್ವಲ್ಪವೇ ಪ್ರಮಾಣದಲ್ಲಿ ಮತ್ತು ಹೆಚ್ಚು ನಿಯಮಿತವಾಗಿ ಕೊಡಬಹುದು.

ಜೀವ ಚುಂಬಕದ ವಿಕಸಿತಗೊಳ್ಳುತ್ತಿರುವ ವಿಜ್ಞಾನದಿಂದ ಮನುಷ್ಯನಿಗೆ, ಚಿಕಿತ್ಸೆಯ ಹೊಸಹೊಸ ಸಾಧನಗಳು ಸಿಗುತ್ತವೆಯೆಂಬ ಭರವಸೆ ನಮಗಾಗುತ್ತಿರುವುದು ಮಾತ್ರವಲ್ಲದೇ, ನಮ್ಮ ಶರೀರ ಕೆಲವು ರಾಸಾಯನಿಕ ಪದಾರ್ಥಗಳ ಸಂಗ್ರಹ ಮಾತ್ರವಲ್ಲ. ನಾವು ಜೀವನದ ಜ್ಯೋತಿಯಿಂದ ಆಲೋಕಿತಗೊಂಡ ಪ್ರಾಣಿಯೆಂಬ ತಥ್ಯದ ಮೇಲೂ ನಮ್ಮ ಗಮನ ಹರಿಯುತ್ತದೆ.

ಡಿ. ಎನ್. ಶ್ರೀನಾಥ್

ಫಲ ಸಮೃದ್ಧಿಯಿಂದ ಮರಗಳು ಬಗ್ಗುವಂತೆ, ಸಂಪತ್ಸಮೃದ್ಧಿಯಿಂದ ಸಜ್ಜನರು ನಿಗರ್ವಿಗಳಾಗಿ, ವಿನಯಶೀಲರಾಗಿರುತ್ತಾರೆ.

—ಕಾಳಿದಾಸ

ಅನ್ಯಾಯದಿಂದ ಸಂಪಾದಿಸುವುದಕ್ಕಿಂತ ಕೆಟ್ಟದ್ದು ಬೇರಾವುದೂ ಇಲ್ಲ.

—ಡೆಮೋಕ್ರೈಟಿಸ್

ಜೀನುಗಳು ಜಿಗಿಯುತ್ತವೆ!

ವಿಜ್ಞಾನದ ಇತಿಹಾಸವನ್ನು ಅವಲೋಕಿಸಿದರೆ, ಕೆಲವು ಹೊಸ ಸಂಶೋಧನೆಗಳು ನಮ್ಮ ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡಿರುವದು ನಮಗೆ ಕಂಡು ಬರುತ್ತದೆ. ಕೋಪರ್ನಿಕಸನ ಸೂರ್ಯಕೇಂದ್ರವಾದ, ನ್ಯೂಟನ್ನನ ಗುರುತ್ವ ಸಿದ್ಧಾಂತ, ಐನ್‌ಸ್ಟೈನನ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ಇತ್ಯಾದಿಗಳು ಅವರವರ ಕಾಲದಲ್ಲಿ ಕ್ರಾಂತಿಯನ್ನು ಎಬ್ಬಿಸಿದವು. ಜೀವಶಾಸ್ತ್ರದಲ್ಲಿ ಡಾರ್ವಿನ್‌ನ ವಿಕಾಸವಾದ ಹಾಗೂ ಮೆಂಡೆಲನ ಅನುವಂಶೀಯತೆಯ ನಿಯಮಗಳೂ ಅವರ ಸಮಕಾಲೀನರಲ್ಲಿ ಮಾನಸಿಕ ತುಮುಲವನ್ನುಂಟುಮಾಡಿದವು. ಮಾನವನ ವಿಚಾರಧಾರೆ ಆಯಾ ಕಾಲಕ್ಕೆ ತಕ್ಕಂತೆ, ಆಯಾ ಕಾಲದ ವಿಜ್ಞಾನಿಗಳ ಸಂಶೋಧನೆಗಳಿಗೆ ಅನುಗುಣವಾಗಿ ಬದಲಾಗುತ್ತಾ ಬಂದಿದೆ. ಇದೀಗ ವಿಜ್ಞಾನಿಗಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ಇಂತಹದೇ ಕ್ರಾಂತಿಯನ್ನೆಬ್ಬಿಸುವ ಅಥವಾ ನಮ್ಮ ಇದುವರೆಗಿನ ಕಲ್ಪನೆಗಳನ್ನು ದೂರ ಮಾಡುವ ಶಕ್ತಿಯುಳ್ಳ ಹೊಸ ಆವಿಷ್ಕಾರವೊಂದು ತಳಿವಿಜ್ಞಾನದಲ್ಲಿ ಹೊರಬಂದಿದೆ. ಈ ಸಂಶೋಧನೆಯ ಪ್ರಕಾರ ಅನುವಂಶೀಯತೆಯ ಘಟಕಗಳಾದ ಜೀನುಗಳು ಜಿಗಿಯುತ್ತವೆ.

೧೯೮೩ರ ವೈದ್ಯಕೀಯ ವಿಭಾಗದ ನೊಬೆಲ್ ಪಾರಿತೋಷಕವನ್ನು ಅಮೆರಿಕೆಯ ೮೧ ವರ್ಷ ವಯಸ್ಸಿನ ವೃದ್ಧ ಮಹಿಳೆ ಶ್ರೀಮತಿ ಬಾರ್ಬರಾ ಮೆಕ್ಲಿಂಟಾಕ್ ಅವರಿಗೆ ನೀಡಲಾಗಿದೆ. ಕ್ಯಾರೊಲಿನ್ಸ್ಕ ಸಂಶೋಧನಾ ಸಂಸ್ಥೆಯಲ್ಲಿ ಇಂದಿಗೂ ಕೆಲಸ ಮಾಡುತ್ತಿರುವ ಈಕೆಯ ಸಂಶೋಧನೆಯ ವಿಷಯ "ಜಿಗಿಯುವ ಜೀನುಗಳು."

ಜೀವ ವಿಜ್ಞಾನದ ಅದರಲ್ಲಿಯೂ ತಳಿಶಾಸ್ತ್ರದ ವಿಶೇಷತೆಯೆಂದರೆ ಕೆಲವು ಅತಿಮುಖ್ಯವಾದ ಸಂಶೋಧನೆಗಳಿಗೆ, ಅವು ಪ್ರತಿಪಾದಿಸಲ್ಪಟ್ಟ ತತ್‌ಕ್ಷಣ ಮನ್ನಣೆ ಸಿಗದಿರುವದು. ತಳಿವಿಜ್ಞಾನದ ಉದಯಕ್ಕೆ ಕಾರಣೀಭೂತನಾದ ಮೆಂಡೆಲನ ಸಂಶೋಧನೆಗಳು ೧೮೬೫ರಲ್ಲಿಯೇ ಪ್ರತಿಪಾದಿಸಲ್ಪಟ್ಟವು. ದುರದೃಷ್ಟವಶಾತ್ ಅವುಗಳಿಗೆ ಆಗ ಮನ್ನಣೆ ದೊರೆಯಲಿಲ್ಲ. ಅವು ಪ್ರತಿಪಾದನೆಯಾದ ೩೫ ವರ್ಷಗಳ ತರುವಾಯ ಅಥವಾ ಮೆಂಡೆಲ್ ಸತ್ತು ಹದಿನಾರು ವರ್ಷಗಳಾದ ತರುವಾಯ ನಡೆದ ಕೆಲವು ಸಂಶೋಧನೆಗಳು ಮೆಂಡೆಲನ ನಿಯಮಗಳನ್ನು ಹೋಲುತ್ತಿದ್ದವು. ಆತ ಸತ್ತ ೧೬ ವರ್ಷಗಳ ಬಳಿಕ ವಿಜ್ಞಾನ ಪ್ರಪಂಚ ಆತನನ್ನು "ತಳಿಶಾಸ್ತ್ರದ ಜನಕ" ಎಂದು ಕರೆದು ಗೌರವಿಸಿತು.

ಬಾರ್ಬರಾ ಮೆಕ್ಲಿಂಟಾಕರ ಸಂಶೋಧನೆಗಳೂ ಹಾಗೆಯೇ ಆದವು. ಜೋಳದ

ಗಡಗಳಲ್ಲಿ ಜಿಗಿಯುವ ಜೀನುಗಳಿರುತ್ತವೆ ಎಂಬ ಸಂಗತಿಯನ್ನು ಈಕೆ ೧೯೫೦ರಷ್ಟು ಹಿಂದೆಯೇ ಕಂಡುಹಿಡಿದರು. ಅವರ ಸಂಶೋಧನೆಯ ಮಹತ್ವವನ್ನು ಅಂದಿನ ವಿಜ್ಞಾನಿಗಳು ಅರಿಯಲಿಲ್ಲ. ಇನ್ನೊಂದು ದೃಷ್ಟಿಯಲ್ಲಿ ಹೇಳುವದಾದರೆ ಅವರ ಸಮಕಾಲೀನ ವಿಜ್ಞಾನಿಗಳು ಆಗಿನ ಕೆಲವು ಸಂಶೋಧನೆಗಳಿಂದ ಬಹಳಷ್ಟು ಪ್ರಭಾವಿತರಾಗಿ ಮೆಕ್ಲಿಂಟಾಕ್‌ರ ಸಂಶೋಧನೆಗಳ ಮಹತ್ವವನ್ನು ಅರಿಯುವ ಪ್ರಯತ್ನ ಮಾಡಲಿಲ್ಲ ಅಥವಾ ಅರಿಯುವಷ್ಟು ವಿಶಾಲಮನೋಭಾವ ಅವರಲ್ಲಿರಲಿಲ್ಲ. ಅದೃಷ್ಟವಶಾತ್ ಇತ್ತೀಚಿನ ದಿನಗಳಲ್ಲಿ ಅಂದರೆ ೧೯೭೦ರ ತರುವಾಯ ನಡೆದ ಕೆಲವು ನಾಟಕೀಯ ಸಂಶೋಧನೆಗಳು 'ಜಿಗಿಯುವ ಜೀನು'ಗಳ ಅಸ್ತಿತ್ವಕ್ಕೆ ಸಾಕಷ್ಟು ಪುಷ್ಟಿ ನೀಡಿದವು. ತತ್ಪರಿಣಾಮವಾಗಿ ಬಾರ್ಬರಾ ಮೆಕ್ಲಿಂಟಾಕ್‌ರಿಗೆ ಅವರು ಮಧ್ಯ ವಯಸ್ಸಿನಲ್ಲಿ ನಡೆಸಿದ ಸಂಶೋಧನೆಗಳಿಗೆ ಮುದಿವಯಸ್ಸಿನಲ್ಲಿ ನೊಬೆಲ್ ಪಾರಿತೋಷಿಕವು ಬರುವುದು ಸಾಧ್ಯವಾಯಿತು. ನೊಬೆಲ್ ಪಾರಿತೋಷಿಕವನ್ನು ದೊರಕಿಸಿಕೊಳ್ಳುವ ಶಕ್ತಿಹೊಂದಿದ ಈ ಜಿಗಿಯುವ ಜೀನುಗಳ ಪ್ರಾಮುಖ್ಯ ಏನು ಎಂಬುದನ್ನು ನೋಡೋಣ.

ತಳಿ ವಿಜ್ಞಾನದ ಅಧ್ಯಯನ ೧೯೦೦ರಲ್ಲಿ ಮೆಂಡೆಲನ ಅನುವಂಶೀಯ ನಿಯಮಗಳು ಪುನರ್‌ಪ್ರತಿಪಾದನೆಯಾದಾಗ, ಪ್ರಾರಂಭವಾಯಿತು. ಅನುವಂಶೀಯತೆ ಕುರಿತು ಅಧ್ಯಯನ ಮಾಡುವದು ಈ ಶಾಸ್ತ್ರದ ಮೂಲ ಉದ್ದೇಶ. ಜೀವವಿಜ್ಞಾನದ ಈ ಭಾಗ ಪ್ರಾರಂಭವಾದುದು ತಡವಾಗಿಯಾದರೂ ಮುಂದೆ ವಿಜ್ಞಾನಿಗಳು ಸತತ ಅಧ್ಯಯನದಿಂದ ಹಲವಾರು ವಿಷಯಗಳನ್ನು ಕಂಡುಕೊಂಡರು. ಅನುವಂಶೀಯ ಗುಣಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ತಂದೆತಾಯಿಗಳ ವೀರ್ಯಾಣು ಹಾಗೂ ಅಂಡಾಣುಗಳ ಮುಖಾಂತರ ಸಾಗಿ ಹೋಗುತ್ತವೆ. ತಂದೆತಾಯಿಗಳು ತಮ್ಮ ಸಂತಾನಕ್ಕೆ ಅನುವಂಶೀಯ ಗುಣಗಳನ್ನು ಸಮವಾಗಿ ಹಂಚುತ್ತಾರೆ ಅಥವಾ ಮಕ್ಕಳು ತಮ್ಮ ತಂದೆತಾಯಿಗಳಿಂದ ಕ್ರಮವಾಗಿ ಸಮ ಅರ್ಧ ಅನುವಂಶೀಯಗುಣಗಳನ್ನು ಪಡೆಯುತ್ತಾರೆ. ಈ ಅನುವಂಶೀಯಗುಣಗಳು 'ಕಣ' ರೂಪದಲ್ಲಿರುತ್ತವೆ ಇವನ್ನು "ಜೀನು" ಅಥವಾ "ಗುಣಾಣು" ಎಂದು ಕರೆಯಲಾಯಿತು. ಒಂದೊಂದು ಅನುವಂಶೀಯ ಗುಣವನ್ನು ಒಂದೊಂದು ಜೀನು ನಿರ್ಧರಿಸುತ್ತದೆ. ಉದಾಹರಣೆಗೆ ಮಾನವನಲ್ಲಿ ಮೂಗಿನ ಉದ್ದ, ಕಣ್ಣಿನ ಆಕಾರ, ಕೂದಲಿನ ಆಕಾರ, ಬಣ್ಣ ಇತ್ಯಾದಿ ಪ್ರತಿಗುಣವನ್ನೂ ಬೇರೆ ಬೇರೆ ಜೀನುಗಳು ನಿರ್ಧರಿಸುತ್ತವೆ. ೧೯೫೩ರಲ್ಲಿ ಜೀನಿನ ನಿಜರೂಪ ತಿಳಿಯಿತು. ವಾಸ್ತವವಾಗಿ ರಾಸಾಯನಿಕ ವಸ್ತುವಿನ ರೂಪದಲ್ಲಿ

ಜೀನುಗಳಿರುತ್ತವೆ ಎಂದು ತೋರಿಸಲಾಯಿತು ಪ್ರತಿಯೊಂದು ಜೀನು ಕೂಡ ನ್ಯೂಕ್ಲಿಯೋಟೈಡುಗಳೆಂಬ ಸಾರಜನಕಯುಕ್ತ ಕ್ಷಾರಗಳನ್ನು ಹೊಂದಿರುತ್ತದೆ. ಇಂಥ ಹಲವಾರು ನ್ಯೂಕ್ಲಿಯೋಟೈಡುಗಳು ಒಂದಕ್ಕೊಂದು ಜೋಡಿಸಲ್ಪಟ್ಟು ಉದ್ದವಾದ ಎರಡೆಳೆಯ ಸರಪಣಿಯಂತಿರುತ್ತವೆ. ಒಂದು ಎಳೆಯ ಪ್ರತಿಯೊಂದು ಕ್ಷಾರವೂ ಇನ್ನೊಂದು ಎಳೆಯಲ್ಲಿರುವ ಅದರಪೂರಕ ಕ್ಷಾರದ ಜೊತೆ ಜಲಜನಕ ಬಂಧದಿಂದ ಕೂಡಿಕೆಗೊಂಡಿರುತ್ತದೆ. ಈ ಎರಡೂ ಸರಣಿಗಳು ಸೇರಿ ಉದ್ದವಾದ ತಿರುಗಣೆಯಂತಿರುತ್ತವೆ. ಇದಕ್ಕೆ ಡಿಆಕ್ಸಿರೈಬೊ ನೂಕ್ಲಿಯರ್ ಆಮ್ಲ ಎಂದು ಹೆಸರು. ಹಲವಾರು ಜೀನುಗಳು ಸೇರಿಕೊಂಡು ಡಿಎನ್‌ಎ ಉದ್ದವಾದ ಅದರಿ ಅತಿಸೂಕ್ಷ್ಮ ಎಳೆಯಂತೆ ಇರುತ್ತದೆ. ಅದರ ಉದ್ದ ಎಷ್ಟೆಂದರೆ ಮಾನವನ ಕೋಶವೊಂದರ ಎಲ್ಲ ಜೀನುಗಳನ್ನು ಸೇರಿಸಿದರೆ ಅದರ ಒಂದು ತುದಿ ಹಿಮಾಲಯದಲ್ಲೂ ಇನ್ನೊಂದು ತುದಿ ಕನ್ಯಾಕುಮಾರಿಯಲ್ಲೂ ಇರುತ್ತವೆ. ಇಂತಿದ್ದರೂ ಡಿಎನ್‌ಎ ದೃಷ್ಟಿಗೋಚರವಲ್ಲ. ಇಷ್ಟೆಲ್ಲ ಜೀನುಗಳನ್ನು ಸೇರಿಸಿದರೆ ಗುಂಡುಸೂಜಿಯ ಮೊನೆಯೊಂದರಷ್ಟಾಗುವದಿಲ್ಲ.

ಡಿಎನ್‌ಎಯ ಸಾರಜನಕ ಕ್ಷಾರಸರಣಿ ಅನುವಂಶೀಯ ಸಂಕೇತವನ್ನು ನಿರ್ಧರಿಸುತ್ತದೆ. ನಿರ್ದಿಷ್ಟ ಜೀನಿನ ಸಾರಜನಕ ಕ್ಷಾರಗಳ ಸರಣಿ ನಿರ್ದಿಷ್ಟ ವಾಗಿದ್ದು ಅದು ನಿರ್ದಿಷ್ಟ ಸಂಕೇತವನ್ನು ನೀಡುತ್ತದೆ. ಪ್ರತಿಯೊಂದು ಜೀವಿಯ ಜೀನುಗಳು ನಿರ್ದಿಷ್ಟ ರೀತಿಯಲ್ಲಿ ನಿರ್ದಿಷ್ಟ ಸರಣಿಯಲ್ಲಿ, ನಿರ್ದಿಷ್ಟ ಸ್ಥಾನದಲ್ಲಿ ಕ್ರೊಮೋಸೋಮು ಅಥವಾ ವರ್ಣತಂತುಗಳ ಮೇಲೆ ಜೋಡಿಸಲ್ಪಟ್ಟಿರುತ್ತವೆ. ಈ ವರ್ಣತಂತುಗಳ ಸಂಖ್ಯೆಯೂ ಪ್ರತಿ ಪ್ರಭೇದಕ್ಕೆ ನಿರ್ದಿಷ್ಟವಾಗಿರುತ್ತದೆ. ಅಂದರೆ ಒಂದೇ ವರ್ಣತಂತುವಿನಲ್ಲಿ ಹಲವಾರು ಜೀನುಗಳು ಇದ್ದು ಅವು ನಿರ್ದಿಷ್ಟ ಸರಣಿಯಲ್ಲಿ ಜೋಡಿಸಲ್ಪಟಿರುತ್ತವೆ. ಇವಕ್ಕೆ ಸಂಲಗ್ನತೆ ಎಂದು ಹೆಸರು. ಉದಾಹರಣೆಗೆ ಮಾನವನಲ್ಲಿ ೨೩ ಜೊತೆ ವರ್ಣತಂತುಗಳಿದ್ದು ಒಟ್ಟು ಜೀನುಗಳ ಸಂಖ್ಯೆ ೧೫೦೦೦ಕ್ಕೂ ಮಿಕ್ಕಿರುತ್ತವೆ. ಈ ಎಲ್ಲ ೧೫೦೦೦ ಜೀನು ಗಳೂ ೨೩ ವರ್ಣತಂತುಗಳಲ್ಲಿ ಕ್ರೋಢೀಕರಿಸಲ್ಪಟ್ಟಿರುತ್ತವೆ. ಇದುವರೆಗಿನ ಸಂಶೋಧನೆಗಳ ಪ್ರಕಾರ ಒಂದು ಜೀನಿನ ಸ್ಥಾನ ಹಾಗೂ ಕಾರ್ಯವಿಧಾನ ಕ್ರಮವಾಗಿ ಅವಿಯೋಜನೆ ಹಾಗೂ ವಿಕೃತಿಗಳಿಂದ ಬದಲಾಗಬಲ್ಲವೇ ಹೊರತು ಇನ್ನಾವ ಸಂದರ್ಭದಲ್ಲಿಯೂ ಅದು ಬದಲಾಗದು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಜೀನು ಚಲಿಸುತ್ತದೆ ಎಂದು ಜೀವಶಾಸ್ತ್ರಜ್ಞ ಕನಸಿನಲ್ಲಿಯೂ ಎಣಿಸುತ್ತಿರಲಿಲ್ಲ. ಕೋಶ ವಿಭಜನೆ ಹೊಂದಿದಾಗ ಆಕೋಶದಲ್ಲಿರುವ ಜೀನು

ಗಳೂ ವರ್ಣತಂತುಗಳೂ ವಿಭಜನೆ ಹೊಂದುತ್ತವೆ. ಹೀಗೆ ವಿಭಜನೆಯಾಗಿ, ಮರಿ ಕೋಶಗಳು ಅಥವಾ ಮರಿಜೀವಿಯೊಂದು ಉದ್ಭವಿಸಿದರೂ ಆಯಾ ಜೀನು ಆಯಾಸ್ಥಾನದಲ್ಲಿಯೇ ಇರುತ್ತವೆ ಎಂಬುದು ತಳಿಶಾಸ್ತ್ರಜ್ಞನ ಊಹೆಯಾಗಿತ್ತು. ಬಾರ್ಬರಾ ಮೆಕ್ಲಿಂಟಾಕರ ಸಂಶೋಧನೆಗಳು ಈ ಎಲ್ಲ ಊಹೆಗಳನ್ನು ಮಗುಚಿ ಗುಂಪಾಗುವಂತೆ ಮಾಡಿದವು.

ಬಾರ್ಬರಾ ಮೆಕ್ಲಿಂಟಾಕರು ಮೊತ್ತಮೊದಲಿಗೆ ಜೋಳದ ಗಿಡಗಳಲ್ಲಿ ಜಿಗಿಯುವ ಜೀನುಗಳನ್ನು ಕಂಡುಹಿಡಿದರಾದರೂ ಅವುಗಳ ನಿರ್ದಿಷ್ಟ ಅಸ್ತಿತ್ವವನ್ನು ಬ್ಯಾಕ್ಟೀರಿಯಾ ಮತ್ತು ವೈರಸ್ಸುಗಳಂಥ ಸೂಕ್ಷ್ಮ ಜೀವಿಗಳಲ್ಲಿ ತೋರಿಸಲಾಯಿತು. ಈ ಜೀವಿಗಳಲ್ಲಿ ಜೀನುಗಳು ಸೇರಿಕೊಂಡು ವೃತ್ತಾಕಾರದ ವರ್ಣತಂತುಗಳನ್ನು ಹೊಂದಿರುತ್ತವೆ. ಈ ಬ್ಯಾಕ್ಟೀರಿಯಾಗಳ ವರ್ಣತಂತುಗಳಿಗೆ ಯಾವುದೇ ರೀತಿಯ ಹೊರ ಹೊದಿಕೆಯೂ ಇರುವುದಿಲ್ಲ. ಒಂದು ಬ್ಯಾಕ್ಟೀರಿಯಾದಲ್ಲಿ ಸುಮಾರು ೩೦೦೦ ದಿಂದ ೪೦೦೦ ಜೀನುಗಳಿರುತ್ತವೆ ಎಂದು ತೋರಿಸಲಾಗಿದೆ. ವೈರಸ್ಸುಗಳ ವರ್ಣತಂತುಗಳೂ ಬ್ಯಾಕ್ಟೀರಿಯಾದ ವರ್ಣತಂತುಗಳಂತೆಯೇ ಇದ್ದು ಅವುಗಳಲ್ಲಿ ೧೫೦ ರಿಂದ ೫೦೦ ಜೀನುಗಳಿರುತ್ತವೆ. ಬ್ಯಾಕ್ಟೀರಿಯಾ ಹಾಗೂ ವೈರಸ್ಸುಗಳು ಒಂದೇ ಒಂದು ವರ್ಣತಂತುವನ್ನು ಹೊಂದಿದ್ದು, ಅವುಗಳಲ್ಲಿ ಎಲ್ಲ ಜೀನುಗಳೂ ಅಡಕವಾಗಿರುತ್ತವೆ. ಈ ಜೀವಿಗಳಲ್ಲಿ ಜಿಗಿಯುವ ಜೀನುಗಳಿರುತ್ತವೆ ಎಂದರೆ ಈ ಎಲ್ಲ ಜೀನುಗಳೂ ಜಿಗಿಯುತ್ತವೆ ಎಂದರ್ಥವಲ್ಲ. ಇದುವರೆಗೆ ಬ್ಯಾಕ್ಟೀರಿಯಾ ಹಾಗೂ ವೈರಸ್ಸುಗಳಲ್ಲಿ ಐದು ಜೀನುಗಳು ಜಿಗಿಯುತ್ತವೆ ಎಂದು ತೋರಿಸಲಾಗಿದೆ. ಆ ಜೀವಿಯ ಉಳಿದ ಎಲ್ಲ ಜೀನುಗಳೂ ತಳಿಶಾಸ್ತ್ರಜ್ಞನ ಹಿಂದಿನ ಕಲ್ಪನೆಯಂತೆಯೇ ಇದ್ದು, ಆ ಜೀವಿಯ ಎಲ್ಲಾ ಕಾರ್ಯಕಗಳನ್ನೂ, ಸಾಮಾನ್ಯ ರೀತಿಯಲ್ಲಿಯೇ ನಿಯಂತ್ರಿಸುತ್ತವೆ. ಈ ಜಿಗಿಯುವ ಜೀನುಗಳು ಮಾತ್ರ ಆಗಾಗ ಸ್ಥಾನ ಪಲ್ಲಟಗೊಳ್ಳುತ್ತಿರುತ್ತವೆ.

ಜಿಗಿಯುವ ಜೀನುಗಳು ಆ ಜೀವಿಯ ವರ್ಣತಂತುವಿನ ವಿಭಜನೆಯಾಗುವುದರೊಂದಿಗೆ ಸ್ವತಂತ್ರವಾಗಿ ಕೂಡ ವಿಭಜನೆ ಹೊಂದಬಲ್ಲವು. ಹೀಗೆ ವಿಭಜನೆಯಾದಾಗ ಜಿಗಿಯುವ ಜೀನು ದ್ವಿಗುಣಗೊಳ್ಳುತ್ತದೆ. ಈ ವಿಭಜನೆಯಿಂದ ಉಂಟಾದ ಹೊಸ ಜಿಗಿಯುವ ಜೀನು ಅದೇ ವರ್ಣತಂತುವಿನ ಇನ್ನೊಂದು ಸ್ಥಾನದಲ್ಲಿ ಸೇರಿಕೊಳ್ಳುತ್ತದೆ. ಹೀಗೆ ಅದು ಇನ್ನೊಂದು ಸ್ಥಾನಕ್ಕೆ ಚಲಿಸಿ ಕೂಡಿಕೊಂಡರೆ ಹೊಸ ಸ್ಥಾನದಲ್ಲಿರುವ ಹಾಗೂ ಅದರ ಸುತ್ತಮುತ್ತ ಇರುವ ಸಾಮಾನ್ಯ ಜೀನುಗಳು ವಿಕೃತಿ ಹೊಂದುತ್ತವೆ. ವಿಕೃತಿಗಳನ್ನು ಹೊಂದಿದ

ಜೀವಿ ಅಸಾಮಾನ್ಯಗುಣಗಳನ್ನು ಪಡೆಯುತ್ತದೆ. ನೈಸರ್ಗಿಕವಾಗಿ ಕೂಡ ವಿಕೃತಿಗಳು ಉದ್ಭವಿಸುವವಾದರೂ ಜಗಿಯುವ ಜೀನುಗಳಿಂದ ಉದ್ಭವಿಸುವ ವಿಕೃತಿಗಳು ನೈಸರ್ಗಿಕ ವಿಕೃತಿಗಳಿಗಿಂತ ಭಿನ್ನವಾಗಿರುತ್ತವೆ. ಕೆಲವೊಮ್ಮೆ ಸಾಮಾನ್ಯ ಜೀನು ಕ್ರಿಯಾ ಹೀನವಾಗುವ ಸಾಧ್ಯತೆಗಳೂ ಇರುತ್ತದೆ.

ಸೂಕ್ಷ್ಮ ಜೀವಿಗಳಲ್ಲಿ ಜಗಿಯುವ ಜೀನುಗಳು ಸುಮಾರು ೭೦೦ ರಿಂದ ೧೪೦೦ ಸಾರಜನಕಯುಕ್ತ ಕ್ಷಾರಗಳನ್ನು ಹೊಂದಿರುತ್ತವೆ ಎಂದು ತೋರಿಸಲಾಗಿದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದರೆ ಎಲ್ಲ ಜಗಿಯುವ ಜೀನುಗಳೂ ಒಂದೇ ರೀತಿಯಲ್ಲಿದ್ದು ಅವು ಸಾಮಾನ್ಯ ಜೀನುಗಳನ್ನು ಹೋಲುವದು ಕಂಡುಬರುತ್ತದೆ. ಅವು ಒಂದು ಸ್ಥಾನದಿಂದ ವರ್ಣತಂತುವಿನ ಇನ್ನೊಂದು ಸ್ಥಾನಕ್ಕೆ ಚಲಿಸಿ ಆ ಸ್ಥಳದಲ್ಲಿ ವರ್ಣತಂತುವಿನೊಂದಿಗೆ ಸಂಯೋಗ ಹೊಂದಲು ಅವಶ್ಯವಾದ ಕಿಣ್ವಗಳನ್ನು ತಾವೇ ತಯಾರಿಸಿಕೊಳ್ಳಬಲ್ಲವು. ಜಗಿಯುವ ಜೀನು ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಿದಾಗ ಹೊಸ ಸ್ಥಾನದಲ್ಲಿರುವ ಸಾಮಾನ್ಯ ಜೀನಿನ ಹಾಗೂ ಅದರ ಸುತ್ತಮುತ್ತಲಿನ ಜೀನುಗಳ ಸಾರಜನಕ ಕ್ಷಾರ ಸರಣಿಯಲ್ಲಿ ಬದಲಾವಣೆಯಾಗುತ್ತದೆ. ಈ ಕ್ಷಾರಗಳೇ ಅನುವಂಶೀಯತೆಯ ಸಂಕೇತಗಳನ್ನು ನಿರ್ಧರಿಸುವದರಿಂದ, ಜಗಿಯುವ ಜೀನುಗಳು ಅವುಗಳ ಹೊಸಸ್ಥಾನದಲ್ಲಿಯೂ ಅಥವಾ ಜಗಿಯುವ ಜೀನೊಂದು ದ್ವಿಗುಣಗೊಳ್ಳದೇ ಹಳೆಯ ಸ್ಥಾನವನ್ನು ಬಿಟ್ಟು ಹೊಸಸ್ಥಾನ ಸೇರಿದರೆ, ಅದರ ಹೊಸ ಸ್ಥಾನ ಹಾಗೂ ಹಳೆಯ ಸ್ಥಾನ ಹೀಗೆ ಎರಡೂ ಕಡೆಗಳಲ್ಲಿ ಸಾರಜನಕ ಕ್ಷಾರ ಸರಣಿಯಲ್ಲಿ ಬದಲಾವಣೆಯಾಗುವದರಿಂದ ಅವುಗಳ ಅನುವಂಶೀಯತೆಯ ಸಂಕೇತಗಳಲ್ಲಿ ಬದಲಾವಣೆಯಾಗುತ್ತದೆ. ಹೀಗೆ ಅನವಂಶೀಯತೆಯ ಸಂಕೇತವಲ್ಲಿ ಬದಲಾವಣೆಯಾದಾಗ ಸಾಮಾನ್ಯ ಜೀನುಗಳು ನಿಷ್ಕ್ರಿಯುವಾಗುತ್ತವೆ ಇಲ್ಲವೆ ವಿಕೃತಿಗಳನ್ನು ಹೊಂದುತ್ತವೆ. ಜಗಿಯುವ ಜೀನುಗಳು ಇರುವದರಿಂದ ಆ ಜೀವಿಯಲ್ಲಿ ಇಷ್ಟೇ ಪರಿಣಾಮವಾಗುತ್ತಿದ್ದರೆ ಮೆಕ್ಲಿಂಟಾಕ್‌ಗೆ ನೊಬೆಲ್ ಪ್ರಶಸ್ತಿಯೂ ಬರುತ್ತಿರಲಿಲ್ಲ ಹಾಗೂ ಅವರ ಸಂಶೋಧನೆಗಳಿಗೆ ಮಹತ್ವವೂ ಇರುತ್ತಿರಲಿಲ್ಲ.

ಕೆಲವು ಬ್ಯಾಕ್ಟೀರಿಯಾ ಹಾಗೂ ವೈರಸ್ಸುಗಳು ಮಾನವನಲ್ಲಿ ಹಾಗೂ ಉಳಿದ ಪ್ರಾಣಿಗಳಲ್ಲಿ ರೋಗಗಳನ್ನುಂಟುಮಾಡುತ್ತವೆ. ಈ ರೋಗಗಳನ್ನು ತಡೆಗಟ್ಟಲು ನಾವು ಪ್ರತಿ ಜೈವಿಕಗಳನ್ನು ತಗೆದುಕೊಳ್ಳುತ್ತೇವೆ. ಸಾಮಾನ್ಯವಾಗಿ ಈ ಸೂಕ್ಷ್ಮ ಜೀವಿಗಳು ಪ್ರತಿಜೈವಿಕಗಳಿಗೆ ಸಂವೇದಿತ್ವ ಹೊಂದಿದ್ದು ನಾವು ಔಷಧಿ ಸೇವಿಸಿದಾಗ ಅವುಗಳ ಬೆಳವಣಿಗೆ ಕುಂದಿ ಅವು ಸಾಯುತ್ತವೆ. ಆಗ

ರೋಗ ವಾಹಿಯಾಗುತ್ತದೆ. ಈ ಎಲ್ಲ ಸೂಕ್ಷ್ಮಜೀವಿಗಳಲ್ಲಿ ಪ್ರತಿಜೈವಿಕಗಳಿಗೆ
ಸಂವೇದಿತ್ವವನ್ನು ಅವುಗಳ ಜೀನುಗಳು ನಿರ್ಧರಿಸುತ್ತವೆ. ಜಿಗಿಯುವ ಜೀನು
ಗಳು ಈ ಸೂಕ್ಷ್ಮಜೀವಿಗಳಲ್ಲಿ ಪ್ರತಿಜೈವಿಕಗಳಿಗೆ ಸಂವೇದಿತ್ವವನ್ನು ನೀಡುವ
ಜೀನುಗಳ ಮಧ್ಯೆ ಅಥವಾ ಅವುಗಳ ಪಕ್ಕದಲ್ಲಿ ಸೇರಿಕೊಂಡರೆ ಸಂವೇದಿತ್ವವನ್ನು
ನೀಡುವ ಜೀನುಗಳು ವಿಕಾರಗೊಳ್ಳುತ್ತವೆ. ಇಲ್ಲಿಯೇ ವಿಕೃತಿ ಹೊಂದುತ್ತವೆ.
ಆಗ ಪ್ರತಿಜೈವಿಕಗಳು ಕೆಲಸ ಮಾಡಲಾರವು. ಜಿಗಿಯುವ ಜೀನುಗಳಿಂದ ಈ
ರೋಗಾಣುಗಳು ಪ್ರತಿಜೈವಿಕಗಳನ್ನು ನಿಗ್ರಹಿಸುವ ಶಕ್ತಿಯನ್ನು ಪಡೆಯುತ್ತವೆ.
ಆಗ ನಾವು ತೆಗೆದುಕೊಳ್ಳುವ ಆಂಪಿಸಿಲಿನ್, ಸ್ಟ್ರೆಪ್ಟೊಮೈಸಿನ್, ಕ್ಲೋರೊಮ್
ಫೆನಿಕಾಲ್, ಟೆಟ್ರಾಸೈಕ್ಲಿನ್ ಕೆನಾಮೈಸಿನ್ ಇತ್ಯಾದಿಗಳು ಕೆಲಸಮಾಡ
ಲಾರವು. ಆದ್ದರಿಂದ ಮೆಕ್ಲಿಂಟಾಕ್‌ರವರ ಸಂಶೋಧನೆಗಳಿಗೆ ವೈದ್ಯಕೀಯ
ವಿಜ್ಞಾನದಲ್ಲಿ ಬಹಳ ಪ್ರಾಮುಖ್ಯ ಇದೆ.

ಬಹುಕಣ ಜೀವಿಗಳಲ್ಲಿ ಇದುವರೆಗೆ ಜೋಳದ ಗಿಡಗಳಲ್ಲಿ, ಡ್ರೊಸಾಫಿಲಾ
ನೊಣಗಳಲ್ಲಿ, ಕ್ಯಾಲಿಕ್ಸ್ ಪೊಳ್ಳೆಗಳಲ್ಲಿ ಹಾಗೂ ಮೊಗಾಸೀಲಿಯ ಎಂಬ ನೊಣ
ಗಳಲ್ಲಿ ಜಿಗಿಯುವ ಜೀನುಗಳು ಇವೆ ಎಂದು ಕಂಡುಹಿಡಿಯಲಾಗಿದೆ.
ಕ್ಯಾಲಿಪ್ರಿಟಾ ಎಂಬಾತ (೧೯೮೩) ಮಾನವನಲ್ಲಿಯೂ ಜಿಗಿಯುವ ಜೀನುಗಳು
ಇರುತ್ತವೆಎಂದು ತೋರಿಸಿದಾನೆ. ಬಹುಕಣಜೀವಿಗಳಲ್ಲಿ ವರ್ಣತಂತುಗಳು ಜೀನು
ಗಳೊಂದಿಗೆ ಇತರ ಪೊದಿಕೆಗಳನ್ನು ಹೊಂದಿರುತ್ತವೆ. ಆದ್ದರಿಂದ ಈ ಜೀವಿಗಳಲ್ಲಿ
ಜಿಗಿಯುವ ಜೀನುಗಳು ವರ್ಣತಂತುವಿನ ಒಳಭಾಗದಿಂದ ಹೊರಬಂದು ಅದೇ
ವರ್ಣತಂತುವಿನ ಇನ್ನೊಂದು ಸ್ಥಾನದಲ್ಲಿ ಅಥವಾ ಅದೇ ಕೋಶದ ಬೇರೊಂದು
ವರ್ಣತಂತುವಿನೊಂದಿಗೆ ಸಂಯೋಗ ಹೊಂದಬೇಕಾಗುತ್ತದೆ. ಆದರೂ ಈ
ಕ್ರಿಯೆಗೆ ಅವಶ್ಯವಾದ ಎಲ್ಲ ವಸ್ತುಗಳನ್ನೂ ಜಿಗಿಯುವ ಜೀನು ಸಂಶ್ಲೇಷಿಸಿ
ಕೊಳ್ಳುತ್ತದೆ. ಬಹುಕಣ ಜೀವಿಗಳಲ್ಲಿ ಜಿಗಿಯುವ ಜೀನು ಸುಮಾರು ೫೦೦೦
ದಿಂದ ೭೦೦೦ ಸಾರಜನಕ ಕ್ಷಾರಗಳನ್ನು ಹೊಂದಿರುತ್ತವೆ. ಈ ಜೀವಿಗಳ
ಜಿಗಿಯುವ ಜೀನುಗಳು ಉದ್ದದಲ್ಲಿ ಬ್ಯಾಕ್ಟೀರಿಯಾ ಮತ್ತು ವೈರಸ್ಸುಗಳ
ಜಿಗಿಯುವ ಜೀನುಗಳಿಗಿಂತ ಹೆಚ್ಚಾಗಿದ್ದರೂ ರಚನೆಯಲ್ಲಿ ಅವುಗಳಂತೆಯೇ
ಇರುತ್ತವೆ. ಬಹುಕಣ ಜೀವಿಗಳಲ್ಲಿನ ಜಿಗಿಯುವ ಜೀನುಗಳು ವಿಕೃತಿಗಳನ್ನು
ಉತ್ಪತ್ತಿಮಾಡುವುದರಿಂದ ಇವನ್ನು ವಿಕೃತಿಕಾರಕ ಜೀನುಗಳು ಎಂದೇ ಕರೆಯು
ತ್ತಾರೆ. ಜಿಗಿಯುವ ಜೀನುಗಳು ಬಹುಕಣ ಜೀವಿಗಳಲ್ಲಿ ಹಲವಾರು ರೀತಿಯ
ವಿಕೃತಿಗಳನ್ನೂ ಹೆಣ್ಣುಗಳಲ್ಲಿ ಬಂಜೆತನವನ್ನೂ ತರಬಲ್ಲವು.

ಬಹುಕಣ ಜೀವಿಗಳು ತಮ್ಮ ಜೀವನವನ್ನು ಜೈಗೋಟುಗಳೆಂಬ ಏಕಕೋಶ ಹಂತದಿಂದ ಪ್ರಾರಂಭಿಸುತ್ತವೆ. ಈ ಜೈಗೋಟು ಅಂಡಾಣು ಹಾಗೂ ವೀರ್ಯಾಣುಗಳ ಸಂಯೋಗದಿಂದ ಉದ್ಭವಿಸುತ್ತದೆ. ಈ ಒಂದು ಕೋಶ ಬೆಳವಣಿಗೆಯಾಗುವಾಗ ವಿಭಜನೆ ಹೊಂದುತ್ತ ಲಕ್ಷಾಂತರ ಕೋಶಗಳಿರುವ ಪ್ರಬುದ್ಧ ಜೀವಿಯೊಂದನ್ನು ನಿರ್ಮಿಸುತ್ತದೆ. ಪ್ರಬುದ್ಧ ಜೀವಿಯ ಎಲ್ಲ ಕೋಶಗಳಲ್ಲಿಯೂ ಆ ಜೀವಿಯಲ್ಲಿರುವ ಎಲ್ಲ ಜೀನುಗಳ ಒಂದೊಂದು ಪ್ರತಿಯಿರುತ್ತದೆ. ಆದರೆ ಪ್ರಬುದ್ಧ ಜೀವಿಯ ವಿವಿಧ ಕೋಶಗಳು ಆಕಾರ, ಗಾತ್ರ ಹಾಗೂ ಕಾರ್ಯವಿಧಾನಗಳಲ್ಲಿ ಭಿನ್ನವಾಗಿರುತ್ತವೆ. ಜೀವಿ ಬೆಳೆಯುವಾಗ ಅದರ ವಿವಿಧ ಕೋಶಗಳು ವಿಭೇದನೆಯನ್ನು ಹೊಂದುತ್ತ ಹೋಗಿ ಪ್ರಬುದ್ಧ ಜೀವಿಯಲ್ಲಿ ವಿವಿಧ ಅಂಗಾಂಶ, ಅಂಗ, ಅಂಗವ್ಯೂಹಗಳಾಗಿ ಮಾರ್ಪಡುತ್ತವೆ. ಈ ವಿಭೇದನೆಗೆ ಕಾರಣ ಅವುಗಳ ಜೀನುಗಳು. ಬೆಳವಣಿಗೆಯಾಗುವಾಗ ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಕೋಶಗಳಲ್ಲಿ ಅವಶ್ಯಕವಿದ್ದ ಜೀನುಗಳಷ್ಟೆ ಕೆಲಸಮಾಡು ತ್ತಿರುತ್ತವೆ. ಉಳಿದ ಜೀನುಗಳು ತಾತ್ಕಾಲಿಕವಾಗಿ ನಿಷ್ಕ್ರಿಯವಾಗಿದ್ದು ತಮ್ಮ ಸರದಿ ಕಾಯುತ್ತಿರುತ್ತವೆ. ಬಹುಕಣ ಜೀವಿಗಳಲ್ಲಿ ಸಾಮಾನ್ಯ ಜೀನುಗಳ ಕ್ರಿಯಾವಿಧಾನ ಜಿಗಿಯುವ ಜೀನುಗಳು ನಿಯಂತ್ರಿಸುತ್ತವೆ ಎಂದು ಊಹಿಸ ಲಾಗಿದೆ. ಜಿಗಿಯುವ ಜೀನುಗಳು ಸಾಮಾನ್ಯ ಜೀನುಗಳನ್ನು ನಿಷ್ಕ್ರಿಯವನ್ನಾಗಿ ಮಾಡುತ್ತವೆ ಎಂಬ ತಿಳುವಳಿಕೆಯಿಂದ ಇವನ್ನು ಊಹಿಸಲಾಗಿದೆ. ಈ ಊಹೆ ನಿಜವಾದರೆ ವಿಪರ್ಯಯ ವಿಭೇದನೆ ಎನ್ನಿಸಿಕೊಂಡಿರುವ ಕ್ಯಾನ್ಸರ್ ನಂತಹ ಭಯಂಕರ ರೋಗಗಳನ್ನೂ ತಡೆಗಟ್ಟಲು ಜಿಗಿಯುವ ಜೀನುಗಳು ಸಹಕಾರಿ ಯಾಗಬಹುದು.

ಡಾರ್ವಿನ್ನನ ವಿಕಾಸವಾದದ ತಿರುಳು ವೈವಿಧ್ಯ. ಇದು ನೈಸರ್ಗಿಕವಾಗಿ ಆಗಾಗ ಜೀನುಗಳು ವಿಕೃತಿಹೊಂದುವುದರಿಂದ ಉಂಟಾಗುತ್ತದೆ. ಕೆಲವು ಬಾರಿ ಅವಿಯೋಜನೆಯಂಥ ವರ್ಣತಂತುವಿನ ಸ್ಥಿತಿಗಳಿಂದಲೂ ಉಂಟಾಗುತ್ತದೆ. ಆದರೆ ನೈಸರ್ಗಿಕ ವಿಕೃತಿಗಳಾಗಲೀ ಅವಿಯೋಜನೆಯಾಗಲೀ ಜೀವ ಸಂಚಯದಲ್ಲಿ ಅಪರೂಪಕ್ಕೆ ಉದ್ಭವಿಸುತ್ತವೆ. ಅಂದರೆ ಲಕ್ಷ ಜೀವಿಗಳಲ್ಲಿ ಒಂದು ಜೀವಿ ಒಂದು ಜೀನು ವಿಕೃತಿಯನ್ನು ಹೊಂದುತ್ತದೆ. ಈ ವಿಕೃತಿ ಉಪಯುಕ್ತವಾದರೆ ನಿಸರ್ಗ ದಲ್ಲಿ ಉಳಿಯುತ್ತದೆ. ಅನುಪಯುಕ್ತ ವಿಕೃತಿಗಳು ನಶಿಸುತ್ತವೆ. ಹೀಗೆ ಹಲವಾರು ವಿಕೃತಿಗಳು ಉದ್ಭವಿಸಿ ಅವು ಜೀವಸಂಚಯದಲ್ಲಿ ಸೇರುತ್ತ ಹೋದಂತೆ ವೈವಿಧ್ಯವೂ ಹೆಚ್ಚುತ್ತ ಹೋಗುತ್ತವೆ. ವೈವಿಧ್ಯ ಗರಿಷ್ಠಮಟ್ಟ ತಲುಪಿ ಒಂದು ಪ್ರಭೇದದ

ವಿಧ ಸಂಚಯಗಳು ಬೇರೆ ಬೇರೆಯಾದಾಗ ಅವು ಹೊಸ ಪ್ರಭೇದಗಳೆಂದು ರಿಗಣಿಸಲ್ಪಡುತ್ತವೆ. ಆದ್ದರಿಂದ ಹೊಸ ಪ್ರಭೇದವೊಂದು ಭೂಮಿಯ ಮೇಲೆ ದಯವಾಗುವದಕ್ಕೆ ಲಕ್ಷಾಂತರ ವರ್ಷಗಳು ಹಿಡಿಯುತ್ತವೆ. ಈಗಿನ ಸಂಶೋಧನೆಗಳ ಪ್ರಕಾರ ಜಿಗಿಯುವ ಜೀನುಗಳು ಅಧಿಕ ಪ್ರಮಾಣದಲ್ಲಿ ವಿಕೃತಿಳನ್ನು ಉತ್ಪತ್ತಿಮಾಡುತ್ತವೆ. ನೈಸರ್ಗಿಕ ವಿಕೃತಿಗಳು ಸ್ಥಿರ ವಿಕೃತಿಗಳಾದರೆ ಜಿಗಿಯುವ ಜೀನುಗಳಿಂದ ಉದ್ಭವಿಸುವ ವಿಕೃತಿಗಳು ಅಸ್ಥಿರವಾದವು. ಏನೇ ದರೂ ಅಧಿಕಪ್ರಮಾಣದಲ್ಲಿ ಉದ್ಭವಿಸುವ ಈ ವಿಕೃತಿಗಳು ಜೀವಿಯ ವಿಕಾಸದ ಹಾದಿಯನ್ನು ತಿರುಗಿಸಬಲ್ಲವೇ? ಎಂಬುದು ಈಗ ಜೀವ ವಿಜ್ಞಾನಿಗಳ ಜಿಜ್ಞಾಸೆ. ಈ ಪ್ರಶ್ನೆಗೆ ಉತ್ತರ ಹೌದು ಎಂದಾದರೆ ನೂರಾರು ವರ್ಷಗಳಿಂದ ಚರ್ಚಿಸಲ್ಪಟ್ಟು ಇತ್ತೀಚೆಗೆ ನಿರ್ದಿಷ್ಟ ಮಾನ್ಯತೆ ದೊರಕಿಸಿಕೊಂಡಿರುವ ಡಾರ್ವಿನ್‌ನ ವಿಕಾಸ ವಾದ ಮುರಿದು ಬೀಳುವ ಸಾಧ್ಯತೆಯಿದೆ.

ಡಾ|| ಎಸ್. ಎನ್. ಹೆಗಡೆ



ಕಣ್ಣಿಲ್ಲದವನಿಗೆ ಕನ್ನಡಿಯಿಂದ ಉಪಯೋಗವಿಲ್ಲ; ಸ್ವತಃ ತಿಳಿವಿಲ್ಲದವನಿಗೆ ಶಾಸ್ತ್ರದಿಂದ ಉಪಯೋಗವಿಲ್ಲ.

—ಚಾಣಕ್ಯ

ಉಪದೇಶವನ್ನು ಕೊಡುವಷ್ಟು ಧಾರಾಳವಾಗಿ ಜನರು ಬೇರೆ ಏನನ್ನೂ ಕೊಡುವುದಿಲ್ಲ.

—ರೋಚೆಫೌಕಾಲ್

ಪುಸ್ತಕ ವಿಮರ್ಶೆ

ಸೂರ್ಯ ನಮಸ್ಕಾರ; ತತ್ತ್ವ ಮತ್ತು ಆಚರಣೆ—ಲೇಖಕರು: 'ತಿರುಕ' ಪ್ರಕಾಶಕರು: ಅನಾಥ ಸೇವಾಶ್ರಮ ಟ್ರಸ್ಟ್, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ. ಬಾಳಬೆಳಕು ಸಾಹಿತ್ಯಮಾಲೆ—೪೫. ಡಮ್ಮಿ xi+೪೪. ಬೆಲೆ: ರೂ. ೬. ದ್ವಿತೀಯ ಮುದ್ರಣ ೧೯೭೯.

'ಮಲ್ಲಾಡಿಹಳ್ಳಿ ಸ್ವಾಮೀಜಿ' ಎಂಬ ಹೆಸರಿನಿಂದ ಕರ್ನಾಟಕದ ಜನತೆಗೆ ಚಿರಪರಿಚಿತರಾಗಿರುವ ಅನಾಥ ಸೇವಾಶ್ರಮದ ಸಂಸ್ಥಾಪಕ ಅಧ್ಯಕ್ಷರೂ ಯೋಗಾಚಾರ್ಯರೂ ನೈಷ್ಠಿಕ ಬ್ರಹ್ಮಚಾರಿಗಳೂ ತಪಸ್ವಿಗಳೂ ಘನ ವಿದ್ವಾಂಸರೂ ವಿರಕ್ತರೂ ಆದ ಶ್ರೀ ರಾಘವೇಂದ್ರಸ್ವಾಮೀಜಿಯವರು 'ತಿರುಕ' ಎಂಬ ಕಾವ್ಯನಾಮದಲ್ಲಿ ನಲವತ್ತೈದಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಪ್ರಸ್ತುತ ಪುಸ್ತಕದಲ್ಲಿ (೧) ಪೂರ್ವಸಿದ್ಧತೆ, (೨) ಆಸನವಿಧಿ, (೩) ಆಹಾರಾದಿ ನಿಯಮಗಳು ಮತ್ತು (೪) ಉಪಾಸನೆ ಎಂಬ ನಾಲ್ಕು ಅಧ್ಯಾಯಗಳಲ್ಲಿ ಯೋಗಿಕ ಸೂರ್ಯನಮಸ್ಕಾರದ ಬಗ್ಗೆ ಅಗತ್ಯವಾದ ಎಲ್ಲ ಮಾಹಿತಿಗಳನ್ನೂ ಒದಗಿಸಿದ್ದಾರೆ.

ಪ್ರಾರಂಭದ 'ಆತ್ಮನಿವೇದನೆ' ಎಂಬ ಶೀರ್ಷಿಕೆಯಲ್ಲಿ ಲೇಖಕರು ತಮ್ಮ ಪರಿಚಯವನ್ನಿತ್ತಿದ್ದಾರೆ. ಬಾಲ್ಯದಲ್ಲಿ ರೋಗದ ಮುದ್ದೆಯೇ ಆಗಿದ್ದ ಇವರು ಸಾಧನೆಯಿಂದ ಹೇಗೆ ವಜ್ರಕಾಯರಾದರೆಂಬುದರ ರಹಸ್ಯವನ್ನು ಬಯಲು ಮಾಡಿದ್ದಾರೆ. ಈ 'ಆತ್ಮಾನಿವೇದನೆ'ಯೇ ವಾಚಕರಿಗೆ ಸೂರ್ಯನಮಸ್ಕಾರದ ಬಗ್ಗೆ ಸ್ಫೂರ್ತಿ ನೀಡುವಂತಿದೆ.

ನಂತರ 'ಅವತರಣಿಕೆ'ಗೆ ಅಧ್ಯಾಯದ ಸಂಖ್ಯೆಯನ್ನು ಕೊಡದಿದ್ದರೂ ಅದೊಂದು ಅಧ್ಯಾಯವೇ ಆಗಿದೆ. ಸೂರ್ಯ ನಮಸ್ಕಾರದ ಪ್ರಾಚೀನತೆ ಮತ್ತು ಉದ್ದೇಶದ ಬಗ್ಗೆ ಸಂಗ್ರಹವಾಗಿ ತಿಳಿಸಿದ್ದಾರೆ. ಕೇವಲ ದೇಹಸ್ವಾಸ್ಥ್ಯ ಕ್ಕಾಗಿಯೇ ಅಲ್ಲ; ಮಾನಸಿಕ ಶಕ್ತಿ ಸಂವರ್ಧನೆಗೂ ಸೂರ್ಯನಮಸ್ಕಾರ ಅತ್ಯಗತ್ಯ ಎಂಬ ಅಂಶವನ್ನು ಮನಗಾಣಿಸಿದ್ದಾರೆ. "ಶರೀರಮಾದ್ಯಂ ಖಲುಧರ್ಮ ಸಾಧನಂ" ಎಂದು ಪ್ರಾರಂಭಿಸಿ, "ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂಬುದನ್ನೂ ಅದರ ಜತೆಗೆ ಮೇಳವಿಸಿದ್ದಾರೆ. ಸೂರ್ಯನಮಸ್ಕಾರದಿಂದ ಆಪಾದಮಸ್ತಕದವರೆಗೆ ದೇಹದ ಎಲ್ಲ ಭಾಗಗಳಿಗೂ ವ್ಯಾಯಾಮವು ದೊರೆಯು ವುದರ ಜತೆಗೆ ಸೂರ್ಯೋಪಾಸನೆಯ ಭಾಗ್ಯವೂ ಲಭಿಸುತ್ತದೆ. ಒಟ್ಟಿನಲ್ಲಿ

ಇಹಪರಗಳೆರಡರ ಸಾಧನೆಯೂ ಸೂರ್ಯನಮಸ್ಕಾರದಿಂದ ಲಭ್ಯವೆಂಬುದನ್ನು ತಿಳಿಸಿದ್ದಾರೆ. ಇದು ಯಥಾರ್ಥವೂ ಹೌದು.

ಅಲ್ಲದೆ ಸೂರ್ಯಸ್ನಾನ, ವರ್ಣಚಿಕಿತ್ಸೆಯ ಬಗ್ಗೆಯೂ ಸಂಕ್ಷಿಪ್ತ ಮಾಹಿತಿಯನ್ನು ಒದಗಿಸಿದ್ದಾರೆ. ಸೂರ್ಯನಮಸ್ಕಾರದ ಸಂಯೋಜನೆಯಲ್ಲಿ ನಮ್ಮ ಪ್ರಾಚೀನರ ಚಾತುರ್ಯವನ್ನು ಕೊಂಡಾಡಿದ್ದಾರೆ. ಸೂರ್ಯನಮಸ್ಕಾರವನ್ನು ಜಾತಿ, ಮತ, ಲಿಂಗ, ವಯೋಧರ್ಮಗಳ ಭೇದವಿಲ್ಲದೆ ಅವರವರ ಶಕ್ತಿಗನುಸಾರವಾಗಿ ಎಲ್ಲರೂ ಆಚರಿಸಬಹುದೆಂಬುದನ್ನು ತೋರಿಸಿದ್ದಾರೆ. ಅಲ್ಲದೆ ಸೂರ್ಯನಮಸ್ಕಾರದಲ್ಲಿ ಕೇವಲ ದೈಹಿಕ ಪ್ರಕ್ರಿಯೆಗೆ ಬದಲಾಗಿ ಭಕ್ತಿ ಮತ್ತು ಶ್ರದ್ಧೆಗಳಿಗೆ ಹೆಚ್ಚು ಗಮನ ಕೊಡಬೇಕೆಂದಿದ್ದಾರೆ.

ಸೂರ್ಯನಮಸ್ಕಾರ ಪದ್ಧತಿಯಲ್ಲಿ ಹಲವು ಭೇದಗಳಿರುವುದನ್ನು ಹೇಳಿದ್ದರೂ ತಮ್ಮ ಮಾರ್ಗವೇ ಸರಿ ಎಂಬ ವಾದವನ್ನು ಮಾಡಿಲ್ಲ. ಭಾರತದಲ್ಲಿರುವ ಯೋಗಾಚಾರ್ಯರುಗಳು ಒಂದೆಡೆ ಸೇರಿ 'ಇದಮಿತ್ಥಂ' ಎಂಬ ನಿರ್ಣಯಕ್ಕೆ ಬರುವುದು ಸೂಕ್ತವೆಂಬ ತಮ್ಮ ನಮ್ರ ಸೂಚನೆಯನ್ನು ಮುಂದಿಟ್ಟಿದ್ದಾರೆ.

'ಪೂರ್ವ ಸಿದ್ಧತೆ' ಎಂಬ ಅಧ್ಯಾಯದಲ್ಲಿ ಹೆಸರೇ ಸೂಚಿಸುವಂತೆ ಸೂರ್ಯನಮಸ್ಕಾರಕ್ಕೆ ಪ್ರಶಸ್ತಕಾಲ, ಸ್ಥಳ ಇವುಗಳ ಬಗ್ಗೆ ತಿಳಿಸಿದ್ದಾರೆ. ಎಲ್ಲಿ ನೋಡಿದರೂ ಲೇಖಕರಿಗೆ ಉಪಾಸನೆಯ ಬಗ್ಗೆಯೇ ಹೆಚ್ಚಿನ ಒಲವು ಇರುವಂತೆ ತೋರುತ್ತದೆ. ಇದು ಕೇವಲ ಅಪೇಕ್ಷಣೀಯ ಮಾತ್ರವಲ್ಲ; ಅತ್ಯಗತ್ಯ.

ಎರಡನೇ ಅಧ್ಯಾಯವಾದ 'ಆಸನವಿಧಿ'ಯಲ್ಲಿ ಸೂರ್ಯನಮಸ್ಕಾರವನ್ನು ಮಾಡುವ ಕ್ರಮವನ್ನು ವಿಧಿವತ್ತಾಗಿ, ಸರಳವಾಗಿ ವಿವರಿಸಿದ್ದಾರೆ. ಸೂರ್ಯನಮಸ್ಕಾರದ ವಿಧಿಯನ್ನು ಸಂಗೀತಸ್ವರಗಳ ಆರೋಹಣ ಅವರೋಹಣಗಳಿಗೆ ಹೋಲಿಸಿರುವುದು ಆಚಾರ್ಯರು ನಾದೋಪಾಸಕರೆಂಬುದನ್ನು ಸೂಚಿಸುತ್ತದೆ. ಕೊನೆಯಲ್ಲಿ ಏಕಾಗ್ರತೆಯ ಬಗ್ಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ.

ಮೂರನೇ ಅಧ್ಯಾಯವಾದ 'ಆಹಾರಾದಿ ನಿಯಮ'ಗಳು ಎಂಬಲ್ಲಿ ಸಾಧಕನಿಗೆ ಯಾವ ಆಹಾರ ವರ್ಜ್ಯ ಹಾಗೂ ಯಾವುದು ಸೇವ್ಯ ಎಂಬುದನ್ನು ತಿಳಿಸಿದ್ದಾರೆ. ಹೀಗೆ ತಿಳಿಸುವಲ್ಲಿ ಬಹಳ ಎಚ್ಚರಿಕೆ ವಹಿಸಿದ್ದಾರೆ. ಸಾಮಾನ್ಯವಾಗಿ ಯೋಗಾಸನ ಹಾಗೂ ಸೂರ್ಯನಮಸ್ಕಾರಗಳನ್ನು ಮಾಡುವವರು ಇಂತಿಷ್ಟೇ ಹಾಲು ಕುಡಿಯಬೇಕು, ಇಂತಿಂತಹ ಪೌಷ್ಟಿಕ ಆಹಾರವನ್ನೇ ಸೇವಿಸಬೇಕು ಎಂದು ಕಡ್ಡಾಯ ಮಾಡುವುದುಂಟು. ಆದರೆ ಲೇಖಕರು ಇದನ್ನು ಬದಿಗೊತ್ತಿ "ನಾವು ತಿನ್ನುವ ನಿತ್ಯದ ಸಾಮಾನ್ಯ ಆಹಾರದಲ್ಲೇ ಅಷ್ಟೇ ಇಷ್ಟೇ ಜೀವ

ಶಕ್ತಿ ಇದ್ದೇ ಇದೆ. ಅದನ್ನಷ್ಟು ಪಚನಮಾಡಿ ರಕ್ತಗತ ಮಾಡಿಕೊಂಡರೆ ಅದೇ ಎಷ್ಟೋ ಸಾಕು" ಎಂದು ಹೇಳಿರುವುದು ಶ್ರೀಸಾಮಾನ್ಯನೂ ಸೂರ್ಯ ನಮಸ್ಕಾರ ಮಾಡಲು ಪ್ರೋತ್ಸಾಹಿಸುತ್ತದೆ. ಅವರ ಉದ್ದೇಶವೂ ಸಹ ಇದೇ ಆಗಿದೆ. ಕೇವಲ ಶ್ರೀಮಂತರೇ ಅಲ್ಲ; ಬಡವರೂ ಸಹ ಸಾಧಕರಾಗಬೇಕೆಂಬುದೇ ಲೇಖಕರ ಹೆಬ್ಬಯಕೆಯಾಗಿದೆ.

ಅಂತ್ಯಾಧ್ಯಾಯವಾದ 'ಉಪಾಸನೆ'ಯು ನಿಜಕ್ಕೂ ಅನ್ವರ್ಥವಾಗಿದೆ. ಇಲ್ಲಿ ಸೂರ್ಯನ ದ್ವಾದಶನಾಮಗಳನ್ನು ಕೊಡುವುದರ ಜತೆಗೆ ಸೂರ್ಯಾಷ್ಟೋತ್ತರ ಶತನಾಮಾವಳಿಯನ್ನು ಕೊಟ್ಟಿದ್ದಾರೆ. ಅಲ್ಲದೆ ಸೂರ್ಯಸಂಬಂಧವಾದ ಕೆಲವು ಸ್ತೋತ್ರಗಳು, ಆದಿತ್ಯಹೃದಯ, ತ್ರಿಚಕಲ್ಪ ಸೂರ್ಯನಮಸ್ಕಾರವಿಧಿ, ಶ್ರೀ ಹಂಸಕಲ್ಪೋಕ್ತ ನಮಸ್ಕಾರ ವಿಧಿಗಳನ್ನು ಸೇರಿಸಿರುವುದು ಅವರ ಉಪಾಸನಾ ಮನೋಧರ್ಮವನ್ನು ಸೂಚಿಸುವುದಲ್ಲದೆ ಸಾಧಕರಿಗೆ ಬಹು ಉಪಯುಕ್ತ ವಾಗಿದೆ.

ಎಲ್ಲಕ್ಕಿಂತಲೂ ಮಿಗಿಲಾಗಿ ಗಮನಿಸಬೇಕಾದ ಅಂಶವೆಂದರೆ ಪ್ರತಿಯೊಂದು ಆಸನಸ್ಥಿತಿಗೂ ಆಚಾರ್ಯರೇ ಸ್ವಯಂ ಭಾವಚಿತ್ರವನ್ನಿತ್ತಿದ್ದಾರೆ. ಇದರಿಂದ ಅಭ್ಯಾಸಿಗಳಿಗೆ ತಾವು ಹೇಗೆ ಸೂರ್ಯನಮಸ್ಕಾರ ಮಾಡಬೇಕೆಂಬುದರ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸುತ್ತದೆ. ಚಿತ್ರಗಳು ಬಹು ಸ್ಪಷ್ಟವಾಗಿ ಹಾಗೂ ಅಂದವಾಗಿ ಮುದ್ರಿತವಾಗಿದೆ.

ಒಟ್ಟಿನಲ್ಲಿ ಸೂರ್ಯನಮಸ್ಕಾರವನ್ನು ಶಾಸ್ತ್ರೀಯವಾಗಿ ಆಚರಿಸಬೇಕೆನ್ನು ವವರಿಗೆ ಗುರುವಿನ ಸ್ಥಾನದಲ್ಲಿ ನಿಲ್ಲುತ್ತದೆ ಈ ಕಿರುಹೊತ್ತಿಗೆ. ನಮ್ಮ ಪ್ರಾಚೀನ ಅನುಷ್ಠಾನಗಳಿಗೆ ಶಾಸ್ತ್ರೋಕ್ತವಾದ ಪುಸ್ತಕವೊಂದರ ಕೊರತೆಯನ್ನು ಆಚಾರ್ಯರು ನೀಗಿರುವುದು ಸ್ತುತ್ಯಾರ್ಹ.

ಯೋಗಾಚಾರ್ಯ ಕೆ. ಕೇಶವಮೂರ್ತಿ

* * *

ನೀಲಾಂಬಿಕ (ನಾಟಕ)—ಲೇಖಕರು: ಬಿ. ಎ. ಸನದಿ; ಪ್ರಕಾಶಕರು: ಸಂಗಮ ಪ್ರಕಾಶನ, ಮುಂಬಯಿ, ಪ್ರಥಮ ಮುದ್ರಣ: ೧೯೮೨ ; ಬೆಲೆ: ರೂ. ೫-೦೦.

ಬಸವಣ್ಣನವರ ಕಡೆಗಾಲದ ಬದುಕಿನ ಚಿತ್ರಣ ಈ ನಾಟಕದ ವಸ್ತು. ಎಂಟು ದೃಶ್ಯಗಳಲ್ಲಿ ನಾಟಕ ಬೆಳೆದು ನಿಂತಿದೆ. ಕಲ್ಯಾಣದಲ್ಲಿ ನಡೆದ ಘಟನೆ ಗಳಿಂದ ಮನನೊಂದ ಬಸವಣ್ಣ ಕೂಡಲ ಸಂಗಮಕ್ಕೆ ಹೊರಟು ನಿಂತಿರುವ

ಸಂದರ್ಭದಿಂದ ನಾಟಕ ಆರಂಭವಾಗಿದೆ. ಇಡೀ ನಾಟಕದುದ್ದಕ್ಕೆ ಒತ್ತುಬಿದ್ದಿರುವುದು ನೀಲಾಂಬಿಕೆಯ ಪಾತ್ರದ ಮೇಲೆ. ನಾಟಕದಲ್ಲಿ ಅನೇಕ ಪಾತ್ರಗಳು ಕಾಣಿಸಿಕೊಂಡರೂ ನೀಲಾಂಬಿಕೆ, ಬಸವಣ್ಣ, ಹಡಪದ ಅಪ್ಪಣ್ಣ—ಈ ಮೂರು ಪಾತ್ರಗಳು ಬಹುಮುಖ್ಯವಾಗುತ್ತವೆ. ನಾಟಕದ ಕೇಂದ್ರ ಪಾತ್ರ ನೀಲಾಂಬಿಕೆಯದಾದುದರಿಂದ ಆಕೆಯ ಜೀವನ ವಿವರಗಳನ್ನು ಸಿಂಹಾವಲೋಕನ ಕ್ರಮದಲ್ಲಿ ಹೇಳಲಾಗಿದೆ. ಬಸವಣ್ಣನವರು ನೀಲಾಂಬಿಕೆಯನ್ನು ಕೈಹಿಡಿದ ಸಂದರ್ಭದ ಚಿತ್ರಣದಿಂದ ನೀಲಾಂಬಿಕೆಯ ಬದುಕಿನ ಕಥೆ ಆರಂಭಗೊಂಡಿದೆ. ನೀಲಾಂಬಿಕೆ ಬಸವಣ್ಣನವರನ್ನು ಮನಸಾರ ಒಪ್ಪಿ ಮದುವೆಯಾದವಳು. ದೊರೆಯ (ಬಿಜ್ಜಳನ) ತಂಗಿಯಾದರೂ ಶ್ರೀಮಂತಿಕೆಯ ಅಹಂ ಲವಲೇಶವೂ ಇಲ್ಲದ ಸಾಧ್ವಿ. ತನ್ನ ಬದುಕನ್ನು ಪತಿ ಬಸವಣ್ಣನವರ ಬದುಕಿನ ಹಾದಿಯಲ್ಲಿ ಸವೆಸಿದವಳು. ಇದ್ದೊಬ್ಬ ಕಂದನನ್ನು ನಡಂತರದಲ್ಲಿ ಕಳೆದುಕೊಂಡ ನಿರ್ಭಾಗ್ಯೆ. ಕಡೆಗೆ ಗಂಡನೂ ದೂರವಾದಾಗ ತಾನು ನಂಬಿದ್ದ ಕಾಯಕದಲ್ಲಿ ಬದುಕಿನ ಗುರಿಯನ್ನು ಕಂಡುಕೊಂಡವಳು. ಒಂದರ್ಥದಲ್ಲಿ ಆಕೆಯ ಬದುಕು ಕೂಡ ದುರಂತದ್ದು. ಆ ದುರಂತದ ನಿರೂಪಣೆಯೇ ಈ ನಾಟಕದ ಕೇಂದ್ರ ಬಿಂದು.

ಬಸವಣ್ಣನವರ ಜೀವನದ ಅಂತ್ಯ ಹೇಗಾಯಿತು ಎಂಬುದಕ್ಕೆ ಚರಿತ್ರೆಯಲ್ಲಿ ಎಲ್ಲೂ ಸರಿಯಾದ ಆಧಾರಗಳು ದೊರೆಯುವುದಿಲ್ಲ. ಇನ್ನುಳಿದ ಯಾವುದೇ ಆಧಾರಗಳು ಕಲ್ಪನೆಯಲ್ಲಿ ಅರಳಿವೆ; ಪುರಾಣಗಳಾಗಿವೆ. ಅಸ್ಪಷ್ಟತೆ ಈ ಎಲ್ಲ ಆಧಾರಗಳನ್ನು ಆವರಿಸಿದೆ. ಕಲ್ಯಾಣದಲ್ಲಿ ನಡೆದ ಎಲ್ಲ ಘಟನೆಗಳಿಗೆ, ದುರಂತಗಳಿಗೆ ಬಿಜ್ಜಳನೇ ಹೊಣೆಗಾರ ಎಂಬುವ ಅಭಿಪ್ರಾಯವನ್ನು ಈ ನಾಟಕದಲ್ಲಿ ಬಸವಣ್ಣನವರು ತಾಳುತ್ತಾರೆ. ಆದರೆ ಈ ಧೋರಣೆ ಎಷ್ಟರಮಟ್ಟಿಗೆ ವಸ್ತುನಿಷ್ಠವಾದುದು? ಕಲ್ಯಾಣದಲ್ಲಿ ನಡೆದ ಯಾವುದೇ ಘಟನೆಗಳಿಗೆ ಕೇವಲ ಬಿಜ್ಜಳನಾಗಲಿ, ಬಸವಣ್ಣನವರಾಗಲೀ ಕಾರಣರಲ್ಲ; ಕಾಲಪರಿಸ್ಥಿತಿ ಕಾರಣ. ಬಸವಣ್ಣ ಬಯಸಿದ ಸಮಾಜದ ನಿರ್ಮಾಣಕ್ಕೆ ಸಮುದಾಯ ಇಡಿಯಾಗಿ ಸಿದ್ಧವಿರಲಿಲ್ಲ. ಆಗಿನ ವ್ಯವಸ್ಥೆ ಕೂಡ ಅದನ್ನು ಬಯಸಿರಲಿಲ್ಲ. ಹಾಗಾಗಿ ಇಂಥ ಹೊತ್ತಿನಲ್ಲಿ ಸಂಘರ್ಷ ಅನಿವಾರ್ಯವಾದದ್ದು. ಅದನ್ನು ಒಬ್ಬ ಇಬ್ಬ ವ್ಯಕ್ತಿಯ ಹೆಸರಿಗೆ ಕಟ್ಟುವುದು ಅಷ್ಟೊಂದು ಸಮಂಜಸವಾಗಲಾರದು. ಹೋರಾಟದ ಮುಂಚೂಣಿಯಲ್ಲಿದ್ದ ಬಸವಣ್ಣನವರ ನಿಯಂತ್ರಣವನ್ನೂ ಮೀರಿ ಘಟನೆಗಳು ಘಟಿಸಿದಾಗ ಅವರು ಅಸಹಾಯಕರಾದರು. ಆದರೆ ಅವರು ಕಲ್ಯಾಣವನ್ನು ಬಿಟ್ಟು ಕೂಡಲ ಸಂಗಮಕ್ಕೆ ಹೋದುದರಲ್ಲಿ, ಅವರು ಅಲ್ಲಿ ಆತ್ಮಹತ್ಯೆಮಾಡಿ

ಕೊಳ್ಳಲು ಯೋಚಿಸಿದರು ಎಂಬುದರಲ್ಲಿ ಯಾವ ಪುರುಷಾರ್ಥವಿದೆ? ಈ ಯಾವುದೇ ಪ್ರಶ್ನೆಗಳನ್ನು ನಾಟಕ ಎತ್ತುವುದಿಲ್ಲ, ನಾಟಕಕಾರರು ಪರಂಪರೆಗೇ ಕಟ್ಟುಬಿದ್ದು ಬರೆದುದರಿಂದ ಹೊಸ ಸಾಧ್ಯತೆಗಳನ್ನು ಕಾಣುವುದಕ್ಕೆ, ಕಡೆಯ ಪಕ್ಷ ಹೊಸ ಅಲೋಚನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ನಾಟಕದ ಒಟ್ಟು ರಚನೆಯೇನೋ ಚೆನ್ನಾಗಿದೆ. ಸಂಭಾಷಣೆಗಳಲ್ಲಿ ಲವಲವಿಕೆಯಿದೆ, ಅಲ್ಲಲ್ಲಿ ಮೂಲ ವಚನಗಳನ್ನು ಬಳಸಿಕೊಂಡು ಸಂಭಾಷಣೆಗಳನ್ನು ನೇಯ್ದಿರುವುದರಿಂದ ಇಂಥ ಮಾತುಗಳು ಆ ಕಾಲದ ಪರಿಸರವನ್ನು ಸೃಷ್ಟಿಸುವಲ್ಲಿ ತುಂಬ ನೆರವಾಗಿವೆ. ನಾಟಕಕ್ಕೆ ಯಾವುದೇ ರೀತಿಯಲ್ಲಿ ಅರ್ಥ ತುಂಬದ ೫ನೆಯ ಮತ್ತು ೭ನೆಯ ದೃಶ್ಯಗಳ ಅವಶ್ಯಕತೆಯಿರಲಿಲ್ಲ. ವಸ್ತುನಿಷ್ಠತೆಗಿಂತ ಭಾವುಕತೆಗೆ ಹೆಚ್ಚು ಒತ್ತುಬಿದ್ದಿರುವುದರಿಂದ ನಾಟಕ ರಂಜನೀಯವಾಗಿದೆ. ಹಾಗಾಗಿ ಅದು ನಮ್ಮನ್ನು ಆಲೋಚನೆಗೆ ಈಡುಮಾಡುವುದಿಲ್ಲ.

ಕೃಷ್ಣ ಹಾಸನ



ಯಾವ ವ್ಯಕ್ತಿಗೆ ಕಟ್ಟುವ ಶಕ್ತಿ ಇಲ್ಲವೊ ಅವನಿಗೆ ಹಾಳು ಮಾಡುವ ಅಧಿಕಾರವೂ ಇಲ್ಲ.

—ರವೀಂದ್ರನಾಥ ಠಾಕೂರ್

ಜನಾಪವಾದಕ್ಕೆ ಮಣಿಯದ, ಗುಣ-ದೋಷಗಳನ್ನು ಕಾಣುವ ರೀತಿ ದುರಾಚಾರಿಗಳ ತಂತ್ರ ಊಹಾತೀತವಾದುದು.

—ಭಾರವಿ

ಅಕಾರಣವಾದ ಕೋಪ, ಲಾಭವಿಲ್ಲದ ಮಾತು, ಶತ್ರುವಿನಲ್ಲಿ ವಿಶ್ವಾಸ, ಇವು ದಡ್ಡನ ಲಕ್ಷಣಗಳು.

—ಅರಬ್ ಗಾದೆ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyer Manager Karnataka State Adult Education Council P and Published by Karnataka State Adult Education Cou Mysore city (India)